02 July 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಚಿಂತೆಯೆನ್ನುವುದು ನಾಳಿನ ಸಮಸ್ಯೆಯನ್ನು ಬಗೆಹರಿಸುವುದಿಲ್ಲ, ಇಂದಿನ ನೆಮ್ಮದಿಯನ್ನು ಕಸಿಯುತ್ತದೆ!

-ಸ್ನೇಹಾ ಆನಂದ್

info.varthaman@gmail.com



ನಗರಸಭೆ ವ್ಯಾಪ್ತಿಯ ಅಭಿವೃದ್ಧಿಗೆ 770 ಕೋಟಿ ರೂ ಅನುದಾನಕ್ಕೆ ಮನವಿ — ಪುಟ ಸಂ. 2


ಹುಲಿ ಸೆರೆಗೆ ಸಾಕಾನೆಗಳಿಂದ ಕೂಂಬಿಂಗ್ ಕಾರ್ಯಾಚರಣೆ — ಪುಟ ಸಂ. 3


ಮತದಾರರ ಪಟ್ಟಿ ಪರಿಷ್ಕರಣೆ ಕುರಿತ ಜಾಗೃತಿ ಜಾಥಾ — ಪುಟ ಸಂ. 4


9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 213 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಚಾಮುಂಡಿ ಬೆಟ್ಟದಲ್ಲಿ ಆಷಾಢ ಉತ್ಸವಕ್ಕೆ ಸಿದ್ಧತೆ

## ಅವಘಡ ಆಗದಂತೆ ಮುನ್ನೆಚ್ಚರಿಕೆ ವಹಿಸಲು ಅಧಿಕಾರಿಗಳಿಗೆ ಸಚಿವ ಯತೀಂದ್ರ ಸೂಚನೆ

**ಮೈಸೂರು:** ಚಾಮುಂಡಿ ಬೆಟ್ಟದಲ್ಲಿ ಆಷಾಢ ಮಾಸದ ಅಂಗವಾಗಿ ನಡೆಯುವ ವಿಶೇಷ ಪೂಜೆಗೆ ಆಷಾಢ ಶುಕ್ರವಾರ ಆಗಮಿಸುವ ಭಕ್ತರಿಗೆ ಅನಾನುಕೂಲ ಆಗದಂತೆ ಚಾಮುಂಡಿ ದೇವಿ ದರ್ಶನಕ್ಕೆ ವ್ಯವಸ್ಥೆ ಮಾಡುವಂತೆ ಸಚಿವ ಯತೀಂದ್ರ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಚಾಮುಂಡಿ ಬೆಟ್ಟದ ದಾಸೋಹ ಭವನದಲ್ಲಿ ಬುಧವಾರ ಆಷಾಢ ಶುಕ್ರವಾರ ಉತ್ಸವದ ಸಿದ್ಧತೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಬಾವಿ ಸಭೆಯಲ್ಲಿ ಮಾತನಾಡಿದರು. ಆಷಾಢ ಮಾಸದಲ್ಲಿ ದರ್ಶನಕ್ಕೆ ಬರುವ ಭಕ್ತರ ಸುರಕ್ಷತೆ ಹೆಚ್ಚಿನ ಆದ್ಯತೆ ನೀಡಬೇಕು. ಯಾವುದೇ ಕಾಲ್ತುಳಿತ ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಮೊದಲ ಆಷಾಢ ಶುಕ್ರವಾರ ಜುಲೈ 17ರಂದು, ಜುಲೈ 24ರಂದು 2ನೇ ಆಷಾಢ ಶುಕ್ರವಾರ, ಜುಲೈ 31ರಂದು 3ನೇ ಆಷಾಢ ಶುಕ್ರವಾರ, ಆಗಸ್ಟ್ 04 ರಂದು ಅಮ್ಮನವರ ಜನ್ಮೋತ್ಸವ, ಆಗಸ್ಟ್ 7ರಂದು 4ನೇ ಆಷಾಢ ಶುಕ್ರವಾರ ಉತ್ಸವ ನಡೆಯುತ್ತದೆ. ಪೊಲೀಸ್ ಇಲಾಖೆ ಅಗತ್ಯ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಬೇಕು. ಶುಕ್ರವಾರ ದಿನಗಳಂದು ಬೆಳಗ್ಗೆ 5.30ರಿಂದ ದೇವಾಲಯ ಮುಚ್ಚುವವರೆಗೆ ದರ್ಶನದ ವ್ಯವಸ್ಥೆ ಕಲ್ಪಿಸಬೇಕು. ಅಮ್ಮನವರ ಜನ್ಮೋತ್ಸವ ದಿನ ಬೆಳಗ್ಗೆ 8 ಗಂಟೆಯಿಂದ ಸಾರ್ವಜನಿಕ ಭಕ್ತಾದಿಗಳಿಗೆ ದರ್ಶನದ ವ್ಯವಸ್ಥೆ ಮಾಡಲಾಗುವುದು. ವಿಐಪಿ ದರ್ಶನಕ್ಕೆ ಪ್ರತ್ಯೇಕವಾಗಿ ಬೆಳಗ್ಗೆ 5.30ರಿಂದ ಬೆಳಗ್ಗೆ 9.30 ರವರಿಗೆ ಪುಟ 2ಕ್ಕೆ




### ಖಾಸಗಿ ವಾಹನ ಬಂದ್

ಜಿಲ್ಲಾಧಿಕಾರಿಗಳಾದ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಲಲಿತ ಮಹಲ್ ಮೈದಾನದಿಂದ ಶುಕ್ರವಾರ ಶನಿವಾರ ಮತ್ತು ಭಾನುವಾರದಂದು ಖಾಸಗಿ ವಾಹನಗಳಿಗೆ ಚಾಮುಂಡಿ ಬೆಟ್ಟಕ್ಕೆ ಪ್ರವೇಶವಿಲ್ಲ. ಲಲಿತ ಮಹಲ್ ಆವರಣದಿಂದ ಕೆ ಎಸ್ ಆರ್ ಟಿ ಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಬಸ್ ವ್ಯವಸ್ಥೆ ಮಾಡಲಾಗುತ್ತದೆ. ಪಾದರಕ್ಷೆಗಳನ್ನು ಬಿಡಲು ಲಲಿತ ಮಹಲ್ ಬಸ್ ಪಾರ್ಕಿಂಗ್ ಆವರಣದಲ್ಲಿ ವ್ಯವಸ್ಥೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

# ರಾಜ್ಯದಲ್ಲಿ ಬರ... ನಿರ್ವಹಣೆಗೆ ಒತ್ತು

## ಮೋಡ ಬಿತ್ತನೆ ಸದ್ಯಕ್ಕಿಲ್ಲ | ಡಿಸಿಎಂ ಪರಮೇಶ್ವರ್

**ಬೆಳಗಾವಿ:** ರಾಜ್ಯದಲ್ಲಿ ಬರದ ಪರಿಸ್ಥಿತಿ ಇದ್ದರೂ ಮೋಡ ಬಿತ್ತನೆ ಬಗ್ಗೆ ಯೋಜಿಸಿಲ್ಲ. ಈಗ ಬರ ನಿರ್ವಹಣೆ ಬಗ್ಗೆ ಗಮನಹರಿಸಲಾಗುವುದು ಎಂದು ಕಂದಾಯ ಸಚಿವ, ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ತಿಳಿಸಿದರು.



ನಗರದಲ್ಲಿ ಬುಧವಾರ ಬರ ಪರಿಸ್ಥಿತಿ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದೆ ಸಂದರ್ಭ ನೋಡಿಕೊಂಡು ಮೋಡ ಬಿತ್ತನೆ ಬಗ್ಗೆ ನಿರ್ಧರಿಸಲಾಗುತ್ತದೆ ಎಂದು ಹೇಳಿದರು. ರಾಜ್ಯದ ಹಲವು ಜಿಲ್ಲೆಗಳಲ್ಲಿ ಜೂನ್ ತಿಂಗಳಲ್ಲಿ ವಾಡಿಕೆ ಮಳೆಯಾಗಿಲ್ಲ. ಇದರಿಂದ ಅಂತರ್ಜಲ ಮಟ್ಟ ಕುಸಿದಿದೆ. ಮುಂದಿನ ದಿನಗಳಲ್ಲಿ ಮಳೆ



ಬಾರದಿದ್ದರೆ ಕಷ್ಟವಾಗಬಹುದು. ಹೀಗಾಗಿ ಮುನ್ನೆಚ್ಚರಿಕೆ ಕ್ರಮದ ಬಗ್ಗೆ ಚರ್ಚಿಸಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಸೂಚನೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂಬಂಧ ಪ್ಲಾನ್ ಆಫ್ ಆಕ್ಷನ್ ಮಾಡಿ ಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಕಾರ್ಯಗತಗೊಳಿಸುತ್ತಾರೆ. ಕುಡಿಯುವ ನೀರಿಗಾಗಿ ಪ್ರತಿ ಜಿಲ್ಲೆಗೆ 5 ಕೋಟಿ ರೂ. ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರತಿ ಬಾರಿ ಇಂತಹ ಪರಿಸ್ಥಿತಿ ಎದುರಾದಾಗ ಕೇಂದ್ರದ ಗಮನಕ್ಕೆ ತರುತ್ತೇವೆ. ಪುಟ 2ಕ್ಕೆ

### ಖಾತೆ ವಿತರಣೆಗೆ ಕಾಲಮಿತಿ

ಕಂದಾಯ ಇಲಾಖೆಯಲ್ಲಿ ಪೌತಿ ಖಾತೆ, ಹಕ್ಕು ಪತ್ರ ವಿತರಣೆ, ಆಕಾರ್ ಬಂದ್, ಕಂದಾಯ ಗ್ರಾಮಗಳ ಘೋಷಣೆ ಮೂರು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿದೆ. ಅದನ್ನು ಮತ್ತಷ್ಟು ವೇಗವಾಗಿ ಮಾಡಲು ತೀರ್ಮಾನಿಸಿದೆ. ಕಾಲಮಿತಿಯೊಳಗೆ ಪೂರ್ಣ ಗೊಳಿಸುತ್ತೇವೆ ಎಂದು ಸಚಿವ ಡಾ.ಪರ ಮೇಶ್ವರ್ ಹೇಳಿದರು. ಧಾರ್ಮಿಕ ಇಲಾಖೆಯಲ್ಲಿ 'ಎ', 'ಬಿ', 'ಸಿ' ವರ್ಗದ ದೇವಸ್ಥಾನಗಳ ಆಸ್ತಿ ಒತ್ತುವರಿಯಾ ಗಿರುವುದು ಕಂಡು ಬಂದಿದೆ. ಸರ್ವೆ ಮಾಡಿ, ಒತ್ತುವರಿಯನ್ನು ತೆರವುಗೊಳಿಸಲು ಪ್ರತಿ ಯೊಂದು ಜಿಲ್ಲೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ದೇವಾಲಯದಲ್ಲಿ ಭಕ್ತರಿಗೆ ದರ್ಶನ ಪಡೆಯಲು, ಪ್ರಸಾದ ಸ್ವೀಕಾರಕ್ಕೆ ಮತ್ತು ವಸತಿ ವಿಚಾರದಲ್ಲಿ ತೊಂದರೆಯಾಗಬಾರದು. ದೇವಸ್ಥಾನಕ್ಕೆ ಬರುವ ಹಣವನ್ನು ಪ್ರಾಧಿಕಾರದ ಅನುಮತಿ ಪಡೆದು ಖರ್ಚು ಮಾಡಬೇಕು ಎಂದು ಸೂಚಿಸಿದ್ದೇವೆ.

## ಜು.20ರಿಂದ ಸಂಸತ್ ಮುಂಗಾರು ಅಧಿವೇಶನ

**ನವದೆಹಲಿ:** ಸಂಸತ್ ಮುಂಗಾರು ಅಧಿವೇಶನ ಜುಲೈ 20ರಿಂದ ಆಗಸ್ಟ್ 13ರವರೆಗೆ ನಡೆಯುವ ಸಾಧ್ಯತೆ ಇದೆ. ಈ ಕುರಿತು ಕೇಂದ್ರ ಸರ್ಕಾರ ಶೀಘ್ರ ಅಧಿಕೃತ ಪ್ರಕಟಣೆ ಹೊರಡಿಸುವ ನಿರೀಕ್ಷೆಯಿದೆ. ಸುಮಾರು ನಾಲ್ಕು ವಾರಗಳ ಕಾಲ ನಡೆಯಲಿರುವ ಈ ಅಧಿವೇಶನದಲ್ಲಿ ಮಹತ್ವದ ಮಸೂದೆಗಳು ಕುರಿತು ಚರ್ಚೆ ನಡೆಯಲಿದೆ.

ಈ ಬಾರಿ ಅಧಿವೇಶನದಲ್ಲಿ ಮಹಿಳೆಯರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಶೇ.33 ಮೀಸಲಾತಿ ಜಾರಿಗೊಳಿಸುವ ಸಂವಿಧಾನ ತಿದ್ದುಪಡಿ ಮಸೂದೆ ಹಾಗೂ ಅದಕ್ಕೆ ಸಂಬಂಧಿಸಿದ ಕ್ಷೇತ್ರ ಪುನರ್‌ವಿಂಗಡನೆ ಮಸೂದೆಯನ್ನು ಕೇಂದ್ರ ಸರ್ಕಾರ ಮತ್ತೆ ಮಂಡಿಸುವ ಸಾಧ್ಯತೆ ಇದೆ.

ಈ ಎರಡೂ ಮಸೂದೆಗಳು ಏಪ್ರಿಲ್‌ನಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಅಗತ್ಯವಾದ ಮೂರನೇ ಎರಡರಷ್ಟು ಬಹುಮತ ದೊರೆಯದ ಕಾರಣ ಅಂಗೀಕಾರವಾಗಿರಲಿಲ್ಲ. ಈಗ ಕೆಲವು ವಿರೋಧ ಪಕ್ಷಗಳ ವಿಷಯಾಧಾರಿತ ಬೆಂಬಲದ ನಿರೀಕ್ಷೆಯೊಂದಿಗೆ ಸರ್ಕಾರ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಮುಂದಾಗಿದೆ ಎಂದು ತಿಳಿದುಬಂದಿದೆ.

## ಮಳೆಗೆ ಭೂಕುಸಿತ: ಮೂವರು ಸಾವು



**ಮಂಗಳೂರು:** ಮಂಗಳೂರಿನ ನಾಗುರಿ ಎಂಬಲ್ಲಿ ಮಂಗಳವಾರ ರಾತ್ರಿ ಸುರಿದ ಭಾರೀ ಮಳೆಗೆ ಭೂಕುಸಿತ ಉಂಟಾದ ಪರಿಣಾಮ ಇಬ್ಬರು ಮಕ್ಕಳು ಸೇರಿದಂತೆ ಮೂವರು ಸಾವನ್ನಪ್ಪಿದ್ದಾರೆ.

ಭೂಕುಸಿತ ಉಂಟಾದ ಪರಿಣಾಮ ಮಣ್ಣು ಕುಸಿದು ಮನೆ ಮೇಲೆ ಬಿದ್ದಿದೆ. ಪರಿಣಾಮ ಮನೆಯಲ್ಲಿದ್ದ ಆರು ಜನ ಮಣ್ಣಿನಡಿ ಸಿಲುಕಿಕೊಂಡಿದ್ದರು. ಈ ಪೈಕಿ ಓರ್ವ ಪುರುಷ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡಲಾಗಿದೆ. ಇನ್ನುಳಿದ ಒಬ್ಬರು ಮಹಿಳೆ ಹಾಗೂ

## ಗ್ಯಾರಂಟಿ ರದ್ದುಪಡಿಸಲು ಹುನ್ನಾರ

### ರಾಜ್ಯದ ಜನರಿಗೆ ಸರ್ಕಾರದ ದ್ರೋಹ: ಆರ್.ಅಶೋಕ್ ವಾಗ್ದಾಳಿ

**ಬೆಂಗಳೂರು:** ವಿಧಾನಸಭೆ ಚುನಾವಣೆಗೂ ಮುನ್ನ ಕಾಕಾ ಪಾಟೀಲನಿಗೂ ಫ್ರೀ, ಮಹಾದೇವಪ್ಪನಿಗೂ ಫ್ರೀ, ಎಲ್ಲರಿಗೂ ಫ್ರೀ ಎಂದು ಬೊಬ್ಬೆ ಹೊಡೆದು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈಗ ಜನರಿಗೆ ದ್ರೋಹ ಬಗೆಯಲು ಹೊರಟಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದ್ದಾರೆ.

ರಾಜ್ಯದ ಖಜಾನೆ ಸಂಪೂರ್ಣ ದಿವಾಳಿಯಾಗಿದೆ. ಈಗ ಅದನ್ನು ಮುಚ್ಚಿಡಲು ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಸಂಖ್ಯೆಗೆ ಕತ್ತರಿ ಹಾಕಲು ಮನೆ–ಮನೆ ಪರಿಶೀಲನೆ ಹುನ್ನಾರ ನಡೆಸುತ್ತಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ ಕಿಡಿಕಾರಿದ್ದಾರೆ.

ಗೃಹಜ್ಯೋತಿ ಫಲಾನುಭವಿಗಳ ಮರು ಪರಿಶೀಲನೆ ಹೆಸರಿನಲ್ಲಿ ಮನೆಗೆ ಬರುವ



ಎಸ್ಕಾಂ ಸಿಬ್ಬಂದಿಗೆ ಪ್ಯಾನ್ ಕಾರ್ಡ್ ಮತ್ತು ಜಾತಿ ಪ್ರಮಾಣ ಪತ್ರವನ್ನು ತೋರಿಸಬೇಕಂತೆ. ಚುನಾವಣೆಗೆ ಮುನ್ನ ಅಧಿಕಾರಕ್ಕೆ ಬರುವ ಹಪಾಹಪಿಯಲ್ಲಿ ಯಾವುದೇ ಷರತ್ತಿಲ್ಲದೆ ಎಲ್ಲರಿಗೂ 200 ಯೂನಿಟ್ ಉಚಿತ ವಿದ್ಯುತ್ ಎಂದು ಹೇಳಿತ್ತು. ಈಗ ಆದಾಯ ಮತ್ತು ಜಾತಿ ಆಧಾರದ ಮೇಲೆ ಅರ್ಹತೆ ನಿರ್ಧಾರ ಪುಟ 2ಕ್ಕೆ

## ಸಿದ್ದು ದೂರವಿಟ್ಟರೆ 2028ಕ್ಕೆ ಗೆಲುವು ಅಸಾಧ್ಯ: ಕೆ.ಎನ್.ರಾಜಣ್ಣ

**ಬೆಂಗಳೂರು:** ಸಿದ್ದರಾಮಯ್ಯ ಜನನಾಯಕ. ಅವರನ್ನು ದೂರವಿಟ್ಟು ಪಕ್ಷ ಸಂಘಟನೆ ಮಾಡುತ್ತೇವೆಂದರೆ ಅದು ಒಂದು ದೊಡ್ಡ ಪ್ರಮಾದವಾಗಲಿದೆ ಎಂದು ಶಾಸಕ ಕೆ.ಎನ್.ರಾಜಣ್ಣ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದರೆ ಮಾತ್ರ ನಾವು 2028ರ ಚುನಾವಣೆ ಗೆಲ್ಲುತ್ತೇವೆ ಎಂದು ಹೇಳಿದರು.



ಸದ್ಯದಲ್ಲಿಯೇ ಪಾಲಿಕೆ ಚುನಾವಣೆ ಎದುರಿಸಬೇಕಾಗುತ್ತದೆ. ಸಿದ್ದರಾಮಯ್ಯ ಅವರನ್ನು ಕಡೆಗಣಿಸಲು ಸಾಧ್ಯವೇ ಇಲ್ಲ. ಜನ ನಾಯಕರೆಂದು ಪುಟ 2ಕ್ಕೆ

## ಗೃಹಜ್ಯೋತಿ ಪರಿಶೀಲನೆ: ವಿದ್ಯುತ್ ಸರಾಸರಿ ಬಿಲ್

**ಬೆಂಗಳೂರು:** ಗೃಹಜ್ಯೋತಿ ಯೋಜನೆ ಫಲಾನುಭವಿಗಳ ಮನೆ–ಮನೆ ಪರಿಶೀಲನಾ ಕಾರ್ಯಕ್ಕೆ ಮೀಟರ್ ರೀಡರ್‌ಗಳನ್ನು ನಿಯೋಜಿಸಿರುವುದರಿಂದ ಜುಲೈ ತಿಂಗಳಿನಲ್ಲಿ ನಿಯಮಿತ ಮೀಟರ್ ರೀಡಿಂಗ್ ಇರುವುದಿಲ್ಲ. ಬದಲಿಗೆ ಗ್ರಾಹಕರಿಗೆ ಸರಾಸರಿ ಬಿಲ್ ನೀಡಲಾಗುತ್ತದೆ.

ಕಳೆದ 3 ತಿಂಗಳ ನಿಮ್ಮ ಸರಾಸರಿ ವಿದ್ಯುತ್ ಬಳಕೆಯ ಆಧಾರದ ಮೇಲೆ ಜುಲೈ ತಿಂಗಳ ಬಿಲ್ ನೀಡಲಾಗುವುದು. ತಾತ್ಕಾಲಿಕ ವಿದ್ಯುತ್ ಸಂಪರ್ಕ ಹೊಂದಿರುವವರಿಗೆ ಎಂದಿನಂತೆ ನೈಜ ಮೀಟರ್ ರೀಡಿಂಗ್ ಆಧಾರದ ಪುಟ 2ಕ್ಕೆ

## ಮೇಕೆದಾಟು: ಬೋರ್‌ವೆಲ್ ಸಮೀಕ್ಷೆಗೆ ಸಿಎಂ ಡಿಕೆಶಿ ಅಸ್ತು



**ಬೆಂಗಳೂರು:** ಮೇಕೆದಾಟು ಸಮತೋಲನ ಜಲಾಶಯ ಯೋಜನೆಗೆ ರಾಜ್ಯ ಸರ್ಕಾರ ಮತ್ತೊಂದು ಪ್ರಮುಖ ಹೆಜ್ಜೆ ಇಟ್ಟಿದೆ. ಕಾವೇರಿ ವನ್ಯಜೀವಿಧಾಮ ವ್ಯಾಪ್ತಿಯಲ್ಲಿ ಉದ್ದೇಶಿತ ಯೋಜನೆಗಾಗಿ ಬೋರ್‌ವೆಲ್ ಸಮೀಕ್ಷೆ ನಡೆಸುವ ಪ್ರಸ್ತಾವನೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅನುಮೋದನೆ ನೀಡಿದ್ದಾರೆ.

ಈ ಪ್ರಸ್ತಾವನೆಯನ್ನು ರಾಷ್ಟ್ರೀಯ ವನ್ಯಜೀವಿ ಮಂಡಳಿ ಅನುಮೋದನೆಗಾಗಿ ತಕ್ಷಣ ಕಳುಹಿಸುವಂತೆ ಅಧಿಕಾರಿಗಳಿಗೆ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ. ಮೇಕೆದಾಟು ಯೋಜನೆಗೆ ಅಗತ್ಯವಿರುವ ಎಲ್ಲಾ ಅನುಮತಿಗಳನ್ನು ಶೀಘ್ರ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಈ ಯೋಜನೆಗೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರ ಎತ್ತಿರುವ ಆಕ್ಷೇಪಣೆಗಳ ಪುಟ 2ಕ್ಕೆ

## ಬಾಂಬ್ ಕೊಟ್ಟಿದ್ದ ಮೂವರ ಬಂಧನ

### ಕಾರಿನಲ್ಲಿ 'ಪಾಗಲ್ ಪ್ರೇಮಿ' ನಾಡಬಾಂಬ್ ಸ್ಫೋಟ ಪ್ರಕರಣ

**ತುಮಕೂರು:** ಶಿರಾ ತಾಲ್ಲೂಕಿನ ಜೋಗಿಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಾಡಬಾಂಬ್ ಸ್ಫೋಟಿಸಿಕೊಂಡು ಸಜೀವದಹನವಾದ ನಾಗೇಂದ್ರನಿಗೆ ನಾಡಬಾಂಬ್ ಕೊಟ್ಟಿದ್ದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಹೊನ್ನಾವರ ತಾಲ್ಲೂಕಿನ ಚಂದಾವರ ಗ್ರಾಮದ ಜಾರ್ಜ್ ನಿಕ್ಲೋವ್ ಫರ್ನಾಂಡೀಸ್, ಸಂದೀಪ್‌ಗೌಡ, ನಾರಾಯಣ ಡೊಲ್ಲುಗೌಡ ಮತ್ತು ನಾಗರಾಜು ಡೊಲ್ಲುಗೌಡ ಬಂಧಿತರು. ತುಮಕೂರಿನ ವಿಶೇಷ ತನಿಖಾ ತಂಡ ಮತ್ತು ಉತ್ತರ ಕನ್ನಡ ಜಿಲ್ಲೆ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ನಾಲ್ವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಫರ್ನಾಂಡೀಸ್ ಬಳಿ ನಾಗೇಂದ್ರ ಕಚ್ಚಾ ಬಾಂಬ್ ಖರೀದಿಸಿದ್ದರು. ಉಳಿದ ಮೂವರು ಸಹ ಬಾಂಬ್ ಕೊಟ್ಟಿರುವ ಬಗ್ಗೆ ಮಾಹಿತಿ ಇದೆ. ಫರ್ನಾಂಡೀಸ್ ಆರೋಗ್ಯದಲ್ಲಿ ಏರುಪೇರಾಗಿದೆ. ಕುಮಟಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಮೂವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ಬುಧವಾರ ತಿಳಿಸಿದರು. ಫರ್ನಾಂಡೀಸ್ ಮೀನುಗಾರಿಕೆಗಾಗಿ ಕಚ್ಚಾ ಬಾಂಬ್ ತಯಾರಿಸಿ ಮಾರಾಟ ಮಾಡುತ್ತಿದ್ದರು. ಇವರಿಂ ದ ಬಾಂಬ್ ಖರೀದಿಸಿದವರು ನದಿಯಲ್ಲಿ ಮೀನು ಹಿಡಿಯಲು ಬಳಸುತ್ತಿದ್ದರು ಎಂದು ತನಿಖೆಯಿಂದ ಗೊತ್ತಾಗಿದೆ. ಇವರು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮತ್ತಷ್ಟು ಮಾಹಿತಿ ಸಿಗಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.



ಕಾರು ಸ್ಫೋಟಕ್ಕೂ ಮುನ್ನ ನಾಗೇಂದ್ರ ಬಳಿ ಮೂರು ನಾಡಬಾಂಬ್ ಇದ್ದವು ಎಂದು ತಿಳಿದು ಬಂದಿದೆ. ಪ್ರಕರಣದ ತನಿಖೆಗೆ 15ಕ್ಕೂ ಹೆಚ್ಚು ಸಿಬ್ಬಂದಿ ಇರುವ 3 ತಂಡಗಳನ್ನು ರಚಿಸಲಾಗಿತ್ತು ಎಂದರು.

## ವಾಣಿಜ್ಯ ಸಿಲಿಂಡರ್ ಬೆಲೆ ಇಳಿಕೆ

**ನವದೆಹಲಿ:** ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಡಾಬಾಗಳು ಹಾಗೂ ಆಹಾರ ಮತ್ತು ಪಾನೀಯ ಉದ್ಯಮಗಳಿಗೆ ಕೇಂದ್ರ ಸರ್ಕಾರ ಮತ್ತು ತೈಲ ಕಂಪನಿಗಳು ಗುಡ್ ನ್ಯೂಸ್ ನೀಡಿವೆ.

ವಾಣಿಜ್ಯ ಬಳಕೆ 19 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ರೂ.183.5 ಇಳಿಕೆ ಮಾಡಲಾಗಿದೆ. ಹೊಸ ದರಗಳು ಜುಲೈ 1, 2026ರಿಂದ ಜಾರಿಗೆ ಬಂದಿವೆ.

ದರ ಪರಿಷ್ಕರಣೆ ಬಳಿಕ 19 ಕೆ.ಜಿ. ವಾಣಿಜ್ಯ ಸಿಲಿಂಡರ್ ಬೆಲೆಯನ್ನು 183 ರೂ. ಇಳಿಕೆ ಮಾಡಲಾಗಿದೆ. ಈ ಮೂಲಕ ಆಹಾರ ಉದ್ಯಮದಲ್ಲಿ ತೊಡಗಿರುವ ಸಾವಿರಾರು ವ್ಯಾಪಾರಿಗಳಿಗೆ ನಿರಾಳತೆ ಸಿಕ್ಕಿದೆ.

ಆದರೆ, ಗೃಹ ಬಳಕೆ ಗ್ರಾಹಕರಿಗೆ ಯಾವುದೇ ಸಿಹಿಸುದ್ದಿ ಸಿಕ್ಕಿಲ್ಲ. 14.2 ಕೆ.ಜಿ. ಗೃಹ ಬಳಕೆ ಸಿಲಿಂಡರ್ ಬೆಲೆ ಯಥಾಸ್ಥಿತಿ ಮುಂದುವರಿದಿದೆ. ಗೃಹ ಬಳಕೆಯ 14.2 ಕೆ.ಜಿ. ಸಿಲಿಂಡರ್ ಬೆಲೆಯಲ್ಲೂ ಈ ಹಿಂದೆ ಎರಡು ಹಂತಗಳಲ್ಲಿ ಹೆಚ್ಚಳ ಮಾಡಲಾಗಿತ್ತು. ಆದರೆ ಈಗ ಇಳಿಕೆ ಮಾಡಲಾಗಿಲ್ಲ.



# ಸಮ ಸಮಾಜದ ಕನಸು ಇನ್ನೂ ನನಸಾಗಿಲ್ಲ

## ಎಲ್ಲರನ್ನೂ ನಾವು ಮನುಷ್ಯರನ್ನಾಗಿ ನೋಡಬೇಕು: ಸಿದ್ದರಾಮಯ್ಯ

**ಮೈಸೂರು:** ಕಾಯಕ ಮತ್ತು ದಾಸೋಹ ಮಹತ್ವ ಸಾರಿದ್ದ ಬಸವಣ್ಣನವರ ಸಮ ಸಮಾಜದ ನಿರ್ಮಾಣದ ಕನಸು ಇನ್ನೂ ನನಸಾಗಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ನಂಜನಗೂಡು ತಾಲ್ಲೂಕಿನ ದೇವನೂರು ಶ್ರೀ ಗುರು ಮಲ್ಲೇಶ್ವರ ಮಹಾ ಸಂಸ್ಥಾನ ದಾಸೋಹ ಮಠದಲ್ಲಿ ಶ್ರೀ ಗುರುಮಲ್ಲೇಶ್ವರರ 127ನೇ ಪುಣ್ಯಾರಾಧನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಿಂದಲೂ ಇಲ್ಲಿಯ ತನಕ ಸಾಕಷ್ಟು ಬದಲಾವಣೆ ಕಂಡಿದೆ. ಆದರೆ, ಬಸವಾದಿ ಶರಣರ ಕನಸು ಇನ್ನು ನನಸಾಗಿಲ್ಲ. ಎಲ್ಲರನ್ನೂ ನಾವು ಮನುಷ್ಯರನ್ನಾಗಿ ನೋಡಬೇಕು ಎಂದು ಹೇಳಿದರು.

ನಾನು ಕೂಡ ಬಸವಣ್ಣನವರ ಅನುಯಾಯಿ. ಮೊದಲ ಬಾರಿಗೆ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಬಸವಣ್ಣನವರ ಜಯಂತಿ ದಿನವೇ ಪ್ರಮಾಣವಚನ ಸ್ವೀಕಾರ ಮಾಡಿದ್ದೆ. ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ



ಇರುವಂತೆ ಆದೇಶ ಮಾಡಿದ್ದೇನೆ.

ಜಾತಿ ಮತ್ತು ಅಂತಸ್ತಿನ ತಾರತಮ್ಯ ಇರಬಾರದು ಎಂದು ಬಸವಾದಿ ಶರಣರು ಕನಸು ಕಂಡಿದ್ದರು. ಸಮಾಜದಲ್ಲಿ ಮನುಷ್ಯರಾಗಿ ಬದುಕುವ ಪ್ರಯತ್ನ ಮಾಡಬೇಕು. ದೇವನೂರು ಶ್ರೀ ಗುರು ಮಲ್ಲೇಶ್ವರರ ಪ್ರೇರಣೆ ಮತ್ತು ಅವರ ಕಾಯಕದಿಂದ ದಾಸೋಹ ಮಾಡಿ ಹಸಿದವರಿಗೆ ಅನ್ನ ಹಾಕಿ ಹೊಟ್ಟೆ ತುಂಬಿಸುತ್ತಿದ್ದರು. ಕಂತೆ ಭಿಕ್ಷೆ ಬೇಡಿ ದಾಸೋಹ ಮಾಡಿದ ಶ್ರೀ ಗುರುಮಲ್ಲೇಶ್ವರವರ ದಾಸೋಹ ಸೇವೆ ಅವಿಸ್ಮರಣೀಯ ಎಂದು ಸ್ಮರಿಸಿದರು.

ಈ ಹಿಂದೆ ವರ್ಣಾಶ್ರಮ ವ್ಯವಸ್ಥೆಯಿಂದ ಪುಟ 2ಕ್ಕೆ

## ಪಾಕ್ ಅಧಿಕಾರಿಗಳ ಜೊತೆ ಆರ್‌ಎಸ್‌ಎಸ್ ರಹಸ್ಯ ಸಭೆ?

**ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ನಾಯಕ ರಾಮ್ ಮಾಧವ್ ಅವರು ಪಾಕಿಸ್ತಾನ ಅಧಿಕಾರಿಗಳೊಂದಿಗೆ ನಾಲ್ಕು ರಹಸ್ಯ ಸಭೆಗಳನ್ನು ನಡೆಸಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಆರೋಪಿಸಿದ್ದಾರೆ.

**ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಆರೋಪ**

ಪ್ರಚಾರ ಸಮಿತಿ ವಿಚಾರ ಸಂಕಿರಣದಲ್ಲಿ ಮಾತನಾಡಿರುವ ಅವರು ತಮ್ಮ ಭಾಷಣದ ತುಣುಕನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಬಿಜೆಪಿಯು ಆರ್‌ಎಸ್‌ಎಸ್ ನಾಯಕ ರಾಮ್ ಮಾಧವ್ ಅವರಿಗೆ ಬಿಜೆಪಿಯು ಜಿಬಿಎ ಚುನಾವಣೆ ಉಸ್ತುವಾರಿ ವಹಿಸಿರುವುದನ್ನು ಟೀಕಿಸಿದ್ದಾರೆ.

ರಾಮ್ ಮಾಧವ್ ಇತಿಹಾಸವನ್ನು ನೀವು ನೋಡಬೇಕು. ಅವರು ಕೊಲಂಬೊ, ಲಂಡನ್‌ನಲ್ಲಿ 4 ಸಭೆಗಳನ್ನು ಮಾಡಿದ್ದಾರೆ. ಪಾಕಿಸ್ತಾನದ ಐಎಸ್‌ಐನ ಮಾಜಿ ಮೇಜರ್ ಜನರಲ್ ಜೊತೆಗೆ ಗುಪ್ತ ಸಭೆ ಮಾಡಿದ್ದಾರೆ. ಇತ್ತೀಚೆಗೆ ಅವರ ಗುರುಗಳಾದ ಮೋಹನ್ ಭಾಗವತ್ ಅವರು ಪಾಕಿಸ್ತಾನದೊಂದಿಗೆ ಮಾತುಕತೆ ತಪ್ಪೇನಿಲ್ಲ ಎಂದು ಹೇಳಿದ್ದಾರೆ. ಇದೇ ರೀತಿ ನಾನು ಪುಟ 2ಕ್ಕೆ



### ಅಧಿಕಾರ ಯಾರು ಕೊಟ್ಟರು?

ಪಾಕಿಸ್ತಾನದವರೊಂದಿಗೆ ರಹಸ್ಯ ಸಭೆ ಮಾಡಲು ಅಧಿಕಾರ ಕೊಟ್ಟವರು ಯಾರು? ಇವರು ವಿದೇಶಾಂಗ ಸಚಿವರೂ ಅಲ್ಲ, ಶಾಸಕರೂ ಅಲ್ಲ, ಸಂಸದರೂ ಅಲ್ಲ. ಆರ್‌ಎಸ್‌ಎಸ್ ಪ್ರಚಾರಕರಾಗಿ ವಿದೇಶದಲ್ಲಿ ಸಭೆ ಮಾಡಲು ಅಧಿಕಾರ ಕೊಟ್ಟಿದ್ದು ಯಾರು? ಯಾವ ಅಧಿಕಾರ ಇಟ್ಟುಕೊಂಡು ಆರ್‌ಎಸ್‌ಎಸ್ ನವರು ವಿದೇಶಾಂಗ ನೀತಿ ಬಗ್ಗೆ ತೀರ್ಮಾನ ಮಾಡುತ್ತಿದ್ದಾರೆ? ಪಾಕಿಸ್ತಾನದವರೊಂದಿಗಿನ ಗುಪ್ತ ಸಭೆ ಬಗ್ಗೆ ದೇಶದ ಜನರಿಗೆ ಯಾಕೆ ಮಾಹಿತಿ ನೀಡಿಲ್ಲ? ಆಪರೇಷನ್ ಪುಟ 2ಕ್ಕೆ

ಮೊದಲ ಪುಟದಿಂದ

## ಸಮ ಸಮಾಜದ ಕನಸು ಇನ್ನೂ ನನಸಾಗಿಲ್ಲ

ಅಕ್ಷರ ದಿಂದ ವಂಚಿತರಾಗಿದ್ದರು. ಮೌಢ್ಯತೆ ವಿರುದ್ಧ ಬಸವಾದಿ ಶರಣರು ಹೋರಾಟ ನಡೆಸಿದ್ದರು. ಬಸವಾದಿ ಶರಣರ ಪ್ರೇರಣೆಯಿಂದ ನಾನು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಮೌಢ್ಯ ನಿಷೇಧ ಕಾಯ್ದೆಯನ್ನು ಜಾರಿಗೆ ತಂದಿದ್ದೆ. ಸಂವಿಧಾನ ಬಂದಮೇಲೆ ಎಲ್ಲರಿಗೂ ಸಮಾನ ಅವಕಾಶ ಸಿಕ್ಕಿದೆ. ಅಂಬೇಡ್ಕರ್ ಅವರ ಸಂವಿಧಾನದಿಂದ ನಾನು ಕೂಡ ಮುಖ್ಯಮಂತ್ರಿಯಾದೆ ಎಂದು ತಿಳಿಸಿದರು. ನೂತನವಾಗಿ ನಿರ್ಮಿಸಿರುವ ಬಸವ ಮಹಾದ್ವಾರ ಮತ್ತು ಕಲ್ಯಾಣಿಯನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಸಿದ್ದಗಂಗೆ ಶ್ರೀ ಸಿದ್ದಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಸೋಮಹಳ್ಳಿ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ ಆಶೀರ್ವಚನ ನೀಡಿದರು.

## ಮೇಕೆದಾಟು: ಬೋರ್‌ವೆಲ್ ಸಮೀಕ್ಷೆಗೆ ಸಿಎಂ ಡಿಕೆಶಿ ಅಸ್ತು

ಕುರಿತು ತಾಂತ್ರಿಕ ಅಂಶಗಳನ್ನು ಪರಿಶೀಲಿಸಿ ಸಾಧ್ಯವಾದಷ್ಟು ಬೇಗ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚಿಸಿದರು. ಯೋಜನೆ ಜಾರಿಗೊಳಿಸಲು ಉದ್ದೇಶಿಸಿರುವ ಸ್ಥಳದ ಮಣ್ಣಿನ ಗುಣಮಟ್ಟ, ಬಂಡೆಗಳ ಸ್ಥಿತಿ ಹಾಗೂ ಭೂವೈಜ್ಞಾನಿಕ ಮಾಹಿತಿಯನ್ನು ತಿಳಿದುಕೊಳ್ಳಲು ಬೋರ್ ಹೋಲ್ ಸಮೀಕ್ಷೆ ನಡೆಸಲಾಗುತ್ತದೆ. ಈ ಸಮೀಕ್ಷೆಯ ವರದಿ ಆಧರಿಸಿ ಯೋಜನೆಯ ಸವಿಸ್ತಾರ ವರದಿ ಸಿದ್ಧಪಡಿಸಲಾಗುತ್ತದೆ. ಆದರೆ, ಸಮೀಕ್ಷೆ ಆರಂಭಿಸುವ ಮುನ್ನ ರಾಷ್ಟ್ರೀಯ ವನ್ಯಜೀವಿ ಮಂಡಳಿ, ಅರಣ್ಯ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಅನುಮತಿ ಕಡ್ಡಾಯ. ಸಮೀಕ್ಷೆಗಾಗಿ ಕೇವಲ 0.003 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬಳಸಲು ಪ್ರಸ್ತಾವಿಸಲಾಗಿದೆ.

## ಗೃಹಜ್ಯೋತಿ ಪರಿಶೀಲನೆ:

ಮೇಲೆಯೇ ಬಿಲ್ ನೀಡಲಾಗುತ್ತದೆ ಜುಲೈ ತಿಂಗಳ ಸರಾಸರಿ ಬಿಲ್‌ನಲ್ಲಿ ವ್ಯತ್ಯಾಸಗಳಿದ್ದರೆ ಆಗಸ್ಟ್ ತಿಂಗಳಿನಿಂದ ನೈಜ ಮೀಟರ್ ರೀಡಿಂಗ್ ಆರಂಭವಾದಾಗ ಅದನ್ನು ಮುಂದಿನ ಬಿಲ್‌ಗಳಲ್ಲಿ ಹೊಂದಾಣಿಕೆ ಮಾಡಲಾಗುವುದು ಎಂದು ಬೆಸ್ಕಾಂ ತಿಳಿಸಿದೆ.


## ಪಾಕ್ ಅಧಿಕಾರಿಗಳ ಜೊತೆ ಆರ್‌ಎಸ್‌ಎಸ್ ರಹಸ್ಯ ಸಭೆ?

ಮಾತನಾಡಿದಾಗ 2 ವರ್ಷ ನನ್ನ ಹಿಂದೆ ಬಿದ್ದಿದ್ದರು. ಇವರು ಪಾಕಿಸ್ತಾನಕ್ಕೆ ಹೋಗಿ ಬಿರಿಯಾನಿ ತಿಂದು ಬಂದ ಬಳಿಕ ನನ್ನ ಸಹವಾಸ ಬಿಟ್ಟರು ಎಂದು ಕಿಡಿಕಾರಿದ್ದಾರೆ.ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆದು 2 ತಿಂಗಳಾಗಿದ್ದಾಗ ರಾಮ್ ಮಾಧವ್ ಅವರು ಲಂಡನ್‌ನಲ್ಲಿ ಸಭೆ ಮಾಡಿದ್ದಾರೆ. ನಮ್ಮ ಸರ್ಕಾರ ಕೇಂದ್ರದಲ್ಲಿದ್ದಾಗ ಭಯೋತ್ಪಾದನೆ ನಿಗ್ರಹವಾಗುವವರೆಗೂ ಪಾಕಿಸ್ತಾನದೊಂದಿಗೆ ಮಾತುಕತೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿತ್ತು ಎಂದು ತಿಳಿಸಿದ್ದಾರೆ.

## 2028ಕ್ಕೆ ಗೆಲುವು ಅಸಾಧ್ಯ:

ಗುರುತಿಸಿಕೊಂಡ ಅವರ ಶಕ್ತಿ, ಜನಪ್ರಿಯತೆ ತುಳಿಯಲು ಸಾಧ್ಯವೂ ಇಲ್ಲ ಎಂದು ತಿಳಿಸಿದರು. ಸಚಿವ ಸ್ಥಾನಕ್ಕಾಗಿ ಶಾಸಕರು ಲಾಬಿ ನಡೆಸುತ್ತಿರುವ ಬಗ್ಗೆ ಮಾತನಾಡಿ, ನನಗೆ ಮಂತ್ರಿ ಸ್ಥಾನ ಬೇಡ. ನನಗೆ ಕೊಟ್ಟರೂ ಸಚಿವ ಸ್ಥಾನ ಬೇಡ. ಹಾಗೆಂದು ವೈರಾಗ್ಯ ಎಂದೇನೂ ಇಲ್ಲ. ನಾನು ಎರಡು ವರ್ಷ ಸಚಿವನಾಗಿ ನನ್ನ ಕೆಲಸವನ್ನು ಪ್ರಾಮಾಣಿಕ, ದಕ್ಷತೆಯಿಂದ ಮಾಡಿದ್ದೇನೆ. ಹೀಗಾಗಿ, ಬೇರೆಯವರಿಗೂ ಅವಕಾಶ ಕೊಡಲಿ ಎಂದು ಹೇಳಿದರು.

## ನಿವೃತ್ತ ಶಿಕ್ಷಕ ಹೊನ್ನಯ್ಯ ನಿಧನ



ಮಂಡ್ಯ: ಇಲ್ಲಿನ ಹೊಸಹಳ್ಳಿ ಯ ರಾಜ್ಯ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಹೊನ್ನಯ್ಯ(85) ಜುಲೈ 1 ರ ಬುಧವಾರ ರಾತ್ರಿ ಅನಾರೋಗ್ಯ ದಿಂದ ದೈವಾಧೀನರಾಗಿರುತ್ತಾರೆ. ಇವರ ಅಂತ್ಯಸಂಸ್ಕಾರವನ್ನು ಜು.2 ರ ಗುರುವಾರ ಬೆಳಿಗ್ಗೆ 10-30 ಕ್ಕೆ ಹಾಲಹಳ್ಳಿಯ ಸತ್ಯ ಹರಿಶ್ಚಂದ್ರ ರುದ್ರಭೂಮಿಯಲ್ಲಿ ನೆರವೇರಿಸಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

# ಕಲಾವಿದರು ನೈಜ ಸೈನಿಕರು: ಪ್ರೊ.ಕೆ.ರಾಮಕೃಷ್ಣಯ್ಯ



ಮೈಸೂರು: ಒಂದು ರಾಷ್ಟ್ರದ ಗಡಿಯನ್ನು ಕಾಯುವ ಸೈನಿಕರು ಎಷ್ಟು ಮುಖ್ಯವೋ, ಈ ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಸೈನಿಕರಾಗಿ ಯುವ ಕಲಾವಿದರು ಅಷ್ಟೇ ಮುಖ್ಯವಾದ ಜವಾಬ್ದಾರಿ ಯನ್ನು ಹೊಂದಿದ್ದಾರೆ ಎಂದು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ರಾಮಕೃಷ್ಣಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಸಹಯೋಗದಲ್ಲಿ ಯುವ ಸೌರಭ 2026 ಕಾರ್ಯಕ್ರಮವನ್ನು ಕೆ.ಎಸ್.ಜಿ.ಎಚ್ ರಂಗಮಂದಿರ ದಲ್ಲಿ ಉದ್ಘಾಟಿಸಿ ಮಾತನಾಡಿದರು. ಕಲೆ ಎಂಬುದು ಕಣ್ಣಿಗೆ ಕಾಣಿಸದಿದ್ದರೂ, ಕಣ್ಣಿಗೆ ಕಟ್ಟುವ ಆಗೆ ವೇದಿಕೆಯ ಮೇಲೆ ಪ್ರದರ್ಶನ ಮಾಡುವ ಅದ್ಭುತ ಶಕ್ತಿ ಅದಕ್ಕಿದೆ. ಕಲೆಯ ಸೌಂದರ್ಯ, ಅದರ ನೋವು ಮತ್ತು ನಲಿವುಗಳನ್ನು ಪ್ರೇಕ್ಷಕರಿಗೆ ತಲುಪಿಸುವ ಶಕ್ತಿ ವಿವಿಧ ಕಲೆಗೆ ಇದೆ. ಕಲೆಗಳನ್ನು ಶಾಸ್ತ್ರೀಯವಾಗಿ ಕಲಿಸುವ ಜವಾಬ್ದಾರಿ ವಿಶ್ವವಿದ್ಯಾಲಯದ್ದಾದರೆ, ಆ ಕಲೆಗಳನ್ನು ಪೋಷಿಸಿ, ಜನಸಂ ಪರ್ಕದ ಮೂಲಕ ಸಮಾಜಕ್ಕೆ ತಲುಪಿಸುವ ಜವಾ ಬ್ದಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯದ್ದಾಗಿದೆ. ಸೌರಭ ಎಂದರೆ ಪರಿಮಳ, ಒಂದು ಹೂವು ಅರಳಿ ತನ್ನ ಪರಿಮಳವನ್ನು ಹರಡುವಂತೆ, ಯುವ ಕಲಾವಿದರು ತಮ್ಮಲ್ಲಿರುವ ಡೊಳ್ಳು ಕುಣಿತ, ಕಂಸಾಳೆ, ನಾಟಕ, ಶಾಸ್ತ್ರೀಯ ಸಂಗೀತ ಮತ್ತು ಭಾವಗೀತೆಗಳಂತಹ ವಿವಿಧ ಕಲಾ ಪ್ರಕಾರಗಳ ಮೂಲಕ ಸಮಾಜದಲ್ಲಿ ಕಲೆಯ ಪರಿಮಳವನ್ನು ಪಸರಿಸುತ್ತಿದ್ದಾರೆಂದರು.

ಡಾ.ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ್ ಮಾತನಾಡಿ ಸಂಗೀತ, ನೃತ್ಯ ಮತ್ತು ಪ್ರದರ್ಶಕ ಕಲೆಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಹಾಗೂ ಶೈಕ್ಷಣಿಕವಾಗಿ ಅದನ್ನು ಉಳಿಸಿ ಬೆಳೆಸುವುದು ನಮ್ಮ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶವಾಗಿದೆ. ಇದೇ ಕಲೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಸ್ಕೃತಿ ಇಲಾಖೆಯೂ ಕಾರ್ಯನಿರ್ವಹಿಸುತ್ತಿದ್ದು, ನಮ್ಮ ಎರಡೂ ಸಂಸ್ಥೆಗಳ ಗುರಿ ಒಂದೇ ಆಗಿದೆ. ಈ ಕಾರ್ಯಕ್ರಮದಲ್ಲಿ ಯುವ ಕಲಾವಿದರು ಭಾಗವಹಿಸಿ ಸುಗಮ ಸಂಗೀತ, ಜಾನಪದ ಗೀತೆಗಳು ಹಾಗೂ ಸಮೂಹ ನೃತ್ಯಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ವಿಶೇಷವಾಗಿ ಜಾನಪದ ನೃತ್ಯಗ ಳಾದ ತಮಟೆ ಮತ್ತು ಕಂಸಾಳೆ ನೃತ್ಯಗಳೊಂದಿಗೆ ಕಲಾವಿದರು ಗಣ್ಯರನ್ನು ಮೆರವಣಿಗೆಯಲ್ಲಿ ಕರೆತಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕಿ ನಿರ್ಮಲಾ ಮಠಮತಿ ಮಾತನಾಡಿ ಇಲಾಖೆಯು ವಿವಿಧ ವಯೋಮಾನದ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಚಿಗುರು-ಮಕ್ಕಳಿಗಾಗಿ, ಯುವ ಸೌರಭ - ಯುವಕರಿಗಾಗಿ ಮತ್ತು ಸೌರಭ-ಹಿರಿಯರಿಗಾಗಿ ಎಂಬ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿರುವುದು ಹೆಮ್ಮೆಯ ವಿಷಯ ಎಂದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಸೇರಿ ಇತರರು ಉಪಸ್ಥಿತರಿದ್ದರು.

# ಶಾಸಕ ಸ್ಥಾನದಿಂದ ವಜಾಗೊಳಿಸಿ

## ಪ್ರದೀಶ್ ಈಶ್ವರ್ ವಿರುದ್ಧ ರಾಜ್ಯಪಾಲರಿಗೆ ದೂರು | ಕಾಂಗ್ರೆಸ್‌ನಿಂದ ಉಚ್ಚಾಟಿಸುವಂತೆ ಒತ್ತಾಯ



ರಾಮನಗರ: ಒಕ್ಕಲಿಗ ಸಮುದಾಯದ ಪ್ರಮುಖ ನಾಯ ಕರ ಬಗ್ಗೆ ಕೀಳಾಗಿ ಮಾತನಾಡುವುದು, ಸಾರ್ವಜನಿಕವಾಗಿ ತೊಡೆ, ತೋಳುಗಲನ್ನು ತಟ್ಟಿ, ತಲೆಯ ಕೂದಲನ್ನು ಕಿತ್ತುಹಾಕುವ ಮೂಲಕ ಅಸಭ್ಯವಾಗಿ ವರ್ತನೆ ತೋರಿರುವ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರಾಜ್ಯಪಾಲರಿಗೆ ದೂರು ಸಲ್ಲಿಸುವುದಾಗಿ ಜಿಲ್ಲಾ ಸಮಾನ ಮನಸ್ಕರ ಒಕ್ಕಲಿಗ ವೇದಿಕೆ ಅಧ್ಯಕ್ಷ ಹನುಮಂತೇಗೌಡ ತಿಳಿಸಿದರು.

ನಗರದ ಹೊರವಲಯದಲ್ಲಿರುವ ಖಾಸಗಿ ಹೋಟೆಲ್‌ವೊಂದರಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಕೇಂದ್ರ ಸಚಿವ ಎಚ್.ಡಿ .ಕುಮಾರಸ್ವಾಮಿ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವ ಜೊತೆಗೆ ಒಕ್ಕಲಿಗ ಸಮುದಾಯದ ಬಗ್ಗೆ ಮಾತನಾಡುವ ಮೂಲಕ ಜಾತಿ, ಜಾತಿಗಳ ನಡುವೆ ವೈಷಮ್ಯ ಮೂಡಿಸುತ್ತಿರುವ ಶಾಸಕ ಪ್ರದೀಪ್ ಈಶ್ವರ್ ಅವರ ಶಾಸಕತ್ವವನ್ನು ತಕ್ಷಣ ರದ್ದುಪಡಿಸಬೇಕು. ಕಾಂಗ್ರೆಸ್ ಪಕ್ಷದ ವರೀಷ್ಠರನ್ನು ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದು ಆಗ್ರಹಿಸಿದರು.

### ಸಂಕುಚಿತ, ವಿಕೃತ ಮನಸ್ಸು

ಶಾಸಕ ಪ್ರದೀಪ್ ಈಶ್ವರ್ ತಮ್ಮ ಸಂಕುಚಿತ, ವಿಕೃತ ಮನಸ್ಸಿನಿಂದ ಹಿರಿಯ ರಾಜಕಾರಣಿಗಳನ್ನು ಹೆಸರಿಸಿ, ಏಕವಚನದಲ್ಲಿ ಮಾತನಾಡುವುದು ಸರಿಯಲ್ಲ. ಒಕ್ಕಲಿಗ ಸಮುದಾಯವನ್ನು ಗುರಿಯಾಗಿಸಿಕೊಂಡು ಹೇಳಿಕೆ ನೀಡುವ ಜೊತೆಗೆ ಒಕ್ಕಲಿಗ ಮುಖಂಡರು ಮತ್ತು ಜನಪ್ರತಿನಿಧಿಗಳ ವಿರುದ್ಧ ಮಾತನಾಡುವ ಮೂವ ಮೂಲಕ ಜಾತಿ ಸಂಘರ್ಷಕ್ಕೆ ದುಷ್ಪ್ರೇರಣೆ ನೀಡುತ್ತಿದ್ದಾರೆ ಎಂದು ಅವರು ದೂರಿದರು.

ಪ್ರದೀಪ್ ಈಶ್ವರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರಾಜ್ಯಪಾಲರು, ವಿಧಾನಸಭಾಧ್ಯಕ್ಷರು ಮತ್ತು ಕಾಂಗ್ರೆಸ್ ಪಕ್ಷದ ವರೀಷ್ಠರಾದ ರಾಹುಲ್‌ಗಾಂಧಿ ಅವರಿಗೆ ದೂರು ನೀಡಿ ಕ್ರಮಕ್ಕೆ ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮಂಜು, ಕುಮಾರಸ್ವಾಮಿ, ವಾಸು, ಸಂತೋಷ್ ಇನ್ನೂ ಮುಂತಾದವರು ಇದ್ದರು.

### ಇದು ಯಾವ ನ್ಯಾಯ?

ಖಾಸಗಿ ಕಾರ್ಯಕ್ರಮಗಳಲ್ಲಿ ತಪ್ಪುಗಳಾದಲ್ಲಿ ಕಾರ್ಯಕ್ರಮದ ಆಯೋಜಕರನ್ನು ಹೊಣೆಯನ್ನಾಗಿಸಲಾಗುತ್ತದೆ. ಆದರೆ, ಈ ಕಾರ್ಯಕ್ರಮದಲ್ಲಿ ನಡೆದಿರುವ ಅವ್ಯವಸ್ಥೆಗಳಿಗೆ ಕಾರ್ಯಕ್ರಮದ ಆಯೋಜಕರನ್ನು ಹೊಣೆಯಾಗಿಸದೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾರ್ವಜನಿಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇದು ಯಾವ ನ್ಯಾಯ, ಕಾರ್ಯಕ್ರಮದ ಆಯೋಜಕರ ವಿರುದ್ಧವೂ ಪ್ರಕರಣ ದಾಖಲಿಸಬೇಕು ಎಂದು ಅವರು ಒತ್ತಾಯಿಸಿದರು.

### ಪ್ರದೀಪ್ ಈಶ್ವರ್ ಅವರಿಗೆ ಪ್ರಶ್ನೆಗಳು

ಸಮಾನ ಮನಸ್ಕರ ಒಕ್ಕಲಿಗರ ವೇದಿಕೆ, ರಾಜ್ಯ ತಿಗಳ ಕ್ಷತ್ರಿಯ ಕ್ಷೇಮಾಭಿವೃದ್ಧಿ ಸೇವಾ ಟ್ರಸ್ಟ್, ಕೆಂಪೇಗೌಡ ಯುವ ವಾಹಿನಿ ಸಂಘಟನೆಗಳ ವತಿಯಿಂದ ಪ್ರದೀಪ್ ಈಶ್ವರ್ ಅವರಿಗೆ ಪ್ರಶ್ನೆಗಳನ್ನು ಕೇಳಲು ಬಯಸುತ್ತೇವೆ. ಪ್ರದೀಪ್ ಈಶ್ವರ್ ಅವರು ಯಾವ ಉದ್ದೇಶದಿಂದ ಈ ರೀತಿ ನಡೆದುಕೊಳ್ಳುತ್ತಿದ್ದಾರೆ? ಶಾಸಕ ಸ್ಥಾನದ ಇತಿ-ಮಿತಿಯನ್ನು ಅವರು ಅರಿತಿದ್ದಾರಾ? ಒಕ್ಕಲಿಗ ಜನಪ್ರತಿನಿಧಿಗಳ ಮೇಲೆ ಅವರಿಗೇಕೆ ಇಷ್ಟು ಸಿಟ್ಟು, ಶಾಸಕರಾಗಿದ್ದು ಕೊಂಡು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪ್ರಚೋದನಾಕಾರಿ ಭಾಷಣ ನಿಷೇಧ ಕಾಯ್ದೆ ಬಗ್ಗೆ ಅವರಿಗೆ ಅರಿವಿಲ್ಲವೇ? ಸಾರ್ವಜನಿಕವಾಗಿ ಈ ರೀತಿ ನಡೆದುಕೊಳ್ಳುವಂತೆ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಶಾಸಕರ ತರಬೇತಿಯಲ್ಲಿ ಹೇಳಿಕೊಡಲಾಗಿದೆಯೇ? ನಿಮ್ಮ ಇಂತಹ ನಡುವಳಿಕೆಯ ಹಿಂದೆ ನಿಮ್ಮ ಪಕ್ಷ ನಿಮ್ಮ ಹಿಂದೆ ಇದೆಯೇ? ಎಂಬಿತ್ಯಾದಿ ಪ್ರಶ್ನೆಗಳನ್ನು ಹನುಮಂತೇಗೌಡ ಅವರು ಕೇಳಿದ್ದಾರೆ.

### ಸಂಘರ್ಷವುಂಟು ಮಾಡಲೆಂದೇ ಬಂದರೆ?

ಪ್ರದೀಪ್ ಈಶ್ವರ್ ಅವರು ಚಿಕ್ಕಬಳ್ಳಾಪುರದ ಶಾಸಕರಾಗಿ ಹಲವು ರಾಷ್ಟ್ರೀಯ ಹಬ್ಬಗಳ ಕಾರ್ಯಕ್ರಮದಲ್ಲಿ ಪಾಲ್ಗೊಂಡಿಲ್ಲ. ಆದರೆ, ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಉತ್ಸಾಹ ತೋರಿರುವ ಉದ್ದೇಶವೇ ಅನುಮಾನಸ್ಪದವಾಗಿದ್ದು, ಸಂಘರ್ಷ ಉಂಟುಮಾಡಬೇಕು ಎಂಬ ಉದ್ದೇಶದಿಂದಲೇ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರು ಮತ್ತು ಹಿರಿಯ ನಾಯಕರು ತಕ್ಷಣ ಅವರ ವಿರುದ್ಧ ಕ್ರಮ ಜರುಗಿಸದೇ ಹೋದಲ್ಲಿ ರಾಜ್ಯದಾದ್ಯಂತ ಹೋರಾಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

# ನಗರಸಭೆ ವ್ಯಾಪ್ತಿಯ ಅಭಿವೃದ್ಧಿಗೆ 770 ಕೋಟಿ ರೂ ಅನುದಾನಕ್ಕೆ ಮುಖ್ಯಮಂತ್ರಿಗೆ ಮನವಿ



ರಾಮನಗರ: ಜಿಲ್ಲಾ ಕೇಂದ್ರ ರಾಮನಗರ ನಗರಸಭಾ ವ್ಯಾಪ್ತಿಯ ಸಮಗ್ರ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡುವಂತೆ ಸದಸ್ಯರೊಡಗೂಡಿ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಬುಧವಾರ ಮನವಿ ಸಲ್ಲಿಸಿ, ಒಟ್ಟು 772.70 ಕೋಟಿ ರೂ ಅನುದಾನದ ಅಗತ್ಯವಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಅವರು, ನಗರಸಭೆ ವ್ಯಾಪ್ತಿಯಲ್ಲಿ ಜನಸಂಖ್ಯೆ, ವ್ಯಾಪಾರ ಚಟುವಟಿಕೆಗಳು ಹೆಚ್ಚಾಗುತ್ತಿವೆ. ನಗರದ ವಿಸ್ತರಣೆ ವೇಗವಾಗಿ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೂಲ ಭೂತ ಸೌಕರ್ಯಗಳ ಅಭಿವೃದ್ಧಿ ಅತ್ಯಾವಶ್ಯಕವಾಗಿದೆ ಎಂದು ಅವರು ಮುಖ್ಯಮಂತ್ರಿಗಳ ಗಮನ ಸೆಳೆದಿದ್ದಾರೆ.

ನಗರವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಇನ್ನು ಆಗಬೇಕಾಗಿದೆ, ಕುಡಿಯುವ ನೀರಿನ ಯೋಜನೆ ವಿಸ್ತರಣೆಯಾಗಬೇಕಾಗಿದೆ, ಸೇತುವೆಗಳು, ಉದ್ಯಾನವಗಳ ಅಭಿವೃದ್ಧಿಯಾಗಬೇಕಾಗಿದೆ, ಕೆರೆಗಳ ಪುರುಜ್ಜೀವನ, ವಾಣಿಜ್ಯ ಸಂಕೀರ್ಣಗಳ ನಿರ್ಮಾಣ, ಸ್ಮಶಾನ ಅಭಿವೃದ್ಧಿ, ವೃತ್ತಗಳ ಸೌಂದರೀಕರಣಗಳ ಬಗ್ಗೆ ನಾಗರೀಕರು ಬಯಸಿದ್ದಾರೆ, ಇದು ಜನಪ್ರತಿನಿಧಿಗಳ ಕನಸೂಕೂಡ ಆಗಿದೆ. ಹೀಗಾಗಿ ಒಟ್ಟು 772.70 ಕೋಟಿ ರೂಗಳ ಅಗತ್ಯವಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

### ಯಾವ ಅಭಿವೃದ್ಧಿಗೆ, ಎಷ್ಟು ಅನುದಾನಕ್ಕೆ ಮನವಿ?

ನಗರಸಭೆವತಯಿಂದ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗಿರುವ ಮನವಿಯಲ್ಲಿ, ನಗರದಲ್ಲಿ ಯುಜಿಡಿ ವ್ಯವಸ್ಥೆ ಕಲ್ಪಿಸಲು 300 ಕೋಟಿ ರೂ, ನಗರಸಭೆಯ ಎಲ್ಲಾ 31 ವಾರ್ಡುಗಳಲ್ಲಿ ಬಡಾವಣೆಗಳ ಸಮಗ್ರ ಅಭಿವೃದ್ಧಿಗೆ 190 ಕೋಟಿ ರೂ, ಉದ್ಯಾನವನಗಳ ಅಭಿವೃದ್ಧಿಗೆ 12.40 ಕೋಟಿ ರೂ, ಅರ್ಕಾವತಿ ನದಿಗೆ ಅಡ್ಡಲಾಗಿ ಇನ್ನು 4 ಸೇತುವೆಗಳ ನಿರ್ಮಾಣದ ಅಗತ್ಯವಿದ್ದು, ಇದಕ್ಕೆ 25 ಕೋಟಿ ರೂ, ನಗರಸಭೆ ವ್ಯಾಪ್ತಿಯಲ್ಲಿ ಹಾದು ಹೋಗಿರುವ ಬೆಂಗಳೂರು-ಮೈಸೂರು ಹೆದ್ದಾರಿ ರಸ್ತೆಯ ಸಮಗ್ರ ಅಭಿವೃದ್ಧಿಗೆ 70 ಕೋಟಿ ರೂ, ಸೀರಹಳ್ಳಕ್ಕೆ ತಡೆಗೋಡಿ ನಿರ್ಮಿಸಲು 20 ಕೋಟಿ ರೂ, ನೆಟ್‌ಕಲ್ ಯೋಜನೆಗೆ ಸಂಬಂಧಿಸಿದಂತೆ ಒಳಚರಂಡಿ ಮಂಡಳಿಯಲ್ಲಿ ಡಿಜಟಲೀಕರಣ ವ್ಯವಸ್ಥೆಗೆ 60 ಕೋಟಿ ರೂ, ನಗರಕ್ಕೆ ಐದು ಪ್ರವೇಶದ್ವಾರಗಲನ್ನು ನಿರ್ಮಿಸಲು 2 ಕೋಟಿರೂ, ಅರ್ಕಾವತಿ ನದಿ ದಂಡೆಯ ಮೇಲಿರುವ ಐಡಿಎಸ್‌ಎಂಟಿ (ಡಾ.ರಾಜ್‌ಕುಮಾರ್) ಕಾಂಪ್ಲೆಕ್ಸ್ ನವೀಕರಣಕ್ಕೆ 5 ಕೋಟಿ ರೂ, ಸ್ಮಶಾನಗಳ ಅಭಿವೃದ್ಧಿಗೆ 5 ಕೋಟಿ ರೂ, ನಗರಸಭೆ ಕಚೇರಿ ಪಕ್ಕ ವಾಣಿಜ್ಯ ಸಂಕೀರ್ಣ ನಿರ್ಮಿಸಲು 25 ಕೋಟಿ ರೂ, ಅಂಬೇಡ್ಕರ್ ಭವನದ ನವೀಕರಣಕ್ಕೆ 5 ಕೋಟಿ ರೂ, ಪಿ.ಡಬ್ಲು.ಡಿ ವೃತ್ತದಿಂದ ರೈಲ್ವೆ ನಿಲ್ದಾಣ ವೃತ್ತದವರೆಗಿನ ರಸ್ತೆ ಅಭಿವೃದ್ಧಿಗೆ 5 ಕೋಟಿ ರೂ, ರೈಲು ನಿಲ್ದಾಣ ವೃತ್ತ, ಬಸ್ ನಿಲ್ದಾಣ ವೃತ್ತ, ಕೆಂಪೇಗೌಡ ವೃತ್ತಗಳ ಸೌಂದರ್ಯೀಕರಣಕ್ಕೆ 6 ಕೋಟಿ ರೂ, ಬಕ್ಷಿ ಕೆರೆ ಮತ್ತು ಬೋಳಪ್ಪನಹಳ್ಳಿ ಅಮಾನಿಕೆರೆಗಳ ಅಭಿವೃದ್ಧಿಗೆ 20 ಕೋಟಿ ರೂ, ನಗರ ಪೊಲೀಸ್ ಠಾಣೆ ಎದುರಿಗೆ ವಾಣಿಜ್ಯ ಸಂಕೀರ್ಣ ನಿರ್ಮಿಸಲು 5 ಕೋಟಿ ರೂ, ಯುಐಡಿಎಫ್ ಯೋಜನೆಯಡಿ ನಗರಸಭೆಯ ಪಾಲು ಶೇ 15 ತುಂಬಿಸಲು 12.30 ಕೋಟಿ ರೂ ಹೀಗೆ 772.70 ಕೋಟಿ ರೂಗಳ ಅನುದಾನ ಒದಗಿಸುವಂತೆ ಮನವಿಮಾಡಲಾಗಿದೆ.

### ಡಿಕೆಶಿ ಸಿಎಂ, ಅಭಿವೃದ್ಧಿಗೆ ಸುವರ್ಣ ಅವಕಾಶ

ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುವ ವೇಳೆ ಮಾತನಾಡಿದ ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ರಾಮನಗರದ ಅಭಿವೃದ್ಧಿ ಬಗ್ಗೆ ಮುಖ್ಯಮಂತ್ರಿಗಳು ಅನೇಕ ಬಾರಿ ಉದ್ದೇಶವನ್ನು ವ್ಯಕ್ತಪಡಿಸಿದ್ದಾರೆ. ಎಲ್ಲರ ಆಶಯದಂತೆ ಅವರು ಮುಖ್ಯಮಂತ್ರಿಗಳಾಗಿದ್ದಾರೆ, ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲೆಯ ಅಭಿವೃದ್ಧಿಗೆ ಇದೊಂದು ಸುವರ್ಣ ಅವಕಾಶ ಸಿಕ್ಕಂತಾಗಿದೆ. ಅವರ ದರ್ಶನವನ್ನು ಪಡೆಯುವುದು ಸಹ ಎಲ್ಲರ ಆಸೆಯಾಗಿತ್ತು ಜೊತೆಗೆ ಅಭಿವೃದ್ಧಿಯ ವಿಚಾರದಲ್ಲಿ ಭೇಟಿ ಮಾಡಿ ಮನವಿಯನ್ನು ಸಲ್ಲಿಸುವ ಉದ್ದೇಶದಿಂದ ಭೇಟಿಯಾಗಿರುವುದಾಗಿ ತಿಳಿಸಿದರು.

ಬೆಂಗಳೂರು ನಗರವನ್ನು ವಿಶ್ವದ ಗಮನ ಸೆಳೆಯುವ ಉದ್ದೇಶ ಮುಖ್ಯಮಂತ್ರಿಗಳಿಗಿದೆ. ಇದರೊಟ್ಟಿಗೆ ನಮ್ಮನ್ನು (ನಗರಸಭೆ ವ್ಯಾಪ್ತಿ) ಸಹ ಜೊತೆಗೆ ಕರೆದೊಯ್ಯಬೇಕು. ವಿಶ್ವ ಭೂಪಟದಲ್ಲಿ ಗುರುತಿಸುವಂತೆ ಮಾಡಬೇಕು ಎಂದು ಮನವಿ ಮಾಡಿದರು.

### ಅಭಿವೃದ್ಧಿಗೆ ಬದ್ಧ - ಸಿಎಂ ಡಿ.ಕೆ.ಶಿವಕುಮಾರ್

ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರು ನೀಡಿದ ಮನವಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮರ್, ಚುನಾವಣಾ ಸಂದರ್ಭದಲ್ಲಿ ನಗರಸಭಾ ವ್ಯಾಪ್ತಿಯ ಅಭಿವೃದ್ಧಿಗೆ ಭರವಸೆ ನೀಡಲಾಗಿತ್ತು. ರಾಮನಗರ ಟೌನ್ ಮಾತ್ರವಲ್ಲದೇ ಇಡೀ ಬೆಂಗಳೂರು ದಕ್ಷಿಣ ಜಿಲ್ಲೆಗೆ ವಿಶೇಷವಾದ ರೂಪ ಕೊಡಬೇಕು ಎಂಬುದು ನನ್ನ ಉದ್ದೇಶ. ಈಗ ಆಗದಿದ್ದರೆ, ಇನ್ನೆಂದಿಗೂ ಆಗುವುದಿಲ್ಲ ಎಂಬ ಅರಿವಿದೆ. ಅಭಿವೃದ್ಧಿ ವಿಚಾರದಲ್ಲಿ ಹಿಂದೆ ಏನೇನಾಗಿತ್ತು, ಎಂಬುದು ಹೇಳಿದರೆ ರಾಜಕೀಯ ಬಣ್ಣ ಪಡೆದುಕೊಳ್ಳುತ್ತೆ. ಈಗ ನಮ್ಮ ಜವಾಬ್ದಾರಿ ಇದೆ. ಜಿಲ್ಲೆಯ ಕ್ಷೇತ್ರಗಳ ಅಭಿವೃದ್ಧಿ ವಿಚಾರದಲ್ಲಿ ಈ ಇನ್ನುಳಿದ ಶಾಸಕರು ಸೇರಿ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದರು. ಅವರು ಸಹ ಸಹಾಯ ಮಾಡಬೇಕು ಎಂದು ತೀರ್ಮಾನ ಮಾಡಿದ್ದರು. ಈಗ ನೀಡಿರುವ ಮನವಿಯನ್ನು ಗಮನದಲ್ಲಿಟ್ಟುಕೊಂಡು ಯಾವ ರೀತಿ ಅನುದಾನ ಕೊಡಬೇಕು, ಬಡವರಿಗೆ ಯಾವ ರೀತಿ ನಿವೇಶನಗಳನ್ನು ಕೊಡಬೇಕು ಎಂಬುದರ ಬಗ್ಗೆ ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ತಿಳಿಸುತ್ತೇನೆ. ಬಡವರಿಗೆ ನಿವೇಶನಗಳನ್ನು ಕಲ್ಪಿಸಲು ಸಿದ್ದರಾಮಯ್ಯನವರು ಸ್ವಲ್ಪ ಅನುದಾನವನ್ನು ಮಂಜೂರು ಮಾಡಿದ್ದರು ಎಂದು ತಿಳಿಸಿದರು. ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ನಾಮಕರಣ ಮಾಡಿದ ನಂತರ ಜಿಲ್ಲೆಯ ಗೌರವ ಹೆಚ್ಚಾಗಿದೆ ಎಂಬುದನ್ನು ಎಲ್ಲರ ಗಮನಕ್ಕೆ ಬಂದಿದೆ. ಹೀಗಾಗಿ ಎಲ್ಲರನ್ನು ವಿಶ್ವಾಸಕ್ಕೆ ಪಡೆಯಿರಿ, ಮುಂದಿನ ಚುನಾವಣೆಗಳು ಸುಲಭವಾಗಲಿ ಎಂದು ಕೌನ್ಸಿಲರ್‌ಗಳನ್ನು ಉದ್ದೇಶಿಸಿ ತಿಳಿಸಿದರು. ಅಭಿವೃದ್ಧಿ ವಿಚಾರದಲ್ಲಿ ನೀವಿಟ್ಟಿರುವ ವಿಶ್ವಾಸವನ್ನು, ಗೌರವವನ್ನು ಕಾಪಾಡಿಕೊಳ್ಳುತ್ತೇನೆ ಎಂದರು. ಮತದಾರರಿಗೆ ಕೃತಜ್ಞತೆಗಳನ್ನು ಸಲ್ಲಿಸುವ ಸಭೆಗಳನ್ನು ಆಯೋಜಿಸುವಂತೆ ತಿಳಿಸಿದರು. ಅಭಿವೃದ್ಧಿ ವಿಚಾರದಲ್ಲಿ ನಾನು ಸ್ಪಂದಿಸುತ್ತೇನೆ. ಡಿ.ಕೆ.ಸುರೇಸ್, ಸಿ.ಪಿ.ಯೋಗೇಶ್ವರ್, ಎಚ್.ಸಿ.ಬಾಲಕೃಷ್ಣ, ಇಕ್ಬಾಲ್ ಹುಸೇನ್ ಅವರಿಗೂ ಅಭಿವೃದ್ಧಿ ವಿಚಾರಗಳ ಬಗ್ಗೆ ತಿಳಿಸುತ್ತೇನೆ ಎಂದರು. ಜಿಬಿಡಿಎ ಅಡಿಯಲ್ಲಿ ಎಐ ಸಿಟಿ ನಿರ್ಮಾಣ ಕುರಿತು ಮಾತನಾಡಿದ ಅವರು ಆ ಭಾಗದಲ್ಲಿ ಯಾವ ಊರಿನವರನ್ನು ಒಕ್ಕಲೆಬ್ಬಿಸಲು ಬಿಡುವುದಿಲ್ಲ, ಹಳ್ಳಿಗಳನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಮೊದಲ ಪುಟದಿಂದ

## ರಾಜ್ಯದಲ್ಲಿ ಬರ... ನಿರ್ವಹಣೆಗೆ ಒತ್ತು

ರಾಜಕೀಯವಾಗಿ ಮಾತನಾಡಲು ಹೋಗುವುದಿಲ್ಲ. ನಾವು ಕೊಟ್ಟ ವರದಿಗೆ ಶೇ.10ರಷ್ಟು ಪರಿಹಾರವೂ ಕೇಂದ್ರದಿಂದ ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಬರ ಘೋಷಣೆ ಮಾಡಲು ಮಾನದಂಡಗ ಳಿವೆ. ಮಳೆ ಬೀಳದಿರುವುದು, ಬೆಳೆ ನಷ್ಟ, ನೀರಿನ ಮಟ್ಟ ಲೆಕ್ಕ ಹಾಕಿ ಘೋಷಣೆ ಮಾಡಲಾಗುತ್ತದೆ. ಈ ಬಗ್ಗೆ ಸದ್ಯ ಚರ್ಚೆ ನಡೆದಿಲ್ಲ ಎಂದು ಸಚಿ ವರು ತಿಳಿಸಿದರು.

## ಅಧಿಕಾರ ಯಾರು ಕೊಟ್ಟರು?

ಸಿಂಧೂರ್‌ನಲ್ಲಿ ಹುತಾತ್ಮರಾದ ಭಾರತೀಯ ಸೈನಿಕರ ಹೆಸರುಗಳನ್ನು ಇಷ್ಟು ದಿನ ಮುಚ್ಚಿಟ್ಟಿದ್ದು ಯಾಕೆ? ಇಂತಹ ಪ್ರಶ್ನೆಗಳನ್ನು ನಾವು ಕೇಳಬೇಕಿದೆ. ಅದಕ್ಕೆ ಆರ್‌ಎಸ್‌ಎಸ್ ಉತ್ತರಿಸಬೇಕು ಎಂದು ಆಗ್ರಹಿಸಿದರು. ಬಿಜೆಪಿಯವರು ಚುನಾವಣೆ ಬಂದಾಗ, ಪಾಕಿಸ್ತಾನ, ಚಿಕನ್, ಮಟನ್, ಹಲಾಲ್, ಹಿಜಾಬ್, ಮಂಗಳ ಸೂತ್ರದ ಬಗ್ಗೆ ಮಾತನಾಡುತ್ತಾರೆ. ಆನಂತರ ಆರ್‌ಎಸ್‌ಎಸ್ ಮೂಲಕ ಸಭೆ ನಡೆಸುತ್ತಾರೆ ಎಂದು ಟೀಕಿಸಿದರು.

## ಬೆಟ್ಟದಲ್ಲಿ ಆಷಾಢ ಉತ್ಸವಕ್ಕೆ ಸಿದ್ಧತೆ

ಸಮಯವನ್ನು ನಿಗದಿ ಪಡಿಸಲಾಗುವುದು ಎಂದರು. ಚಾಮುಂಡಿ ಬೆಟ್ಟದಲ್ಲಿ ಪ್ಲಾಸ್ಟಿಕ್ ಬ್ಯಾನ್ ಮಾಡಬೇಕು. ಡಸ್ಟ್ ಬಿನ್ ವ್ಯವಸ್ಥೆ ಮಾಡಬೇಕು. ಸ್ವಚ್ಛತೆಯನ್ನು ಕಾಪಾಡಬೇಕು. ಬೆಟ್ಟದಲ್ಲಿ ವಾಸಿಸುತ್ತಿರುವ ಸ್ಥಳೀಯರಿಗೆ ತೊಂದರೆ ಆಗದಂತೆ ಆಧಾರ್ ಕಾರ್ಡ್ ನೋಡಿ ಪ್ರವೇಶ ನೀಡಬೇಕು. ಬೆಟ್ಟದಲ್ಲಿ ಇರುವ ನಮ್ಮ ಕ್ಲಿನಿಕ್ ನಲ್ಲಿ ದಿನದ 24 ಗಂಟೆ ವೈದ್ಯರು ಹಾಗೂ ಅಗತ್ಯ ಸಿಬ್ಬಂದಿ ಇರಬೇಕು. ದೇವಸ್ಥಾನದ ಬಳಿಯಲ್ಲಿ 3 ಆಂಬುಲೆನ್ಸ್ ವ್ಯವಸ್ಥೆ ಇರಬೇಕು. ಸೆಸ್ಕಾ ವತಿಯಿಂದ ಪಾರ್ಕಿಂಗ್ ಸ್ಥಳ ಹಾಗೂ ಬೆಟ್ಟಕ್ಕೆ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಸಚಿವ ಯತೀಂದ್ರ ಸೂಚಿಸಿದರು.

## ಗ್ಯಾರಂಟಿ ರದ್ದುಪಡಿಸಲು ಹುನ್ನಾರ

ಮಾಡಲು ಹೊರಟಿರುವುದು ಯಾವ ಸೀಮೆ ಗ್ಯಾರೆಂಟಿ ಸ್ವಾಮಿ? ಇಷ್ಟಕ್ಕೂ ಉಚಿತ ವಿದ್ಯುತ್ ನೀಡಲು ಜಾತಿ ಪ್ರಮಾಣ ಪತ್ರ ಯಾಕೆ? ಎಂದು ಪ್ರಶ್ನಿಸಿದ್ದಾರೆ. ಗೃಹಜ್ಯೋತಿ ಯೋಜನೆಯ ಫಲಾನುಭವಿಗಳು ರಾಜ್ಯದ ನಿವಾಸಿಗಳೋ, ಮತದಾರರೋ ಅಲ್ಲವೋ ಅಂತ ನಿರ್ಧಾರ ಮಾಡೋಕೆ ಮಾಹಿತಿ ಯಾಕೆ ಬೇಕು? ಪ್ಯಾನ್ ಕಾರ್ಡ್ ಮತ್ತು ಜಾತಿ ಪ್ರಮಾಣ ಪತ್ರ ಕೇಳುವ ಮೂಲಕ ನೀವು ಯಾರನ್ನು ಯೋಜನೆಯಿಂದ ಹೊರಗಿಡಲು ಸ್ಕೆಚ್ ಹಾಕುತ್ತಿದ್ದೀರಿ? ಗ್ಯಾರಂಟಿಗಳನ್ನು ನಿಭಾಯಿಸಲು ಹಣವಿಲ್ಲದೆ ಒದ್ದಾಡುತ್ತಿರುವ ಈ ಲೂಟಿ ಸರ್ಕಾರ, ಹೇಗಾದರೂ ಮಾಡಿ ಲಕ್ಷಾಂತರ ಬಡ ಹಾಗೂ ಮಧ್ಯಮ ವರ್ಗದ ಜನರನ್ನು ಗೃಹಜ್ಯೋತಿಯಿಂದ ವಂಚಿಸಲು ಮುಂದಾಗಿದೆ ಎಂದು ಟೀಕಿಸಿದ್ದಾರೆ.


# ಹುಲಿ ಸೆರೆಗೆ ಸಾಕಾನೆಗಳಿಂದ ಕೂಂಬಿಂಗ್ ಕಾರ್ಯಾಚರಣೆ

**ಸರಗೂರು:** ಕೃಷಿಕ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ಮುಂದುವರಿದಿದ್ದು,ಸಾಕಾನೆಗಳ ಸಹಾಯದಿಂದ ಅರಣ್ಯ ಇಲಾಖೆ ಕೂಂಬಿಂಗ್ ನಡೆಸಿದೆ.


ಈ ವೇಳೆ ಹುಲಿಯ ಯಾವುದೇ ಸುಳಿವು ಪತ್ತೆಯಾಗಿಲ್ಲ ಎನ್ನಲಾಗಿದೆ. ಸರಗೂರು ತಾಲೂಕಿನ ಬೆಣ್ಣೆಗೆರೆ ಸಮೀಪ ಶುಕ್ರವಾರ ರೈತ ಕಿರಣ್ ಹಾಗೂ ಸೋಮವಾರ ಎಸ್ ಟಿಪಿಎಫ್ ಸಿಬ್ಬಂದಿ ಕುಮಾರ್ ಎಂಬವರ ಮೇಲೆ ಹುಲಿ ದಾಳಿ ನಡೆಸಿ ಗಾಯಗೊಳಿಸಿತ್ತು. ಇದರಿಂದ ಆತಂಕ್ಕೀಡಾದ ಗ್ರಾಮಸ್ಥರು ಹುಲಿ ಸೆರೆಗೆ ಆಗ್ರಹಿಸಿದ್ದರು.

ಪರಿಣಾಮ ಅರಣ್ಯ ಇಲಾಖೆಯು ಸಾಕಾನೆಗಳಾದ ಅಭಿಮನ್ಯು, ಮಹೇಂದ್ರ, ಭಗೀರಥ ಹಾಗೂ ಹಿರಣ್ಯ ಆನೆಗಳ ಮೂಲಕ ಕಾರ್ಯಾಚರಣೆ ಆರಂಭಿಸಿತು. ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಎಲ್.ನಂದೀಶ್, ಎಸಿಎಫ್ ಪರಮೇಶ್, ಆರ್ ಎಫ್ ಒ ಅನಿತ್ ರಾಜ್, ಪಶುವೈದ್ಯರಾದ ಡಾ.ವಸೀಂ ಮಿರ್ಜಾ, ಡಾ.ಆದರ್ಶ, ಶಾರ್ಪ್ ಶೂಟರ್ ರಂಜನ್ ಸೇರಿದಂತೆ ಅರಣ್ಯ ಇಲಾಖೆ ಹಾಗೂ ಎಸ್.ಟಿ.ಪಿ.ಎಫ್ ಸಿಬ್ಬಂದಿ ಇದ್ದರು.






# ದಾಸೋಹಕ್ಕೆ 50 ಚೀಲ ಅಕ್ಕಿ



ಚಾಮರಾಜನಗರ, ದೇವನೂರಿನಲ್ಲಿ ಜು. 1 ಮತ್ತು 2 ರಂದು ನಡೆಯಲಿರುವ ಮಹಾತ್ಮ ಶ್ರೀ ಗುರು ಮಲ್ಲೇಶ್ವರರ 127ನೇ ಪುಣ್ಯಾರಾದನೆಗೆ ಚಾ.ನಗರ ಭಕ್ತದಿಂದ ಸಂಗ್ರಹಿಸಿದ್ದ 50 ಚೀಲ ಅಕ್ಕಿಯನ್ನು ದೇವನೂರು ಮಠಕ್ಕೆ ಕಳುಹಿಸಿಕೊಡಲಾಯಿತು.

ನಗರದ ಶ್ರೀಮಠದ ಅವರಣದಿಂದ ಅಕ್ಕಿ ತುಂಬಿಕೊಂಡು ಹೊರಟ ಗೂಡ್ಸ್ ಆಟೋಗೆ ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷರಾದ ಶ್ರೀ ಚನ್ನಬಸವಸ್ವಾಮೀಜಿ ಚಾಲನೆ ನೀಡಿ ಮಾತನಾಡಿ, ಮಹಾತ್ಮ ಶ್ರೀ ಗುರುಮಲ್ಲೇಶ್ವರರ 127ನೇ ಪುಣ್ಯಾರಾಧಣೆ ದೇವನೂರಿನಲ್ಲಿ ಎರಡು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ. ಲಕ್ಷಾಂತರ ಮಂದಿ ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ. ಹೀಗಾಗಿ ದಾಸೋಹಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಮಠದಕ್ಕೆ ಆಹಾರ ಪಧಾರ್ಥಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಅದರಂತೆ ಚಾಮರಾಜನಗರದ ಭಕ್ತ ವೃಂದವರು ದೇವನೂರು ಮಠಕ್ಕೆ ಅಕ್ಕಿಯನ್ನು ನೀಡುತ್ತಿರುವುದು ಪುಣ್ಯದ ಕಾರ್ಯವಾಗಿದೆ. ಶ್ರೀ ಗುರುಮಲ್ಲೇಶ್ವರರ ಪುಣ್ಯಾರಾಧಣೆ ಅಂಗವಾಗಿ ಬಸವ ಮಹಾದ್ವಾರ ಮತ್ತು ಕಲ್ಯಾಣ ಉದ್ಘಾಟನೆ ಶ್ರೀ ಗುರುಮಲ್ಲೇಶ್ವರ ರಥೋತ್ಸವ ಹಾಗು ತೆಪ್ಪೋತ್ಸವ ಎರಡು ದಿನಗಳ ಕಾಲ ನಡೆಯಲಿದ್ದು, ಈ ಪವಿತ್ರ ಕಾರ್ಯಗಳಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಮಹಾಸಭಾದ ನಿರ್ದೇಶಕ ಕಾವುದವಾಡಿ ಗುರು, ಪ್ರಸಾದ್ ಎಲ್ಐಸಿ, ಕಾಳನಹುಂಡಿ ಮಲ್ಲಿಕ್, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ವಸಂತಮ್ಮ, ರತ್ನಮ್ಮಬಸವರಾಜು, ಮಹದೇವಸ್ವಾಮಿ ಇನ್ಸೂರೇಷನ್, ಶಿವಕುಮಾರ್, ತೊರವಳ್ಳಿ ಕುಮಾರ್, ಗುರುಪ್ರಸಾದ್, ಬಸವರಾಜು, ವಿಶ್ವನಾಥ್ ಮೊದಲಾಧವರು ಇದ್ದರು.



## ಕೃಷ್ಣ ವಂದನ

ಸ್ನೇಹಾ ಆನಂದ್



### ಹೇ ಕೃಷ್ಣಾ!

ಶ್ಯಾಮಲಾ ಬಣ್ಣನಿವ,ಕೋಮಲಾ ಮನಸಿನವ
ಬಾಮೆಯ ಪತಿಯಿವನು, ರಾಧೆಯ ಪ್ರಿಯನು|

ಕಂದನಾಗಿ ಕರೆಯೇ ನಿಂದಳು ದೇವಕಿಯು,
ರಂಗನಾಗಿ ಕರೆಯೇ ಬಂದಳಾಶೋದೆ,
ಸಖನೆಂದು ಕರೆಯೆ ಧಾವಿಸಿದನು
ಸುದಾಮನು,
ಅಣ್ಣನೆಂದು ಕರೆಯೆ ಬಂದೆನೆಂದನು
ಬಲರಾಮ||

ಗೋವುಗಳನು ಕರೆಯೇ ಓಡೋಡಿ ಬರುವವು,
ಗೋಪಿಯರನು ಕರೆಯೇ ನಾಚುವರು
ನಯನದಲಿ,
ಭಕ್ತರನು ಕರೆಯೆ ಭರದಿಂದ ಬರುವರು,
ಎಷ್ಟು ಪುಣ್ಯವೋ ಕೃಷ್ಣಯ್ಯಾ ನಿನ್ನದೋ||

ಸಾವಿರಾರು ಭಕ್ತರು, ನೂರಾರು ಸುರರು,
ಅವಿರತವಾಗಿ ನಿನ್ನ ಭಜಿಸುವರೋ,
ಬೆರಳಿನಲಿ ಬೆಟ್ಟವನೆತ್ತಿದ ಹೇಮಗಿರೀಶನೇ
ಕೈಯೆತ್ತಿ ಮುಗಿಯುವೇ ವೆಂಕಟಗಿರಿವಾಸನೆ||

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಕೆಂಪೇಗೌಡರ ಆಡಳಿತ ಇಂದಿಗೂ ಮಾದರಿ

## ಕೆಂಪೇಗೌಡ ಜಯಂತಿ ಕಾರ್ಯಕ್ರಮ ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ನುಡಿನಮನ

ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಅವರ ಜನಪರ ಆಡಳಿತ ಇಂದಿಗೂ ಎಲ್ಲರಿಗೂ ಮಾದರಿಯಾಗಿದೆ ಎಂದು ಎಂ.ಎಸ್.ಐ.ಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಬಣ್ಣಿಸಿದರು.

ಚಾಮರಾಜನಗರದ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ನಾಡಪ್ರಭು ಶ್ರೀ ಕೆಂಪೇಗೌಡ ಅವರ 517ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಇಡೀ ವಿಶ್ವದಲ್ಲೇ ಪ್ರಸಿದ್ಧಿಯಾಗಿರುವ ಇಂದಿನ ಬೆಂಗಳೂರು ಕೆಂಪೇಗೌಡ ಅವರ ಕನಸಿನ ನಗರವಾಗಿದೆ. ಅಂದಿನ ಕಾಲದಲ್ಲಿ ಅತ್ಯಂತ ಸುಭಿಕ್ಷತೆಯಿಂದ ಕೂಡಿದ್ದ ವಿಜಯನಗರ ಸಾಮ್ರಾಜ್ಯದ ಮಾದರಿಯಲ್ಲಿಯೇ ಬೆಂಗಳೂರನ್ನು ಕಟ್ಟುವ ಮಹತ್ವಾಕಾಂಕ್ಷೆಯ ಕನಸನ್ನು ಅವರು ಕಂಡಿದ್ದರು. ಆ ನಿಟ್ಟಿನಲ್ಲಿ ಎಲ್ಲಾ ವರ್ಗಗಳ ಜನರಿಗೂ ಅವರವರ ಕುಲಕಸುಬಿಗೆ ಅನುಗುಣವಾಗಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟ ನಾಡಪ್ರಭು ಕೆಂಪೇಗೌಡರ ಜನಪರ ಆಡಳಿತವು ಇಂದಿಗೂ ಪ್ರಸ್ತುತ ಹಾಗೂ ಮಾದರಿಯಾಗಿದೆ ಎಂದರು.

### ದೂರದೃಷ್ಟಿಯ ಯೋಜನೆಗಳ ರೂವಾರಿ

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶಾಸಕರಾದ ಎಚ್.ಎಂ. ಗಣೇಶ್ ಪ್ರಸಾದ್ ಅವರು ಮಾತನಾಡಿ, ನಾಡಿನ ಅಭಿವೃದ್ಧಿಗಾಗಿ ಅನೇಕ ದೂರದೃಷ್ಟಿಯ ಯೋಜನೆಗಳನ್ನು ಅನುಷ್ಠಾನ ಮಾಡಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಅವರ ಅಂದಿನ ಶ್ರಮದ ಫಲವಾಗಿ ಇಂದು ಬೆಂಗಳೂರು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಅಂದು ಅವರು ಜಾರಿಗೆ ತಂದಿದ್ದ ಸಮಾನ ನೀರು ಹಂಚಿಕೆ ಯೋಜನೆಯು ಇಂದಿನ ದಿನಮಾನಕ್ಕೂ ಅತ್ಯಂತ ಪ್ರಸ್ತುತವಾಗಿದೆ. ಇಂತಹ ಮಹಾನ್ ನಾಯಕನ ಜೀವನಾದರ್ಶಗಳನ್ನು ನಾವೆಲ್ಲರೂ ಸ್ಮರಿಸಬೇಕಾಗಿದೆ ಎಂದು ಕಿವಿಮಾತು ಹೇಳಿದರು.



### ವಾಣಿಜ್ಯ ಪೇಟೆಗಳ ನಿರ್ಮಾಣ, ಸಮೃದ್ಧ ನಾಡಿನ ಕನಸು

ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ ಅವರು ಮಾತನಾಡಿ, ಕೆಂಪೇಗೌಡರು ಚಿಕ್ಕ ವಯಸ್ಸಿನಲ್ಲಿಯೇ 64 ವಿದ್ಯೆಗಳನ್ನು ಕರಗತ ಮಾಡಿಕೊಂಡ ಮಹಾನ್ ಪರಾಕ್ರಮಿಯಾಗಿದ್ದರು. ವಿಜಯ ನಗರದ ಸಾಮಂತ ರಾಜರಾಗಿದ್ದ ಅವರು, ಅಲ್ಲಿನ ವೈಭವವನ್ನು ಕಣ್ಣಾರೆ ಕಂಡು ತಮ್ಮ ನಾಡನ್ನೂ ಅಂತಹುದೇ ಸಮೃದ್ಧ ನಾಡನ್ನಾಗಿ ಕಟ್ಟುವ ಇರಾದೆ ಹೊಂದಿದ್ದರು. ಅಭಿವೃದ್ಧಿ ಪರ ಆರ್ಥಿಕ ನೀತಿಯನ್ನು ಯಶಸ್ವಿಯಾಗಿ ಜಾರಿ ಮಾಡಿದ್ದ ಕೆಂಪೇಗೌಡರು, ಕುಡಿಯುವ ನೀರು ಹಾಗೂ ವ್ಯವಸಾಯಕ್ಕೆ ಅನುಕೂಲವಾಗುವಂತೆ ಕೆರೆ-ಕಟ್ಟೆಗಳನ್ನು ನಿರ್ಮಿಸಿ, ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಬೆಂಗಳೂರಿನ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು. ಸಮಾಜದ ಎಲ್ಲಾ ವರ್ಗಗಳ ಏಳಿಗೆಗಾಗಿ ಆಯಾ ಜನಾಂಗದ ವೃತ್ತಿಗನುಗುಣವಾಗಿ ಚಿಕ್ಕಪೇಟೆ, ಅಕ್ಕಿಪೇಟೆ, ದೊಡ್ಡಪೇಟೆ, ಕಾಟನ್ಪೇಟೆ, ಚಾಮರಾಜಪೇಟೆ ಹೀಗೆ ವ್ಯಾಪಾರಕ್ಕಾಗಿ ಪ್ರತ್ಯೇಕ ಪೇಟೆಗಳನ್ನು ಬೆಂಗಳೂರಿನ ಸುತ್ತಲೂ ಸ್ಥಾಪಿಸಿ ಅದ್ಭುತ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಿದರು. ಇದರ ಪರಿಣಾಮವಾಗಿ ಇಂದು ಎಲ್ಲಾ ಜಾತಿ, ಧರ್ಮ, ಭಾಷೆಯ ಜನರು ನೆಲೆನಿಂತು ಸರ್ವಜನಾಂಗದ ಶಾಂತಿಯ ತೋಟವಾಗಿರುವ ಬೆಂಗಳೂರು, 'ಸಿಲಿಕಾನ್ ಸಿಟಿ'ಯಾಗಿ ವಿಶ್ವಪ್ರಸಿದ್ಧವಾಗಿದೆ. ನ್ಯಾಯಸಮ್ಮತ ಆಡಳಿತದ ಪರಿಕಲ್ಪನೆಗೆ ನಾಡಪ್ರಭು ಕೆಂಪೇಗೌಡರು ಭದ್ರ ಬುನಾದಿ ಹಾಕಿದ್ದರು ಎಂದು ಮರಿಸ್ವಾಮಿ ವಿವರಿಸಿದರು.

### ಬಹುಮಾನ ವಿತರಣೆ, ಗಣ್ಯರ ಉಪಸ್ಥಿತಿ

ಕಾರ್ಯಕ್ರಮದ ಅಂಗವಾಗಿ ನಾಡಪ್ರಭು ಕೆಂಪೇಗೌಡರ ಕುರಿತು ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಗೌರವಿಸಲಾಯಿತು. ಈ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜು, ಮೈಸೂರಿನ ಸಾಹಿತಿಗಳಾದ ಟಿ. ಸತೀಶ್ ಜವರೇಗೌಡ, ಸಮಾಜದ ಪ್ರಮುಖರಾದ ಚಿನ್ನಮುತ್ತು, ಪಣ್ಯದಹುಂಡಿ ರಾಜು, ಸೋಮಶೇಖರ್, ನಾಗೇಂದ್ರ, ಮಹೇಶ್ಗೌಡ, ಚಿನ್ನತಾಯಮ್ಮ, ಚಾ.ರಂ. ಶ್ರೀನಿವಾಸಗೌಡ ಸೇರಿದಂತೆ ಹಲವು ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.


### ಧರ್ಮಸಹಿಷ್ಣು ಆಡಳಿತ ಹಾಗೂ ಗಣ್ಯರ ಸ್ಮರಣೆ

ಜಿಲ್ಲಾಧಿಕಾರಿ ಶ್ರೀರೂಪ ಅವರು ಮಾತನಾಡಿ, ಅತ್ಯಂತ ವ್ಯವಸ್ಥಿತವಾಗಿ ಹಾಗೂ ಆಧುನಿಕ ಮಾದರಿಯಲ್ಲಿ ನಗರವನ್ನು ನಿರ್ಮಾಣ ಮಾಡುವಲ್ಲಿ ಕೆಂಪೇಗೌಡರು ಸದಾ ಅವಿಸ್ಮರಣೀಯ ವ್ಯಕ್ತಿಯಾಗಿದ್ದಾರೆ. ಯಾವುದೇ ಜಾತಿ ಅಥವಾ ಭೇದಭಾವವಿಲ್ಲದೆ ಧರ್ಮಸಹಿಷ್ಣು ಆಡಳಿತವನ್ನು ನೀಡಿ ಪ್ರತಿಯೊಬ್ಬರಿಗೂ ಸಮಾನವಕಾಶ ಕಲ್ಪಿಸಿದ್ದರು. ಅವರ ಆಡಳಿತ ಶೈಲಿ ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಎಚ್.ವಿ. ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಹಾಗೂ ಸಮಾಜದ ಮುಖಂಡರಾದ ಪುಟ್ಟಸ್ವಾಮಿಗೌಡ ಅವರು ವೇದಿಕೆಯಲ್ಲಿ ಮಾತನಾಡಿ ನಾಡಪ್ರಭು ಕೆಂಪೇಗೌಡರ ಜೀವನ, ಮಹಾನ್ ಸಾಧನೆಗಳನ್ನು ಸ್ಮರಿಸಿದರು.

# ಬರಗಿ ಕೊಂಡೋತ್ಸವ

ಗುಂಡ್ಲುಪೇಟೆ: ತಾಲ್ಲೂಕಿನ ಬರಗಿ ಗ್ರಾಮದಲ್ಲಿ ಸೋಮವಾರ ಮತ್ತು ಮಂಗಳವಾರ ಅದ್ದೂರಿಯಾಗಿ ಕೊಂಡೋತ್ಸವ ಜಾತ್ರೆ ವಿಜೃಂಭಣೆಯಿಂದ ನೆರವೇರಿತು ವಿವಿಧ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗಿಯಾಗಿದ್ದರು.


ಗ್ರಾಮಸ್ಥರು ಸೋಮವಾರ ಕಸಗಲಪುರ ಪಾರ್ವತಾಂಭೆಯ ಮೂಲ ಸ್ಥಳದಲ್ಲಿ ಇಡೀ ರಾತ್ರಿ ಪೂಜೆ ಸಲ್ಲಿಸಿ ಕೊಂಡೋತ್ಸವ ಆಯುವ ಮೂಲಕ ಅಚರಿಸಿದರು, ನಂತರ ಮಂಗಳವಾರ ದೇವಿಯ ಮೂರ್ತಿಯನ್ನು ತೇರಿನಲ್ಲಿ ಕೂರಿಸಿ ಗ್ರಾಮದ ತುಂಬ ವಿವಿಧ ಕಲಾತಂಡದೊಂದಿಗೆ ಮೆರವಣಿಗೆ ನಡೆಸಿದರು. ಬೆಳಿಗ್ಗೆಯಿಂದ ವಿವಿಧ ಗ್ರಾಮಗಳಿಂದ ಆಗಮಿಸಿದ ಭಕ್ತರಿಗೆ ಪ್ರಸಾದ ವ್ಯವಸ್ಥೆ ನಡೆಸಲಾಯಿತು, ಜಾತ್ರೆಯಲ್ಲಿ ತುಂತುರು ಮಳೆ ಹನಿ ಎಲ್ಲರನ್ನು ತಂಪಾಗಿಸಿತು.



# ಬಿಇಒ ಆರೋಗ್ಯ ವಿಚಾರಿಸಿದ ಮಾಜಿ ಸಚಿವ

ಎಚ್.ಡಿ.ಕೋಟೆ: ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ಅವರನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಸುರೇಶ್ ಕುಮಾರ್ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ರಾಜ್ಯದ 65 ತಾಲೂಕುಗಳ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿ ದಾಖಲಾತಿ ಕುರಿತಂತೆ ಬಿಇಒಗಳನ್ನು ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಆಯುಕ್ತರು, ಸರ್ವ ಶಿಕ್ಷಣ ಅಭಿಯಾನದ ನಿರ್ದೇಶಕರು ಜು.22ರಂದು ಬೆಂಗಳೂರಿನಲ್ಲಿ ಕರೆದಿದ್ದ ಸಭೆಗೆ ಹಾಜರಾಗಲು ಮೈಸೂರು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ರಾಜು (ಎಚ್.ಡಿ.ಕೋಟೆ), ರೇವಣ್ಣ, ಪ್ರಕಾಶ್, ಕೃಷ್ಣ, ಮಹೇಶ್ ಖಾಸಗಿ ವಾಹನದಲ್ಲಿ ತೆರಳುತ್ತಿದ್ದರು. ಮೈಸೂರು-ಬೆಂಗಳೂರು ರಸ್ತೆಯಲ್ಲಿ ವಾಹನದ ಚಕ್ರ ಸ್ಫೋಟಗೊಂಡು ಸಂಭವಿಸಿದ್ದ ತೀವ್ರ ಅಪಘಾತದಲ್ಲಿ ವಾಹನದ ಚಾಲಕ ಮೃತಪಟ್ಟಿದ್ದರು. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಂಗಾಂಗಳು ಗಾಯಗೊಂಡಿದ್ದವು. ಗಾಯಗೊಂಡ ಎಲ್ಲ ಅಧಿಕಾರಿಗಳನ್ನು ಬುಧವಾರ ಭೇಟಿ ಮಾಡಿದ ಮಾಜಿ ಸಚಿವ ಸುರೇಶ್ ಕುಮಾರ್ ಆರೋಗ್ಯ ವಿಚಾರಿಸಿದ್ದಾರೆ.



### ಬಿಇಒ ರಾಜು ಬಗ್ಗೆ ಮೆಚ್ಚುಗೆ

ರಾಜು ಅವರು ನಂಜನಗೂಡು ತಾಲೂಕಿನ ಹಾಗೂ ಹೆಗ್ಗಡದೇವನಕೋಟೆ ತಾಲೂಕಿನ ಶಿಕ್ಷಣಾಧಿಕಾರಿಯಾಗಿ ಮಾಡಿದ ಕೆಲಸಗಳನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಎಸ್.ಎಸ್.ಎಲ್.ಸಿ ಪರೀಕ್ಷೆ ಸಂದರ್ಭದಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳ ಮನೆ, ಮನೆಗಳಿಗೆ ಭೇಟಿ ನೀಡಿ, ಪರೀಕ್ಷೆಗೆ ಉತ್ತಮ ಸಿದ್ಧತೆ ನಡೆಸುವಂತೆ ಪ್ರೇರಣೆ ನೀಡಿದ್ದರು. ಮುಂಜಾನೆ ವೇಳೆ ವಿದ್ಯಾರ್ಥಿಗಳ ಮನೆಗಳಿಗೆಲ್ಲ ಹೋಗಿ ಎಬ್ಬಿಸಿ ಓದುವಂತೆ ಮಾಡಿದ್ದ ಇವರ ಕೆಲಸ ಅಂತ:ಕರಣದಿಂದ ಕೂಡಿತ್ತು ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಎಲ್ಲ ಅಧಿಕಾರಿಗಳು ಶೀಘ್ರವಾಗಿ ಗುಣಮುಖರಾಗಲೆಂದು ಸುರೇಶ್ ಕುಮಾರ್ ಹಾರೈಸಿದ್ದಾರೆ.

# ಅಂಚೆ ನೌಕರರಿಗೆ ಗೌರವ ಸನ್ಮಾನ



ಮೈಸೂರು: ಕನ್ನಡಾಂಬೆ ರಕ್ಷಣಾ ವೇದಿಕೆವತಿಯಿಂದ ರಾಷ್ಟ್ರೀಯ ಅಂಚೆ ನೌಕರರ ದಿನಾಚರಣೆ ಅಂಗವಾಗಿ ಸಮಾಜಕ್ಕೆ ಅನನ್ಯ ಸೇವೆ ಸಲ್ಲಿಸುತ್ತಿರುವ ಅಂಚೆ ನೌಕರರನ್ನು ಗುರುತಿಸಿ ಆತ್ಮೀಯವಾಗಿ ಗೌರವ ಸನ್ಮಾನ ಮಾಡಲಾಯಿತು.

ಕೆ.ಎಂ.ಪುಟ್ಟರಾಜು(ಬೆಳವಾಡಿ ಪೋಸ್ಟ್ ಮಾಸ್ಟರ್), ಕುಮಾರ್(ಪೋಸ್ಟ್ ಮ್ಯಾನ್), ಬಿ.ರಮೇಶ್, ಎಸ್. ಸರಸ್ವತಿ(ಬೆಳವಾಡಿ ಪೋಸ್ಟ್ ಆಫೀಸ್) ಅವರನ್ನು ನೌಕರರಿಗೆ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ರಾಜಶೇಖರ್ ಅಂಚೆ ಇಲಾಖೆ ದೇಶದ ಅತ್ಯಂತ ಹಳೆಯ ಹಾಗೂ ಜನವಿಶ್ವಾಸಗಳಿಸಿರುವ ಸೇವಾ ಸಂಸ್ಥೆಗಳಲ್ಲಿ ಒಂದಾಗಿದೆ ಎಂದರು. ಆಧುನಿಕ ತಂತ್ರಜ್ಞಾನ, ಮೊಬೈಲ್ ಮತ್ತು ಇಂಟರ್ನೆಟ್ ಯುಗದಲ್ಲಿಯೂ ಅಂಚೆ ನೌಕರರು ತಮ್ಮ ಸೇವಾ ಮನೋಭಾವವನ್ನು ಕಡಿಮೆ ಮಾಡದೆ, ದೇಶದ ಪ್ರತಿಯೊಬ್ಬ ನಾಗರಿಕರ ಮನೆ ಬಾಗಿಲಿಗೆ ಸರ್ಕಾರದ ಹಾಗೂ ಸಾರ್ವಜನಿಕ ಸೇವೆಗಳನ್ನು ತಲುಪಿಸುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಕನ್ನಡಾಂಬೆ ರಕ್ಷಣಾ ವೇದಿಕೆ ಖಜಾಂಚಿ ನಂಜುಂಡ ಮಾತನಾಡಿದರು. ಕಾರ್ಯಕ್ರಮದಲ್ಲಿ ವೇದಿಕೆಯ ರಾಜ್ಯ ಖಜಾಂಚಿ ನಂಜುಂಡ, ಮಹಿಳಾ ಘಟಕದ ಅಧ್ಯಕ್ಷೆ ಜಿ.ತಾರಾ, ಮೈಸೂರು ಪ್ರಾಂತ್ಯ ಗೌರವಾಧ್ಯಕ್ಷ ರವಿಗೌಡ, ಮೈಸೂರು ಪ್ರಾಂತ್ಯ ಕಾರ್ಯದರ್ಶಿ ನಾಗರಾಜ್, ಮೈಸೂರು ಮಹಿಳಾ ಘಟಕದ ಅಧ್ಯಕ್ಷೆ ವತ್ಸಲ, ಪರ್ವೀನ್ ತಾಜ್, ಚನ್ನನಾಯಕ, ಜನಾರ್ದನ್, ರವಿಗೌಡ ಬೆಳವಾಡಿ ಇನ್ನಿತರರು ಉಪಸ್ಥಿತರಿದ್ದರು.

ಗುರುನಮನ, ನಿವೃತ್ತ ಅಧಿಕಾರಿಗಳಿಗ ಗೌರವ ಸಮರ್ಪಣೆ, ಸ್ನೇಹ ಸಮ್ಮಿಲನ ಕಾರ್ಯಕ್ರಮ

# ಶಿಕ್ಷಕ ಸಮಾಜವನ್ನು ಸೃಷ್ಟಿಸುವ ಶಿಲ್ಪಿ: ಡಯಟ್ ಪ್ರಾಂಶುಪಾಲ

ಚಾಮರಾಜನಗರ, ಗುರುನಮನ, ನಿವೃತ್ತ ಅಧಿಕಾರಿಗಳಿಗೆ ಗೌರವ ಸಮರ್ಪಣೆ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ನಗರದಲ್ಲಿ ನಡೆಯಿತು.

ಡಯಟ್ ಪ್ರಾಂಶುಪಾಲ ಎಂ.ಕಾಶೀನಾಥ್ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿ, ಶಿಕ್ಷಕ ವೇತನಕ್ಕಾಗಿ ಪಾಠ ಮಾಡುವ ಸರ್ಕಾರಿ ನೌಕರ ಎಂದು ತಿಳಿದುಕೊಂಡಿದ್ದಾರೆ. ಆದರೆ ಸಮಾಜದಲ್ಲಿ ಶಿಕ್ಷಕರ ಪಾತ್ರ ಮಹತ್ತರವಾಗಿದ್ದು ಮಕ್ಕಳ ಭವಿಷ್ಯವನ್ನು ರೂಪಿಸುವ ಮಹತ್ತರ ಜವಬ್ದಾರಿ ಅವರ ಮೇಲಿದೆ ಎಂದು ಹೇಳಿದರು. ಕಲಬುರಗಿ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾ ವಿದ್ಯಾಲಯದ ಪ್ರವಾಚಕ ಯು.ಆರ್. ಲಿಂಗರಾಜೇಅರಸ್ ಮಾತನಾಡಿ. ನಿವೃತ್ತಿ ಹೊಂದಿದ ಮೇಲೆ ನಮಸ್ಕಾರ ಮಾಡುವುದರಲ್ಲಿ ಇರುವ ಪ್ರೀತಿ, ನಿವೃತ್ತಿಗೂ ಮುನ್ನಾ ಮಾಡುವ ನಮಸ್ಕಾರದಲ್ಲಿ ಇರುವುದಿಲ್ಲ ಏಕೆಂದರೆ ಅದು ಪೀಠಕ್ಕೆ ಕೊಡುವ ನಮಸ್ಕಾರವಾಗಿದೆ. ಇವತ್ತು ನಿಮಗೆ ಗೌರವ ಸಿಗುತ್ತಿದೆ ಎಂದರೆ ಅದು ಕೇವಲ ನಾವು ನಿರ್ವಹಿಸುತ್ತಿರುವ ವೃತ್ತಿ. ಸರ್ಕಾರ ಕೊಟ್ಟಿರುವ ಕೆಲಸ. ಅ ಕೆಲಸದಿಂದ ನಮಗೆ ಮಾರ್ಯಾದೆ ಹೊರತು ಅವರು ಕೈ ಮುಗಿತಿರುವುದು ನನಗೆ ಎಂದು ತಿಳಿದುಕೊಂಡರೆ ಅದು ಭ್ರಮೆ ಅನ್ನಿಸುತ್ತದೆ. ಆದ್ದರಿಂದ ವೃತ್ತಿಯನ್ನು ಪ್ರೀತಿಸಬೇಕು. ವಿಷಯವನ್ನು ಆಳವಾಗಿ ಅಧ್ಯಯನ ಮಾಡಬೇಕು ಭೋದನಾ ವಿಷಯವನ್ನು ಪ್ರೀತಿಸಬೇಕು ಎಂದರು.




ಕಾರ್ಯಕ್ರಮ ಆಯೋಜಕ ಸಿದ್ದರಾಜು ಮಾತನಾಡಿ, ನನ್ನ ಜೀವನದ ಅತ್ಯಂತ ಸಾರ್ಥಕ ಹಾಗೂ ಭಾವಪೂರ್ಣ ಕ್ಷಣಗಳಲ್ಲಿ ಒಂದಾಗಿದೆ. ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯಲ್ಲಿ.. ಶಿಕ್ಷಕನಾಗಿ ಸುಮಾರು 35 ವರ್ಷಗಳಿಗಿಂತ ಹೆಚ್ಚು ಕಾಲ ಸುದೀರ್ಘ ಅವಧಿ ಸೇವೆ ಸಲ್ಲಿಸಿದ ನಂತರ ಪೂಜ್ಯನೀಯ ಗುರುಗಳನ್ನು ಸ್ಮರಿಸುವ ಅವಕಾಶ ಸಿಕ್ಕಿದೆ ಎಂದು ತಿಳಿಸಿದರು.

### ಗುರುನಮನ, ಗೌರವ ಸಮರ್ಪಣೆ

ನಿವೃತ್ತ ಉಪ ನಿರ್ದೇಶಕರಾದ ಎನ್.ಚಂದ್ರೇಗೌಡ, ಯೋಜನಾಧಿಕಾರಿ ಎಸ್.ಎಸ್.ಮಂಜುನಾಥ್, ಹೆಚ್.ಟಿ. ಮಂಜುನಾಥ್, ಜಿಲ್ಲಾ ಸಮನ್ವಯಾಧಿಕಾರಿ ಪಿ.ಮಂಜುನಾಥ್, ಹಿರಿಯ ಉಪನ್ಯಾಸಕರಾದ ಸಿದ್ದರಾಜಾಚಾರ್, ಬಿ.ಎಸ್.ಕೆಂಪಲಿಂಗಪ್ಪ, ನಿವೃತ್ತ ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿ ಶಿವಕುಮಾರ್. ನಿವೃತ್ತ ಶಿಕ್ಷಣಾಧಿ ಕಾರಿಗಳಾದ ಅಂದಾನಿ, ಸೋಮಣ್ಣೆಗೌಡ, ನಿವೃತ್ತ ಮುಖ್ಯಶಿಕ್ಷಕರಾದ ಹೆಚ್.ಸಿ.ಮಾದಪ್ಪ, ಶಿವಲಿಂಗಪ್ಪ, ಶ್ರೀರಾಮಚಂದ್ರ ಪ್ರಶಿಕ್ಷಣ ಸಂಸ್ಥೆ ನಿವೃತ್ತ ಅಧೀಕ್ಷಕ ಆರ್.ಮರಿಮಾದಯ್ಯ, ನಿವೃತ್ತ ಶಿಕ್ಷಕ ಎಸ್.ಸಿ.ಚಿನ್ನಸ್ವಾಮಿ. ನಿವೃತ್ತ ಸಂಗೀತ ಶಿಕ್ಷಕ ಶಶಿಕಲಾ, ನಿವೃತ್ತ ಶಿಕ್ಷಕ ಕೆ.ಎಸ್.ಮಹದೇವಸ್ವಾಮಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ದೀನಬಂಧು ಟ್ರಸ್ಟ್ ಗೌರವ ಕಾರ್ಯದರ್ಶಿ ಜಿ.ಎಸ್.ಜಯದೇವ ಅಧ್ಯಕ್ಷತೆ ವಹಿಸಿದ್ದರು. ಮೈಸೂರಿನ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಪ್ರವಾಚಕ ಎನ್.ಲಕ್ಷ್ಮೀಪತಿ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ರಾಜೀವ್ ಇದ್ದರು.

# ಆರ್‌ಎಸ್‌ಎಸ್ ಕಾನೂನು ಪಾಲಿಸಲಿ: ಎನ್.ಭಾಸ್ಕರ್


ಮೈಸೂರು: ಆರ್‌ಎಸ್‌ಎಸ್ ವಿರುದ್ಧ ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪದಡಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ದೂರು ದಾಖಲಿಸಲು ಬೆಂಗಳೂರಿನ ಅಧೀನ ನ್ಯಾಯಾಲಯ ಸೂಚಿಸಿದೆ. ಪ್ರತ್ಯುತ್ತರವಾಗಿ ಪ್ರಿಯಾಂಕ್ ಖರ್ಗೆ ನ್ಯಾಯಾಲಯದ ಆದೇಶ ಪಾಲಿಸುವುದಾಗಿ ಹೇಳಿದ್ದಾರೆ.



ಪ್ರಿಯಾಂಕ್ ಅವರಂತೆಯೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಕಾನೂನು ಪಾಲಿಸುವುದಾಗಿ ಘೋಷಿಸಬೇಕು ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಒತ್ತಾಯಿಸಿದರು.

ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶ ಭಾರತ. ಸಾಂವಿಧಾನಕ ಸಂಸ್ಥೆಗಳನ್ನು ರಾಜಕೀಯವಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದರೂ ಅಂತಿಮವಾಗಿ ನ್ಯಾಯಾಲಯಗಳ ಮೇಲೆ ದೇಶದ ಜನತೆ ನಂಬಿಕೆ ಕಳೆದುಕೊಂಡಿಲ್ಲ. ಕೆಲವೊಮ್ಮೆ ನ್ಯಾಯಾಲಯಗಳು ಒಬ್ಬರಿಗೆ ಒಂದೊಂದು ರೀತಿ ತೀರ್ಮಾನ ಮಾಡುವುದು ಪ್ರಜಾಪ್ರಭುತ್ವದ ಮೇಲಿನ ಅನ್ಯಾಯದ ದಾಳಿ ಯಂತೆ ಗೋಚರಿಸುತ್ತದೆ ಎಂದು ವಿಷಾದಿಸಿದರು. ಶತಮಾನ ಪೂರೈಸಿರುವ ದೇಶದ ಬಹುದೊಡ್ಡ ಸಂಘಟನೆ ಎನಿಸಿರುವ ಆರ್‌ಎಸ್‌ಎಸ್ ನೋಂದಣಿಗೂ ಘನ ನ್ಯಾಯಾಲಯ ಸೂಚನೆ ನೀಡಬೇಕು ಕೋರಿದರು.

# ಮತದಾರರ ಪಟ್ಟಿ ಪರಿಷ್ಕರಣೆ ಕುರಿತ ಜಾಗೃತಿ ಜಾಥಾ




ಚಾಮರಾಜನಗರ, ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕೊಳ್ಳೇಗಾಲದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಾಥಾಗೆ ಪಟ್ಟಣದ ಡಾ. ಬಿ.ಆರ್ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಚಾಲನೆ ದೊರೆಯಿತು.

ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲ್ಲೂಕು ಆಡಳಿತ, ತಾಲೂಕು ಪಂಚಾಯತ್ ಮತ್ತು ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಜಾಥಾಗೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕುಮಾರ ಅವರು ಚಾಲನೆ ನೀಡಿದರು.

ಇದೇ ವೇಳೆ ಜಾಥಾವನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕುಮಾರ್ ಅವರು ಇಂದಿನಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವು ಪ್ರಾರಂಭವಾಗಿದ್ದು, ಮತದಾರರ ಪಟ್ಟಿ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ನಾಗರಿಕರು ತಪ್ಪದೇ ಭಾಗವಹಿಸಬೇಕು ಎಂದರು.

ಭಾರತ ಸಂವಿಧಾನದ 326ನೇ ವಿಧಿಯ ಪ್ರಕಾರ ಭಾರತದ ಪ್ರತಿಯೊಬ್ಬ ಪ್ರಜೆಯು ಮತದಾರರಾಗುವುದು ಸಂವಿಧಾನಾತ್ಮಕ ಹಕ್ಕಾಗಿದೆ. ಬೂತ್ ಮಟ್ಟದ ಅಧಿಕಾರಿಗಳು ಜುಲೈ 29 ರವರೆಗೆ ಮನೆ ಮನೆಗೆ ಭೇಟಿ ನೀಡಿ ಎನ್ಯೂಮರೇಷನ್ ಫಾರಂಗಳನ್ನು ನೀಡಲಿದ್ದಾರೆ. ಬೂತ್ ಮಟ್ಟದ ಅಧಿಕಾರಿಗಳಿಗೆ ಪ್ರತಿಯೊಬ್ಬರೂ ಸರಿಯಾದ ಮಾಹಿತಿಯನ್ನು ನೀಡಬೇಕು ಎಂದರು. ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಆಗಸ್ಟ್ 5 ರಿಂದ ಸೆಪ್ಟೆಂಬರ್ 4 ರವರೆಗೆ ಪ್ರಕ್ರಿಯೆ ನಡೆಯಲಿದ್ದು, ತಾಲೂಕಿನ ಯಾವೊಬ್ಬ ಮತದಾರರು ಮತದಾನದಿಂದ ಮತ್ತು ಮತದಾರರ ಪಟ್ಟಿಯ ಪರಿಷ್ಕರಣೆಯಿಂದ ದೂರ ಉಳಿಯದೆ ಎಲ್ಲರೂ ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಕುಮಾರ್ ಅವರು ತಿಳಿಸಿದರು. ಜಾಥಾ ಕಾರ್ಯಕ್ರಮವು ಡಾ. ಬಿ.ಆರ್ ಅಂಬೇಡ್ಕರ್ ಪ್ರತಿಮೆಯ ವೃತ್ತದಿಂದ ಆರಂಭವಾಗಿ ಪಟ್ಟಣದ ಡಾ.ರಾಜ ಕುಮಾರ್ ರಸ್ತೆಯ ಮಾರ್ಗವಾಗಿ ಸಾಗಿ ನಗರದ ಬಸ್ ನಿಲ್ದಾಣ ಮತ್ತು ಎಂ.ಜಿ. ಎಸ್.ವಿ ಕಾಲೇಜು ರಸ್ತೆ ಮೂಲಕ ತಾಲೂಕು ಪಂಚಾಯಿತಿ ಆವರಣದಲ್ಲಿ ಮುಕ್ತಾಯವಾಯಿತು. ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರಾದ ಸಂದೇಶ, ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳ, ಸಹಾಯಕ ಲೆಕ್ಕಾಧಿಕಾರಿ ರಾಜಣ್ಣ, ತಾಲ್ಲೂಕು ಮಟ್ಟದ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಅಧಿಕಾರಿಗಳು ಮತ್ತು ಸಿಬ್ಬಂದಿ ಜಾಥಾದಲ್ಲಿ ಪಾಲ್ಗೊಂಡಿದ್ದರು.

# ಎಸ್.ಐ.ಆರ್. ಕುರಿತು ಜಾಗೃತಿ




ಚಾಮರಾಜನಗರ, ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಇಂದು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಜಾಗೃತಿ ಕಾರ್ಯಕ್ರಮ ನಡೆಯಿತು.

ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಗಾರ್ಮೆಂಟ್ಸ್, ಕಾರ್ಖಾನೆ, ಸಣ್ಣ ಮತ್ತು ಕಿರು ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಹಾಗೂ ಮಾಲೀಕರಿಗೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಕಧಿಕಾರಿ ಮೋನಾ ರೋತ್ ಅವರ ನೇತೃತ್ವದಲ್ಲಿ ಅರಿವು ಮೂಡಿಸಲಾಯಿತು.ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಉತ್ತೇಜಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಇಂದಿನಿಂದ ಜುಲೈ 29 ರವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿ.ಎಲ್.ಒ) ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಪ್ರತಿ ಮತದಾರರಿಗೆ ಗಣತಿ ನಮೂನೆ (ಎನ್ಯುಮಿರೇಶನ್ ಫಾರ್ಮ್) ವಿತರಿಸಲಿದ್ದಾರೆ. ಇದನ್ನು ಭರ್ತಿ ಮಾಡಿ ನೀಡಬೇಕು ಎಂದರು.ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಪ್ರಕ್ರಿಯೆ ಕುರಿತು ವೇಳಾಪಟ್ಟಿಯ ಅಂಶಗಳ ಬಗ್ಗೆ ಅರಿವು ಮೂಡಿಸುವ ಭಿತ್ತಿ ಫಲಕಗಳನ್ನು ಪ್ರದರ್ಶಿಸಲಾಯಿತು. ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠ ರಾಜೇ ಅರಸ್, ಜಿಲ್ಲಾ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರಾದ ದೊರೈರಾಜು, ಸಹಾಯಕ ನಿರ್ದೇಶಕರಾದ ವಿಜಯ್‌ಕುಮಾರ್ ಉಪಸ್ಥಿತರಿದ್ದರು.


## ಕಾಳಮ್ಮ ದೇವಸ್ಥಾನಕ್ಕೆ ಕನ್ನ

ಗುಂಡ್ಲುಪೇಟೆ: ತಾಲೂಕಿನ ಬೇರಂಬಾಡಿ ಗ್ರಾಮದಲ್ಲಿ ಕಾಳಮ್ಮ ದೇವಸ್ಥಾನದ ಬಾಗಿಲ ಬೀಗ ಮುರಿದಿರುವ ಕಳ್ಳರು ಚಿನ್ನ ಮತ್ತು ನಗದನ್ನು ದೋಚಿಕೊಂಡು ಪರಾರಿಯಾ ಗಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.



ಗ್ರಾಮದ ಗೋಪಾಲಪುರಕ್ಕೆ ಹೋಗುವ ರಸ್ತೆಯಲ್ಲಿ ಬೇರಂಬಾಡಿ ಗ್ರಾಮದ ವಿಶ್ವ ಕರ್ಮ ಸಮುದಾಯದ ಕಾಳಮ್ಮ ದೇವಸ್ಥಾನದ ಗರ್ಭಗುಡಿಯ ಬೀಗ ಮುರಿದಿರುವ ಕಳ್ಳರು ವಿಗ್ರಹ ಮೇಲಿದ್ದ ಸುಮಾರು 8-10 ಗ್ರಾಂ. ಚಿನ್ನದ ತಾಳಿ, ಗುಂಡು, ಬೆಳ್ಳಿಯ ಪದಾರ್ಥ ಹಾಗೂ ಹುಂಡಿಯ ಸಮೇತ ಸುಮಾರು 3-4 ಲಕ್ಷ ಹಣವನ್ನು ಕಳ್ಳರು ಕದ್ದೊಯ್ದಿದ್ದಾರೆ. ಕಳೆದ ಎರಡು ವರ್ಷಗಳಿಂದ ಹುಂಡಿಯಲ್ಲಿ ಶೇಖರಣೆಯಾಗಿದ್ದ ಹಣವನ್ನು ಕಳ್ಳತನ ಮಾಡಿರುವ ಕಳ್ಳರನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಜರುಗಿಸಬೇಕು. ತಾಲೂಕಿನ ದೇವಾಲಯಗಳನ್ನೇ ಗುರಿಯಾಗಿಸಿಕೊಂಡು ಕಳ್ಳತನ ಪ್ರಕರಣಗಳು ನಡೆಯುತ್ತಿದ್ದು ಸಂಬಂಧಪಟ್ಟ ಪೊಲೀಸ್ ಇಲಾಖೆಯವರು ಕಳ್ಳತನ ಪ್ರಕರಣಗಳು ಮರುಕಳಿಸದಂತೆ ಗಸ್ತು ತಿರುಗಬೇಕೆಂದು ಕನ್ನಡ ಕಸ್ತೂರಿ ನ್ಯಾಯಪರ ವೇದಿಕೆಯ ಜಿಲ್ಲಾಧ್ಯಕ್ಷ ಹಾಗೂ ತಾಲೂಕು ಉಸ್ತುವಾರಿ ರಂಗಪ್ಪ ನಾಯಕ ಆಗ್ರಹಿಸಿದ್ದಾರೆ. ಗ್ರಾಮಸ್ಥರು ಕಳ್ಳತನ ನಡೆದಿರುವ ಬಗ್ಗೆ ದೂರು ದಾಖಲಿಸಿದ್ದು ಘಟನಾ ಸ್ಥಳಕ್ಕೆ ಗುಂಡ್ಲುಪೇಟೆ ಪೊಲೀಸರು ಭೇಟಿ ನೀಡಿ ಮಾಹಿತಿ ಪಡೆದುಕೊಂಡು ಮಹಜರು ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಗೃಹಜ್ಯೋತಿ ಫಲಾನುಭವಿಗಳ ಮಾಹಿತಿ ಸಂಗ್ರಹಣೆ



ಮೈಸೂರು: ರಾಜ್ಯ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಗಳಲ್ಲೊಂದಾದ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮನೆ-ಮನೆ ಭೇಟಿ ಹಾಗೂ ಮಾಹಿತಿ ಸಂಗ್ರಹಣೆ ಕಾರ್ಯ ಬುಧವಾರದಿಂದ ಆರಂಭಗೊಂಡಿದ್ದು, ಗ್ರಾಹಕರು ಸಹಕರಿಸುವಂತೆ ಚಾವಿಸನಿನಿ (ಸೆಸ್ಕ್) ಕೋರಿದೆ.

ಸೆಸ್ಕ್ 2023ರ ಜುಲೈ ತಿಂಗಳಲ್ಲಿ ಜಾರಿಗೆ ಬಂದಿರುವ ಗೃಹಜ್ಯೋತಿ ಯೋಜನೆಯ ಮಾಹಿತಿ ಸಂಗ್ರಹ ಕಾರ್ಯ ನಡೆಯುತ್ತಿದ್ದು, ಸೆಸ್ಕ್ ನ ಮೀಟರ್ ರೀಡರ್‌ಗಳು ಹಾಗೂ ಸಿಬ್ಬಂದಿ, ಗ್ರಾಹ ಕರ ಮನೆಗಳಿಗೆ ಭೇಟಿ ನೀಡಿ, ಫಲಾನುಭವಿಗಳ ದಾಖಲೆ ಹಾಗೂ ಮಾಹಿತಿ ಸಂಗ್ರಹಿಸಿ, ಮೊಬೈಲ್ ಆಪ್ ಹಾಗೂ ಘೋಷಣಾ ಪತ್ರದ ಮೂಲಕ ಅರ್ಜಿ ಭರ್ತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸ ಲಿದ್ದಾರೆ. ಸೆಸ್ಕ್ ಸಿಬ್ಬಂದಿ ಮನೆ, ಮನೆ ಭೇಟಿ ಸಂದರ್ಭದಲ್ಲಿ ಆಧಾರ್ ಕಾರ್ಡ್, ಫಲಾನುಭವಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ (ವೋಟರ್ ಐಡಿ), ಪ್ಯಾನ್ ಕಾರ್ಡ್, ಬಾಡಿಗೆ ಒಪ್ಪಂದದ ಪತ್ರಗಳು (ಅನ್ವಯಿಸುವಲ್ಲಿ ಮಾತ್ರ), ರೇಷನ್ ಕಾರ್ಡ್ ಮತ್ತು ಜಾತಿ ಪ್ರಮಾಣ ಪತ್ರವನ್ನು ನೀಡಬೇಕೆಂದು ಈ ಮೂಲಕ ಕೇಳಿಕೊಂಡಿದ್ದಾರೆ. ಈ ಪ್ರಕ್ರಿಯೆಗೆ ಮೀಟರ್ ರೀಡರ್‌ಗಳ ಮೂಲಕ ಸ್ಥಳದಲ್ಲೇ ಪರಿಶೀಲನೆ ಮಾಡುವುದು ಏಕೈಕ ಮಾರ್ಗವಾಗಿದ್ದು, ಗ್ರಾಹಕರು ಮತ್ತು ಫಲಾನುಭವಿಗಳು ಸೆಸ್ಕ್‌ನ ಅಧಿ ಕೃತ ಮೀಟರ್ ರೀಡರ್‌ಗಳ ಗುರುತಿನ ಚೀಟಿಯನ್ನು ಪರಿಶೀಲಿಸಿ, ಸಂಪೂರ್ಣ ಸಹಕಾರ ನೀಡಿ, ಪರಿಶೀಲನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೆಸ್ಕ್ ಮನವಿ ಮಾಡಿದೆ.

ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮಾಹಿತಿ ಸಂಗ್ರಹಣ ಕಾರ್ಯ ಆರಂಭಗೊಂಡ ಹಿನ್ನೆಲೆಯಲ್ಲಿ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಎಂ.ಎಸ್.ಅರ್ಚನಾ ಖುದ್ದಾಗಿ ಗ್ರಾಹಕರ ಮನೆಗಳಿಗೆ ಭೇಟಿ ನೀಡಿ ಫಲಾನುಭವಿಗಳ ದಾಖಲೆ ಪರಿಶೀಲನೆ ನಡೆಸಿದರು. ಈ ಸಂದರ್ಭ ದಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕ ಎಲ್.ಲೋಕೇಶ್, ಮುಖ್ಯ ಆರ್ಥಿಕ ಅಧಿಕಾರಿ ಜಿ.ರೇಣುಕಾ, ಪ್ರಧಾನ ವ್ಯವಸ್ಥಾಪಕ ಆರ್. ರಾಮಸ್ವಾಮಿ, ಅಧೀಕ್ಷಕ ಇಂಜಿ ನಿಯರ್ ಸುನಿಲ್ ಕುಮಾರ್, ಅಧಿಕಾರಿಗಳಾದ ಸುಭಾಷ್, ರಮೇಶ್, ಇಂದ್ರಾಣಿ ಇತರರಿದ್ದರು.

# ಹೈನುಗಾರಿಕೆಯಿಂದ ಸ್ವಾವಲಂಬನೆ

## ಬಸವಾಪುರದಲ್ಲಿ ನೂತನ ಹಾಲು ಉತ್ಪಾದಕರ ಸಂಘಕ್ಕೆ ಶಾಸಕರಿಂದ ಚಾಲನೆ



ಗುಂಡ್ಲುಪೇಟೆ ತಾಲೂಕಿನ ಬಸವಾಪುರ ಗ್ರಾಮದಲ್ಲಿ ನೂತನವಾಗಿ ಆರಂಭಿಸಲಾದ ಹಾಲು ಉತ್ಪಾದಕ ಸಂಘವನ್ನು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಚಾಮುಲ್ ನಿರ್ದೇಶಕರುಗಳಾದ ಎಚ್.ಎಸ್. ನಂಜುಂಡಪ್ರಸಾದ್ ಹಾಗೂ ಎಂ.ಪಿ. ಸುನೀಲ್ ಅವರು ನೂತನ ಘಟಕಕ್ಕೆ ಚಾಲನೆ ನೀಡಿದರು.

ಶಾಸಕ ಗಣೇಶ್ ಪ್ರಸಾದ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಗುಂಡ್ಲುಪೇಟೆ ಮಾನವೀಯತೆ ಹಾಗೂ ಬಾಂಧವ್ಯಕ್ಕೆ ಬೆಲೆ ಕೊಡುವ ಶಾಂತಿಯುತ ಸ್ಥಳವಾಗಿದೆ. ಹೈನುಗಾರಿಕೆಯು ರೈತರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಅತ್ಯಂತ ಸಹಕಾರಿಯಾಗಿದೆ ಎಂದರು. ಬಸವಾಪುರದಲ್ಲಿ ನಿರ್ಮಾಣವಾಗುತ್ತಿರುವ ಸಮುದಾಯ ಭವನವನ್ನು ಪೂರ್ಣಗೊಳಿಸಲು ಮತ್ತು ಶಾಲೆಯ ಸುತ್ತುಗೋಡೆ ನಿರ್ಮಾಣ ಮಾಡಲು ಅಗತ್ಯ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು. ತಾಲೂಕಿನ 180 ಹಳ್ಳಿಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಮುಂದುವರೆದ ಕಾಮಗಾರಿಗಳಿಗೂ ಅನುದಾನ ಒದಗಿಸಲಾಗುವುದು. ಮುಂಬರುವ ದಿನಗಳಲ್ಲಿ ತಾಲೂಕಿನಾದ್ಯಂತ 65 ಸಮುದಾಯ ಭವನಗಳನ್ನು ಉದ್ಘಾಟಿಸಲಾಗುವುದು ಹಾಗೂ ಎಲ್ಲೂ ನೀರಿನ ಸಮಸ್ಯೆಯಾಗದಂತೆ ಸೂಕ್ತ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

**ಸ್ವಂತ ಕಟ್ಟಡ ನಿರ್ಮಾಣದ ಭರವಸೆ**

ಎಚ್.ಎಸ್. ನಂಜುಂಡಪ್ರಸಾದ್ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್ ಮಾತನಾಡಿ, ಪ್ರತಿವರ್ಷ ವಾರ್ಷಿಕ ಸಭೆಗಳಲ್ಲಿ ಬಸವಾಪುರದಲ್ಲಿ ಹೊಸದಾಗಿ ಹಾಲು ಉತ್ಪಾದಕ ಸಂಘ ಸ್ಥಾಪಿಸುವಂತೆ ಬೇಡಿಕೆ ಇಡಲಾಗುತ್ತಿತ್ತು. ಆ ಬೇಡಿಕೆ ಈಗ ಈಡೇರಿದ್ದು, ನೂತನ ಸಂಘ ಕಾರ್ಯಾರಂಭ ಮಾಡಿದೆ. ಜುಲೈ 1ರಿಂದಲೇ ಇಲ್ಲಿ ಹಾಲಿನ ಶೇಖರಣೆ ಪ್ರಾರಂಭವಾಗಲಿದೆ. 1980ರಲ್ಲಿ ಪ್ರಾರಂಭವಾದ ಹಳೆಯ ಪುತ್ತನಪುರ ಸಂಘವು ಇದೀಗ ಬಿಎಂಸಿ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಹೊಸ ಸಂಘಕ್ಕೆ ಒಂದು ವರ್ಷ ಪೂರ್ಣಗೊಂಡ ಬಳಿಕ ಊರಿನಿಂದ ನಿವೇಶನ ಒದಗಿಸಿದರೆ ಚಾಮುಲ್, ಕರ್ನಾಟಕ ಹಾಲು ಮಹಾಮಂಡಳಿ, ಶಾಸಕರು ಹಾಗೂ ಧರ್ಮಸ್ಥಳ ಸಂಘದ ಸಹಯೋಗದೊಂದಿಗೆ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಿಕೊಡಲಾಗುವುದು. ಒಕ್ಕೂಟದಿಂದ ನಿರಂತರವಾಗಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಕಾಡಾ ಅಧ್ಯಕ್ಷ ಹಂಗಳ ನಂಜಪ್ಪ, ಕರ್ನಾಟಕ ಹಾಲು ಮಹಾ ಮಂಡಳಿಯ ಮಾಜಿ ನಿರ್ದೇಶಕ ಪಿ.ಬಿ. ರಾಜಶೇಖರ್, ಹಾಲು ಉತ್ಪಾದಕ ಸಂಘದ ಅಧ್ಯಕ್ಷ ಮಹದೇವಶೆಟ್ಟಿ, ಪಿಎಸಿಸಿ ಅಧ್ಯಕ್ಷ ಗೌ. ಮಹದೇವಪ್ಪ, ಪುತ್ತನಪುರ ಹಾಲು ಉತ್ಪಾದಕ ಸಂಘದ ಅಧ್ಯಕ್ಷ ಸುರೇಶ್, ಪ್ರಮುಖರಾದ ನಾಗರಾಜು, ಕೂಸೆಗೌಡ, ಪವನ್ ಕುಮಾರ್, ಸುಬ್ಬಶೆಟ್ಟಿ, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ವಿಸ್ತರಣಾಧಿಕಾರಿ ಸರಸ್ವತಿ, ಒಕ್ಕೂಟದ ವಿಸ್ತರಣಾಧಿಕಾರಿಗಳಾದ ಪ್ರಕಾಶ್, ಮಂಜೇಶ್, ಸಿದ್ದಲಿಂಗೇಶ್, ಉದಯ್ ಕುಮಾರ್ ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

### ಖಾಸಗಿ ಡೇರಿಗಳಿಗಿಂತ ಒಕ್ಕೂಟವೇ ಲಾಭದಾಯಕ

ಎಂ.ಪಿ. ಸುನೀಲ್ ಮತ್ತೋರ್ವ ಚಾಮುಲ್ ನಿರ್ದೇಶಕ ಎಂ.ಪಿ. ಸುನೀಲ್ ಮಾತನಾಡಿ, ಬಸವಾಪುರ ಗ್ರಾಮದ ರೈತರು ಈ ಹಿಂದೆ ಹಾಲು ಹಾಕಲು ಪುತ್ತನಪುರಕ್ಕೆ ಹೋಗಬೇಕಿತ್ತು. ಮಳೆಗಾಲದಲ್ಲಿ ಹಾಗೂ ಬೆಳಗಿನ ಜಾವದಲ್ಲಿ ಕಾಡುಪ್ರಾಣಿಗಳ ಉಪಟಳದ ನಡುವೆ ಅಲ್ಲಿಗೆ ತೆರಳುವುದು ರೈತರಿಗೆ ತೀವ್ರ ಸಮಸ್ಯೆಯಾಗಿತ್ತು. ಈ ನಿಟ್ಟಿನಲ್ಲಿ ಬಸವಾಪುರದಲ್ಲಿಯೇ ನೂತನ ಸಂಘ ಪ್ರಾರಂಭಿಸಿರುವುದು ರೈತರಿಗೆ ವರದಾನವಾಗಿದೆ. ಪ್ರಸ್ತುತ ಪ್ರತಿದಿನ 500 ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಮುಂಬರುವ ದಿನಗಳಲ್ಲಿ ರೈತರು ಹೈನುಗಾರಿಕೆಯಲ್ಲಿ ಮತ್ತಷ್ಟು ತೊಡಗಿಸಿಕೊಂಡು ಉತ್ಪಾದನೆ ಹೆಚ್ಚಿಸುವಂತೆ ಸಲಹೆ ನೀಡಿದರು. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಖಾಸಗಿ ಡೇರಿಗಳಿಗಿಂತ ಒಕ್ಕೂಟವೇ ರೈತರಿಗೆ ಹೆಚ್ಚು ಲಾಭದಾಯಕ. ಒಕ್ಕೂಟವು ರೈತರಿಗೆ ಅನೇಕ ಸೌಲಭ್ಯಗಳನ್ನು ಒದಗಿಸುತ್ತದೆ ಮತ್ತು ಸಭೆಗಳಲ್ಲಿ ಆಡಳಿತ ಮಂಡಳಿಯನ್ನು ಪ್ರಶ್ನಿಸುವ ಹಕ್ಕು ರೈತರಿಗಿರುತ್ತದೆ. ಆದರೆ ಖಾಸಗಿ ಸಂಸ್ಥೆಗಳಲ್ಲಿ ಇಂತಹ ಅವಕಾಶವಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

### ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಪಾಲ್ಗೊಳ್ಳಿ

ಇದೇ ಸಂದರ್ಭದಲ್ಲಿ ಶಾಸಕ ಗಣೇಶ್ ಪ್ರಸಾದ್ ಅವರು ಪ್ರತ್ಯೇಕ ಹೇಳಿಕೆ ನೀಡಿ, ಪ್ರಸ್ತುತ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ. ಅಕ್ಟೋಬರ್ ತಿಂಗಳವರೆಗೆ ಯಾವುದೇ ಚುನಾವಣೆಗಳಿಲ್ಲದ ಕಾರಣ, ಅಷ್ಟರೊಳಗೆ ಈ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ. ಅಧಿಕಾರಿಗಳು ಮೂರು ಬಾರಿ ಭೇಟಿ ನೀಡಲಿದ್ದು, ಪ್ರತಿಯೊಬ್ಬರೂ ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗಿಯಾಗಿ ಅರ್ಜಿ ತುಂಬುವ ಮೂಲಕ ತಪ್ಪದೇ ತಮ್ಮ ಮತದಾನದ ಹಕ್ಕನ್ನು ಪಡೆದುಕೊಳ್ಳಬೇಕು. ಪ್ರತಿಯೊಬ್ಬರೂ ಮತದಾನದ ಹಕ್ಕು ಪಡೆದಾಗ ಮಾತ್ರ ಒಂದು ಜವಾಬ್ದಾರಿಯುತ ಸರ್ಕಾರವನ್ನು ತರಲು ಸಾಧ್ಯವಾಗುತ್ತದೆ ಎಂದು ಮನವಿ ಮಾಡಿದರು.

## ಕಾಡಾನೆ ದಾಳಿಯಿಂದ ಟಮೋಟೋ ಬೆಳೆ ನಾಶ

ಗುಂಡ್ಲುಪೇಟೆ: ತಾಲ್ಲೂಕಿನ ಶಿವಪುರ ಗ್ರಾಮದ ಕುಮಾರ ಬಿನ್ ಭೋಗಯ್ಯನವರ ಜಮೀನಿನಲ್ಲಿ ಕಾಡಾನೆ ದಾಳಿ ನಡೆಸಿ ಟಮೋಟೊ ಬೆಳೆ ನಾಶ ಮಾಡಿರುವ ಘಟನೆ ನಡೆದಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಅರಣ್ಯ ದ ಗೋಪಾಲಸ್ವಾಮಿ ವಲಯ ದಲ್ಲಿ ಸುಮಾರು ಏಳು ಕಿಲೋಮೀಟರ್ ಟ್ರಂಚ್ ನಿರ್ಮಾಣ ಬಾಕಿ ಇರುವುದರಿಂದ ಕಾಡಾನೆಗಳು ರೈತರ ಜಮೀನಿನ ಕಡೆ ಸರಾಗವಾಗಿ ಕಾಡುಪ್ರಾಣಿಗಳು ಬಂದು ಬೆಳೆನಾಶ ಮಾಡುತ್ತಿದ್ದು ತಕ್ಷಣ ರೈತರಿಗೆ ಬೆಳೆ ನಷ್ಟವನ್ನು ತುಂಬಿಕೊಡಬೇಕು ಮತ್ತು ರೈತರ ಜಮೀನಿಗೆ ಬರುವ ಕಾಡುಪ್ರಾಣಿಗಳನ್ನು ನಿಯಂತ್ರಿಸಲು ಅರಣ್ಯ ಇಲಾಖೆ ಕ್ರಮ ವಹಿಸಬೇಕು ಎಂದು ರೈತ ಮುಖಂಡ ಮಹಾದೇವಪ್ಪ ಶಿವಪುರ ಒತ್ತಾಯಿಸಿದರು.



## ಜು.3ಕ್ಕೆ ಬೆಂಗಳೂರಿನಲ್ಲಿ ಜನಾಗ್ರಹ ಸಮಾವೇಶ

ಮೈಸೂರು: ಶೋಷಿತ ಸಮುದಾಯಗಳ ಮೇಲಿನ ದೌರ್ಜನ್ಯ ವಿರೋಧಿಸಿ ಜು.3 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಧ್ಯಾಹ್ನ 12ಕ್ಕೆ ಕರ್ನಾಟಕ ದಲಿತ ಸಂಘರ್ಷ ಸಮಿತಿ- ಅಂಬೇಡ್ಕರ್ ವಾದದ ವತಿಯಿಂದ ಹಮ್ಮಿಕೊಳ್ಳಲಿರುವ ದಲಿತ ಜನಾಗ್ರಹ ಸಮಾವೇಶದಲ್ಲಿ ಮೈಸೂರಿನಿಂದ ಸುಮಾರು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಸಮಾವೇಶದಲ್ಲಿ ಸುಮಾರು 50 ಸಾವಿರ ಮಂದಿ ರಾಜ್ಯದ ವಿವಿಧೆಡೆಯಿಂದ ಆಗಮಿಸಿ ಪಾಲ್ಗೊಳ್ಳಲಿದ್ದಾರೆ. ಭೂಮಿ, ವಸತಿ, ಬ್ಯಾಕ್‌ಲಾಗ್ ಉದ್ಯೋಗ ಭರ್ತಿ, ವಿಶೇಷ ಘಟಕ ಯೋಜನೆಗೆ ಏಕ ಗವಾಕ್ಷಿ ನೀತಿಗಾಗಿ ಈ ವೇಳೆ ಹಕ್ಕೊತ್ತಾಯ ಮಂಡಿಸಲಾಗುವುದೆಂದರು. ಇಂದು ರಾಜಕೀಯ ಆಧಾರದ ಮೇಲೆ ಜನರನ್ನು ವಿಭಜಿಸಿ ತನ್ನ ಸ್ವಾರ್ಥ ಸಾಧನೆಗೆ ಬಿಜೆಪಿ ಮುಂದಾಗಿದೆ. ಕಾಂಗ್ರೆಸ್ ಸರ್ಕಾರ ದಲಿತಪರ ಧೋರಣೆ ತಾಳಿದ್ದರೂ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುವಲ್ಲಿ ವಿಫಲವಾಗಿದೆ. ಈ ರೀತಿಯವನ್ನು ವಿರೋಧಿಸುವ ನಿಟ್ಟಿನಲ್ಲಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ನೇತೃತ್ವದಲ್ಲಿ ಈ ಸಮಾವೇಶ ಆಯೋಜಿಸಲಾಗಿದೆ ಎಂದರು. ಬನ್ನಹಳ್ಳಿ ಸೋಮಣ್ಣ, ಧಮ್ಮ ಅಶೋಕ್, ದೊಡ್ಡಸಿದ್ದು ಹಾದನೂರು, ಎಸ್.ಕುಮಾರ್ ಮೊದಲಾದವರು ಇದ್ದರು.

## ಜು.3ಕ್ಕೆ ಕರೋಕೆ ಗಾಯನ

ಮೈಸೂರು: ಕೇರ್ಗಳ್ಳಿಯಲ್ಲಿನ ಕೇವಲಿನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿಶೇಷ ಮಕ್ಕಳ ಪ್ರತಿಭೆ ಗುರುತಿಸಿ, ಪ್ರೋತ್ಸಾಹ ನೀಡಲು ಜು.3ರ ಸಂಜೆ 5 ರಿಂದ ರಾತ್ರಿ 8ರವರೆಗೆ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಸಮಾವೇಶಾತ್ಮಕ ಕರೋಕೆ ಹಾಡುಗಾರಿಕೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷರಾದ ಇ. ಸೀಮಂತಿನಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಐವರು ವಿಶೇಷ ಚೇತನ ಮಕ್ಕಳು ಹಾಗೂ ಐವರ ವಿವಿಧ ಕ್ಷೇತ್ರಗಳ ವೈದ್ಯರು ಪಾಲ್ಗೊಂಡು ಸುಮಾರು 30 ಹಾಡುಗಳನ್ನು ಹಾಡಲಿದ್ದಾರೆ. ಭಾವಗೀತೆ, ಚಿತ್ರಗೀತೆಯಂತಹವುಗಳಲ್ಲಿ ತಮಗೆ ಇಷ್ಟ ಬಂದ ಯಾವುದಾದರೊಂದನ್ನು ಪ್ರಸ್ತುತ ಪಡಿಸಲಿದ್ದಾರೆ. ವಿಶೇಷ ಚೇತನ ಮಕ್ಕಳ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸಿ, ಅಂತಹ ಮಕ್ಕಳ ಪ್ರತಿಭೆ ಗುರುತಿಸಿ, ವೃತ್ತಿಪರ ವ್ಯಕ್ತಿಗಳನ್ನು ಒಂದೇ ವೇದಿಕೆಗೆ ತರುವುದು, ಅಂತಹ ಮಕ್ಕಳ ಪೋಷಕರಿಗೆ ಅಂತಹ ಮಕ್ಕಳಿಗೆ ಅಗತ್ಯವಾಗಿರುವುದೇನು ಎಂಬ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಗುರಿ ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ಮಾಹಿತಿ ನೀಡಿದರು. ಡಾ.ಜೀವನ್, ಎಂ.ಆರ್.ಸುನೀಲ್ ಕುಮಾರ್ ಜೈನ್, ಅಮೋಘ್, ಮಧುಸೂದನ್, ಕಶ್ಯಪ್ ಹಾಜರಿದ್ದರು.



# ಪರಭಾಷಿಗರಿಂದ ಕನ್ನಡ ಅಸ್ತಿತ್ವಕ್ಕೆ ಧಕ್ಕೆ

**ಚಾಮರಾಜನಗರ:** ಬೆಂಗಳೂರಿನಲ್ಲಿ ಹೊರ ರಾಜ್ಯದವರ ಹೆಚ್ಚಳದಿಂದಾಗಿ ಸ್ಥಳೀಯ ಉದ್ಯೋಗ, ಸಂಸ್ಕೃತಿ, ಕನ್ನಡ ಭಾಷೆಯ ಅಸ್ತಿತ್ವಕ್ಕೆ ಧಕ್ಕೆಯಾಗುತ್ತಿದೆ ಎಂದು ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷರಮೇಶ್‌ಗೌಡ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ನಾಗವಳ್ಳಿ ಗ್ರಾಮದಲ್ಲಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಜಿಲ್ಲಾ ಘಟಕದ ವತಿಯಿಂದ ನಡೆದ ನೂತನ ಪದಾಧಿಕಾರಿಗಳ ಸೇರ್ಪಡೆ, ಸಮಾಜಮುಖಿ ಚಿಂತಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಸಂಘಟನೆಗೆ ಸೇರ್ಪಡೆಯಾದವರಿಗೆ ಸಂಘಟನೆಯ ಶಲ್ಯ ಹಾಕಿ ಸ್ವಾಗತಿಸಿ ಬರಮಾಡಿಕೊಂಡು ಮಾತನಾಡಿದರು. ಕೆರೆಗಳಲ್ಲಿ ಬೋಗೆಸೆ ಭೋಗಸೆ ನೀರು ಕುಡಿಯುತ್ತಿದ್ದೇವು. ಇಂದು ಗುತ್ತಿಗೆ ಪಡೆದು ಕೊಳಚೆ ಮಂಡಳಿಯಾಗಿ ಮಾಡಿಬಿಟ್ಟರು. ಎಲ್ಲ ಮಾಲ್‌ಗಳಲ್ಲಿ ಪರಕೀಯರು ಬಂದು ವಾಸಮಾಡುತ್ತಿದ್ದಾರೆ. ನೀವು ಎಲ್ಲೆ ಹೋದರು ಕನ್ನಡ ಅನ್ನ, ಮುದ್ದೆ, ಮಕ್ಕಳಿಗೆ ಜಾಗವಿಲ್ಲದಂತೆ ಮಾಡಲಾಗಿದೆ. ಅಲ್ಲಿ ರೋಟಿ ಕುಲ್ಚ ತುಂಬಿಕೊಂಡಿವೆ. ಪಿಜ್ಜಾ ಬರ್ಗರ್ ಬಂದಿದ್ದು. ಬೆಂಗಳೂರಿನಲ್ಲಿ ಎಂ.ಜಿ.ರೋಡ್‌ನಲ್ಲಿ ಎಗ್ಗಿಲ್ಲದೆ ಪರಭಾಷಿಯ ತುಂಡುಬಟ್ಟೆಯ ಹುಡುಗಿಯರು ಓಡಾಡುವಂತಾಗಿದ್ದು, ನಮ್ಮ ಕನ್ನಡ ಮಕ್ಕಳು ಮುಜುಗರದಿಂದ ಓಡಾಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ. ಆಗಾಗಿ ಕನ್ನಡ ಉಳಿವಿಗಾಗಿ ಕನ್ನಡ ತನಕ್ಕಾಗಿ ಸರ್ಕಾರ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಕಾರ್ಯಕ್ರಮದಲ್ಲಿ ಯೋಗೀಶ್‌ಗೌಡ, ಜಿಲ್ಲಾ ಘಟಕದ ಗೌರವಾಧ್ಯಕ್ಷೆ ಲಿಂಗರಾಜು, ಜಿಲ್ಲಾಧ್ಯಕ್ಷ ಮಲ್ಲುಯರಗಂಬಳ್ಳಿ, ಜಿಲ್ಲಾ ಉಪಾಧ್ಯಕ್ಷ ಶಬಾಜ್ ಷರೀಫ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೋಹನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಶೆಟ್ಟಿ, ನಿಂಗಶೆಟ್ಟಿ, ನಳಿನಕುಮಾರಿ, ಪ್ರೇಮಲತಾ, ವಸಂತಕುಮಾರಿ, ಜಯಲಕ್ಷ್ಮೀ, ಲೀಲಾ, ನಾಗರತ್ನ, ಮಧುರ, ಶಿವಮ್ಮ, ಮಂಗಳಮ್ಮ, ಮಹದೇವಪ್ರಸಾದ್, ಹೋಮ ಇತರರು ಹಾಜರಿದ್ದರು.

ಅಯ್ಯನಪುರ ಶಿವಕುಮಾರ್ ಮಾಹಿತಿ

# ಸದ್ಯದಲ್ಲೇ ಸಂಘದಿಂದ ಇ-ಸ್ಟಾಂಪಿಂಗ್ ವ್ಯವಸ್ಥೆ



ಚಾಮರಾಜನಗರ, ತಾಲೂಕು ಲೋಕೋಪಯೋಗಿ ಇಲಾಖೆ ಸಿವಿಲ್ ಗುತ್ತಿಗೆದಾರರ ಸಂಘವು ಕಳೆದ 10 ವರ್ಷಗಳಿಂದಲ್ಲೂ ಸುಧೀರ್ಘವಾಗಿ ಲಾಭಾಂಶದಲ್ಲಿದ್ದು, ಈ ವರ್ಷವೂ ಕೂಡ 10,78 ಲಕ್ಷ ಲಾಭಾಂಶದಲ್ಲಿದೆ ಎಂದು ಸಂಘದ ಅಧ್ಯಕ್ಷ ಅಯ್ಯನಪುರ ಶಿವಕುಮಾರ್ ಹೇಳಿದರು.

ನಗರದ ವರ್ತಕರ ಭವನದಲ್ಲಿ ನಡೆದ ತಾಲೂಕು ಲೋಕೋಪಯೋಗಿ ಇಲಾಖೆ ಸಿವಿಲ್ ಗುತ್ತಿಗೆದಾರರ ಸಂಘದ 2025-26ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಘವು 2015ರಲ್ಲಿ ಪ್ರಾರಂಭವಾಗಿದ್ದು, ಸಂಘದ ನಿರ್ದೇಶಕರು, ಸದಸ್ಯರ ಸಹಕಾರದ ಸಂಘವು ಯಾವುದೇ ಸುಸ್ತಿ ಇಲ್ಲದೆ ಪ್ರತಿವರ್ಷವೂ ಲಾಭಾಂಶದಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿದ್ದು ಚಾಮರಾಜನಗರದಲ್ಲಿ ನಡೆದ ಸಹಕಾರ ಸಪ್ತಾಹ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಘಕ್ಕೆ ಅತ್ಯುತ್ತಮ ಸಹಕಾರ ಸಂಘ ಎಂದು ಪ್ರಶಸ್ತಿ ನೀಡಿದ್ದಾರೆ. ಸಂಘ ಅಭಿವೃದ್ಧಿಗಾಗಿ ಸಹಕರಿಸಿದ ಎಲ್ಲ ಸದಸ್ಯ ರಿಗೂ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಸಂಘದಲ್ಲಿ ಸ್ಟಾಂಪ್ ಪೇಪರ್ ಆರಂಭಿಸುವುದಾಗಿ ಕಳೆದ 5, 6 ವರ್ಷಗಳಿಂದ ಪ್ರಯತ್ನ ಮಾಡಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ಸಂಘದಲ್ಲಿ ಇ-ಸ್ಟಾಪಿಂಗ್ ದೊರೆಯಲಿದೆ. ಸಂಘದಲ್ಲಿ 101 ಮಂದಿ ಸದಸ್ಯರು ಇದ್ದು, 192 ಷೇರುವಿದ್ದು, ಎಲ್ಲ ಸಹಕಾರದಲ್ಲಿ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಾಗುವುದು ಎಂದರು.

**ಪ್ರತಿಭಾ ಪುರಸ್ಕಾರ:** ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಪರೀಕ್ಷೆಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ' ನೀಡಿ ಸನ್ಮಾನಿಸಲಾಯಿತು. ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ವೈ.ಪಿ.ರಾಜೇಂದ್ರಪ್ರಸಾದ್ ಯಣಗುಂಬ, ನಿರ್ದೇಶಕರಾದ ಎಂ.ರವಿ ಚಂದಕವಾಡಿ, ನಟ ರಾಜು ಬಸಪ್ಪನಪಾಳ್ಯ, ಎಂ.ಶಿವಕುಮಾರ್ ಬಿಸಲವಾಡಿ, ಮಹದೇವಸ್ವಾಮಿ ಬಿ.ನಲ್ಲೂರು, ಶಿವಬಸವಣ್ಣ ಸಿ, ಎಂ.ಸಿ.ಹುರೇಂದ್ರ, ಎಂ.ಎಂ.ನಾಗರಾಜು, ಅಬ್ದುಲ್ ಅಜೀಜ್, ನಂಜುಂಡಸ್ವಾಮಿ, ದೇವಜಮ್ಮಣ್ಣಿ, ಹುಬ್ಬೇಗೌಡ, ದೊರೆಸ್ವಾಮಿ, ಕಾರ್ಯದರ್ಶಿ ಬರ್ನಾಲ್ಡ್ ದೀಕ್ಷಿತ್ ಸಿ, ಸದಸ್ಯರು ಭಾಗವಹಿಸಿದ್ದರು.

# ಸರ್ಕಾರಿ ಶಾಲೆಗಳ ಗುಣಮಟ್ಟದ ಶಿಕ್ಷಣಕ್ಕೆ ಒತ್ತು: ಶಾಸಕ ರವಿ ಗಣಿಗ

## ಜು. 4ರ ಪ್ರತಿಭಾ ಪುರಸ್ಕಾರ ಸಮಾರಂಭ

**ಮಂಡ್ಯ:** ಮಂಡ್ಯ ನಗರದ ಪ್ರವಾಸಿ ಮಂದಿರದಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ. ರವಿಕುಮಾರ್ ಗೌಡ ಅವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಮಹತ್ವದ ಸಭೆ ನಡೆಯಿತು.

ಸಭೆಯಲ್ಲಿ ಡಿಡಿಪಿಐ, ಡಿಡಿಪಿಓ, ಬಿಇಓ ಸೇರಿದಂತೆ ಶಿಕ್ಷಣ ಇಲಾಖೆಯ ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು. ಸಭೆಯಲ್ಲಿ ಸರ್ಕಾರಿ ಶಾಲೆಗಳಲ್ಲಿನ ಮೂಲ ಸೌಕರ್ಯ ಅಭಿವೃದ್ಧಿ, ಶಿಕ್ಷಕರ ಕೊರತೆ ನಿವಾರಣೆ, ವಿದ್ಯಾರ್ಥಿಗಳ ಹಾಜರಾತಿ ಪ್ರಮಾಣ ಹೆಚ್ಚಿಸುವುದು, ಕಲಿಕೆಯ ಗುಣಮಟ್ಟ ಸುಧಾರಣೆ ಹಾಗೂ ಮಕ್ಕಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸುವ ಕುರಿತು ಸಮಗ್ರ ಚರ್ಚೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಪಿ. ರವಿಕುಮಾರ್ ಗೌಡ ಅವರು, ಸರ್ಕಾರಿ ಶಾಲೆಗಳೇ ಸಮಾಜದ ಬಹುಪಾಲು ಮಕ್ಕಳ ಭವಿಷ್ಯ ರೂಪಿಸುವ ಕೇಂದ್ರಗಳಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಗೂ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಶಾಲೆಗಳಲ್ಲಿನ ಮೂಲಸೌಕರ್ಯವನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸುವುದು, ಶಿಕ್ಷಕರ ಕೊರತೆ ಇರುವ ಕಡೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಮಕ್ಕಳ ಶಾಲಾ ಹಾಜರಾತಿ ಹೆಚ್ಚಿಸಲು



ವಿಶೇಷ ಕಾರ್ಯಕ್ರಮಗಳನ್ನು ರೂಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ 2025?26ನೇ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ ಮಂಡ್ಯ ಜಿಲ್ಲೆಯ ಸುಮಾರು 1,300 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ 'ಬೃಹತ್ ಪ್ರತಿಭಾ ಪುರಸ್ಕಾರ' ಕಾರ್ಯಕ್ರಮದ ಸಿದ್ಧತೆ ಕುರಿತು ವಿಶೇಷವಾಗಿ ಪರಿಶೀಲನೆ ನಡೆಸಲಾಯಿತು.

ಬರುವ ಜುಲೈ 4ರಂದು ಮಂಡ್ಯದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆಯಲಿರುವ ಈ ಅದ್ದೂರಿ ಸಮಾರಂಭವನ್ನು ಅತ್ಯಂತ ವ್ಯವಸ್ಥಿತ ಹಾಗೂ ಶಿಸ್ತುಬದ್ಧವಾಗಿ ಆಯೋಜಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು.

ವಿದ್ಯಾರ್ಥಿಗಳು, ಪೋಷಕರು ಮತ್ತು ಆಹ್ವಾನಿತರು ಯಾವುದೇ ತೊಂದರೆ ಅನುಭವಿಸದಂತೆ ಸಭಾಂಗಣ ವ್ಯವಸ್ಥೆ, ನೋಂದಣಿ, ಆಸನ ವ್ಯವಸ್ಥೆ, ಕುಡಿಯುವ ನೀರು, ವೈದ್ಯಕೀಯ ನೆರವು, ವಾಹನ ನಿಲುಗಡೆ ಸೇರಿದಂತೆ ಪ್ರತಿಯೊಂದು ವ್ಯವಸ್ಥೆಯನ್ನು ಪೂರ್ವಸಿದ್ಧತೆಯೊಂದಿಗೆ ರೂಪಿಸುವಂತೆ ತಿಳಿಸಿದರು.

ವಿಶೇಷವಾಗಿ ಕಾರ್ಯಕ್ರಮಕ್ಕೆ ಆಗಮಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಅವರೊಂದಿಗೆ ಬರುವವರಿಗೆ ಸೂಕ್ತ ಊಟದ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದ ಶಾಸಕರು, ಇದು ಕೇವಲ ಪ್ರಶಸ್ತಿ ಪ್ರದಾನ ಕಾರ್ಯಕ್ರಮವಲ್ಲ, ವಿದ್ಯಾರ್ಥಿಗಳ ಪರಿಶ್ರಮಕ್ಕೆ ಸಮಾಜ ನೀಡುವ ಗೌರವವಾಗಿರುವುದರಿಂದ ಪ್ರತಿಯೊಂದು ವ್ಯವಸ್ಥೆಯೂ ಅಚ್ಚುಕಟ್ಟಾಗಿ ಇರಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಂಡ್ಯ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದಲ್ಲಿ ಮಾದರಿ ಕಾರ್ಯಕ್ರಮವಾಗುವಂತೆ ಈ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ರೂಪಿಸಲು ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಶಾಸಕ ಪಿ. ರವಿಕುಮಾರ್ ಗೌಡ ಕರೆ ನೀಡಿದರು.

# ಕರುನಾಡ ದೀಪ ಸೇವಾ ಟ್ರಸ್ಟ್‌ನಿಂದ ವೈದ್ಯರ ದಿನಾಚರಣೆ ಹಾಗೂ ಸನ್ಮಾನ ಕಾರ್ಯಕ್ರಮ

**ಕೆ.ಆರ್.ನಗರ:** ಪ್ರತಿಯೊಬ್ಬರ ಜೀವನದಲ್ಲಿ ಉತ್ತಮ ಆರೋಗ್ಯವನ್ನು ಕಾಪಾಡುವುದರಲ್ಲಿ ವೈದ್ಯರು ವಹಿಸುವ ಪಾತ್ರವೂ ಬಹು ದೊಡ್ಡದು ಎಂದು ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಮೋಹನ್ ಕುಮಾರ್ ಹೇಳಿದರು.

ಅವರು ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರುನಾಡ ದೀಪ ಸೇವಾ ಟ್ರಸ್ಟ್ ವತಿಯಿಂದ ವೈದ್ಯರ ದಿನಾಚರಣೆಯ ಅಂಗವಾಗಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳನ್ನು ಅಭಿನಂದಿಸಿ ಮಾತನಾಡಿದರು.

ಎಂತಹ ಕಷ್ಟದ ಸಂದರ್ಭದಲ್ಲಿಯೂ ಕೂಡ ಜೀವ ಉಳಿಸುವಂತಹ ಕಾರ್ಯವನ್ನು ಮಾಡುತ್ತ ಉತ್ತಮ ಆರೋಗ್ಯ ಸಮಾಜ ನಿರ್ಮಾಣಕ್ಕಾಗಿ ಹಗಲಿರುಳು ಎನ್ನದೆ ವೈದ್ಯರುಗಳು ಶ್ರಮಿಸುತ್ತಿದ್ದಾರೆ. ಅವರ ಸೇವಾ ಕಾರ್ಯ ನಿಜಕ್ಕೂ ಶ್ಲಾಘನೀಯವಾಗಿದೆ ಎಂದರು.

ದೇಶ ಕಂಡ ಶ್ರೇಷ್ಠ ವೈದ್ಯರು ಹಾಗೂ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಡಾ.ಭಿದನ್ ಚಂದ್ರ ರಾಯ್ ಅವರ ಗೌರವಾರ್ಥವಾಗಿ ಜುಲೈ ಒಂದರಂದು ವೈದ್ಯರ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತಿದೆ.

ಡಾ.ಬಿ.ಸಿ.ರಾಯ್ ಅವರ ಜನ್ಮದಿನ ಜುಲೈ 1, ಇವರ ಮರಣದ ದಿನವೂ ಕೂಡ ಜುಲೈ ಒಂದು ಆಗಿರುವುದು ವಿಶೇಷವಾಗಿದ್ದು ಇವರು ವೈದ್ಯಕೀಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಾಗಿ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಭಾರತ ರತ್ನವನ್ನು ನೀಡಿ ಇವರನ್ನು ಗೌರವಿಸಲಾಗಿದೆ ಎಂದರು.


ಭಾರತ ದೇಶದಲ್ಲಿ ಪ್ರತಿವರ್ಷ ಜುಲೈ ಒಂದರಂದು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಗುತ್ತಿದೆ.

ವೈದ್ಯರ ದಿನಾಚರಣೆಯಂದು ವೈದ್ಯರುಗಳ ಸೇವೆಯನ್ನು ಗುರುತಿಸಿ ಅವರುಗಳನ್ನು ಗೌರವಿಸಿ ಅಭಿನಂದಿಸುವ ಕೆಲಸವನ್ನು ಕರುನಾಡ ದೀಪ ಸೇವಾ ಟ್ರಸ್ಟ್ ವತಿಯಿಂದ ಮಾಡುವ ಮೂಲಕ ವಿಶಿಷ್ಟವಾಗಿ ವೈದ್ಯರ ದಿನಾಚರಣೆಯನ್ನು ಮಾಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಸಾಲಿಗ್ರಾಮ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಡಳಿತ ವೈದ್ಯಾಧಿಕಾರಿ ಡಾ.ದೇವಿಕಾ, ವೈದ್ಯರುಗಳಾದ ಡಾ.ಮೋಹನ್, ಡಾ.ಕೀರ್ತಿ, ಡಾ.ಮಮತನಾಯಕ್ ಅವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಅಶ್ವಿನಿ ಪ್ರಭಾಕರ್, ಬಸವರಾಜು, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ

ಕೆ.ಆರ್.ಶ್ಯಾಮಸುಂದರ್, ನಿರ್ದೇಶಕ ಎಂ.ಎಸ್.ನರಸಿಂಹ, ಗ್ರಾ.ಪಂ.ಮಾಜಿ ಅಧ್ಯಕ್ಷ ಸಿ.ಕೆ.ಬಾಲಮನೋಹರ, ಮಾಜಿ ಉಪಾಧ್ಯಕ್ಷ ಚಿಕ್ಕನಾಯಕನಹಳ್ಳಿ ವಾಸು, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ತಾಲ್ಲೂಕು ನಿರ್ದೇಶಕ ದಡದಹಳ್ಳಿ ನಟರಾಜ್, ಮುಖಂಡರುಗಳಾದ ಸಿ.ಟಿ.ಪಾರ್ಥ, ಪ್ರದೀಪ್, ನಾಗರಾಜು, ಆಸ್ಪತ್ರೆಯ ಸಿಬ್ಬಂದಿಗಳಾದ ಕೆ.ಸಿ.ನವೀನ್, ಪ್ರದೀಪ್ ಕುಮಾರ್, ಲೀಲಾವತಿ, ಶಬೀನಾ, ಪೂರ್ಣಿಮಾ, ನಾಜಿಮಾ, ಪದ್ಮಿನಿ, ಪುಷ್ಪಲತಾ, ಮಹೇಶ್, ಅಶ್ವಿನಿ, ಶಾರದಮ್ಮ, ಲಕ್ಷ್ಮಣ್, ಶ್ರೀಲಕ್ಷ್ಮಿ, ಮಧು, ರಾಮಲಿಂಗಪ್ಪ, ಸಿದ್ದು, ಜ್ಯೋತಿ, ಚೆಲುವರಾಜು, ಶ್ರೀಕಾಂತ್, ಶೋಭಾ, ರಾಜೀವ್ ಸೇರಿದಂತೆ ಹಲವರು ಇದ್ದರು.



# ಮುಂಗಾರು ಮಳೆ ವೈಫಲ್ಯ– ನಷ್ಟವನ್ನು ತಡೆಗಟ್ಟಲು ಪರ್ಯಾಯ ಬೆಳೆಗಳನ್ನು ಬೆಳೆಯಿರಿ : ರೈತರಿಗೆ ಡಿಸಿ ಕರೆ

## ಪರ್ಯಾಯ ಬೆಳೆ ಯೋಜನೆಯನ್ನು ಸಿದ್ಧಪಡಿಸಿ ವರದಿ ನೀಡುವಂತೆ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚನೆ



**ಮಂಡ್ಯ:** ಮುಂಗಾರು ಮಳೆ ಬರುವುದು ವೈಫಲ್ಯ ಆಗಿರುವುದರಿಂದ ರೈತರಿಗೆ ಸರಿಯಾದ ಮಾಹಿತಿ ಮತ್ತು ಅರಿವು ಮೂಡಿಸುವುದು ಅತ್ಯಗತ್ಯ. ಮುಂಗಾರು ಮಳೆಯ ವೈಪರೀತ್ಯದಿಂದ ರೈತರು ನಷ್ಟವನ್ನು ತಡೆಗಟ್ಟಲು ಪರ್ಯಾಯ ಬೆಳೆಗಳನ್ನು ಬೆಳೆಯುವ ಬಗ್ಗೆ ಅರಿವು ಮೂಡಿಸಿ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬಿತ್ತನೆ ಬೀಜ ವಿತರಣೆ ಹಾಗೂ ಪರ್ಯಾಯ ಬೆಳೆ ಬೆಳೆಯುವ ಸಂಬಂಧ ಸಭೆ ನಡೆಸಿ ಮಾತನಾಡಿದರು.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಒಟ್ಟು ಬಿತ್ತನೆ ಗುರಿಯ ಪೈಕಿ ಕೇವಲ ಶೇಕಡಾ 5 ರಷ್ಟು ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದ್ದು ಮಳೆಯ ಕೊರತೆಯಿಂದಾಗಿ ಬಿತ್ತನೆ ಕಾರ್ಯವು ನಿಧಾನಗತಿಯಲ್ಲಿದೆ. ಸರಾಸರಿ ಮಳೆಯಲ್ಲಿ ಸುಮಾರು ಶೇಕಡಾ 35 ರಷ್ಟು ಕೊರತೆ ಉಂಟಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಮುಂಗಾರು ಮಳೆ ವಿಳಂಬವಾದಾಗ ಅಥವಾ ಮುಂಗಾರು ಹಂಗಾಮು ವೈಫಲ್ಯವಾದಾಗ ರೈತರು ಹೆಚ್ಚು ನೀರು ಬೇಡದ, ಅಲ್ಪಾವಧಿಯಲ್ಲಿ ಬೆಳೆಯುವ ಭತ್ತದ ತಳಿಗಳನ್ನು ಆರಿಸಿಕೊಳ್ಳುವುದು ಸೂಕ್ತ ಎಂದು ಅವರು ತಿಳಿಸಿದರು.

ಭತ್ತದ ಪರ್ಯಾಯವಾಗಿ ರಾಗಿ, ನವಣೆ ಮುಸಗಿನಜೋಳ, ಅರ್ಕ, ಹುರುಳಿ, ಅಲಸಂದೆ, ಸೂರ್ಯಕಾಂತಿಯನ್ನು ಬೆಳೆಯಲು ಕೃಷಿ ಇಲಾಖೆಯಿಂದ ರೈತರಿಗೆ ಅರಿವು ಮೂಡಿಸಿ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕಡಿಮೆ ಮಳೆ ಅಥವಾ ಹವಾಮಾನ ವೈಪರೀತ್ಯದ ಸಂದರ್ಭದಲ್ಲಿ ರೈತರಿಗೆ ನಷ್ಟವಾಗದಂತೆ ತಡೆಯಲು, ಪರ್ಯಾಯ ಬೆಳೆ ಯೋಜನೆಯನ್ನು ಸಿದ್ಧಪಡಿಸಿ ಒಂದು ವಾರದಲ್ಲಿ ವರದಿ ನೀಡುವಂತೆ ಕೃಷಿ ಇಲಾಖಾಧಿಕಾರಿಗಳಿಗೆ ಸೂಚನೆ ನೀಡಿದರು.

ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ರೈತರು ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಬೆಳೆಯ ತಳಿಗಳನ್ನು ಆಯ್ಕೆ ಮಾಡಿ, ಪರ್ಯಾಯ ಬೆಳೆ ಹಾಗೂ ಪರ್ಯಾಯ ಬೇಸಾಯ ಕ್ರಮ ಅನುಸರಿಸಬೇಕು ಈ ಸಂಬಂಧ ಅವರಿಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದರು. ಜಿಲ್ಲೆಯಲ್ಲಿ 31 ಹೋಬಳಿಗೊಂದು ನೋಡೆಲ್ ವಿಜ್ಞಾನಿಯೆಂದು ನಿಯೋಜನೆ ಮಾಡಿ ಪರ್ಯಾಯ ಬೆಳೆಗಳನ್ನು ಬೆಳೆಯುವ ಬಗ್ಗೆ ಅರಿವು ಮೂಡಿಸಲು ಕ್ರಮವಹಿಸುವಂತೆ ಹಾಗೂ ರೈತರೊಂದಿಗೆ ಸಭೆ ನಡೆಸಿ ಜಾಗೃತಿ ಮೂಡಿಸಿ ಎಂದು ಅವರು ತಿಳಿಸಿದರು.

ಜಿಲ್ಲೆಯಲ್ಲಿ ಯಾವುದೇ ರೀತಿಯ ರಸ ಗೊಬ್ಬರ ಹಾಗೂ ಬಿತ್ತನೆ ಬೀಜದ ಕೊರತೆ ಇರುವುದಿಲ್ಲ. ಅಗತ್ಯ ತಕ್ಕಂತೆ ರಸಗೊಬ್ಬರ ಹಾಗೂ ಬಿತ್ತನೆ ಬೀಜ ದಾಸ್ತಾನು ಇರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಮಳೆ ಕಡಿಮೆಯಾದಲ್ಲಿ ಆತಂಕ ಪಡದೆ ಯಾವ ಬೆಳೆಗಳನ್ನು ಬೆಳೆಯಬೇಕು ಎಂಬ ಬಗ್ಗೆ ರೈತ ಸಂಪರ್ಕ ಕೇಂದ್ರಗಳ ಮೂಲಕ ಅಧಿಕಾರಿಗಳು ವ್ಯಾಪಕ ಜಾಗೃತಿ ಮೂಡಿಸಬೇಕು ಹಾಗೂ ತಾಲ್ಲೂಕು ಮಟ್ಟದಲ್ಲಿ ರೈತರೊಂದಿಗೆ ಕೃಷಿ ಇಲಾಖೆಯ ಅಧಿಕಾರಿಗಳು ಸಭೆ ನಡೆಸಿ ಅರಿವು ಮೂಡಿಸಿ ಎಂದು ತಿಳಿಸಿದರು.

ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕರಾದ ಎಸ್. ಜಯಸ್ವಾಮಿ ಹಾಗೂ ಕೃಷಿ ಇಲಾಖೆಯ ಉಪ ನಿರ್ದೇಶಕರು, ಕೃಷಿ ಇಲಾಖೆ ಸಹಾಯಕ ನಿರ್ದೇಶಕರು ಉಪಸ್ಥಿತರಿದ್ದರು.

# ಸೆಸ್ಕ್ : ಗೃಹ ಜ್ಯೋತಿ ಫಲಾನುಭವಿಗಳ ಮಾಹಿತಿ ಸಂಗ್ರಹಣೆ

- ಅಗತ್ಯ ದಾಖಲೆ ಸಿದ್ಧವಿಟ್ಟುಕೊಳ್ಳಲು ಮನವಿ
- ಮನೆ ಬಾಗಿಲಿಗೆ ಬರಲಿದ್ದಾರೆ ಮೀಟರ್ ರೀಡರ್, ಸಿಬ್ಬಂದಿ

**ಮಂಡ್ಯ:** ರಾಜ್ಯ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಗಳಲ್ಲೊಂದಾದ ಗೃಹ ಜ್ಯೋತಿ (ಉಎಜ) ಯೋಜನೆಯ ಫಲಾನುಭವಿಗಳ ಮನೆ–ಮನೆ ಭೇಟಿ ಹಾಗೂ ಮಾಹಿತಿ ಸಂಗ್ರಹಣೆ ಕಾರ್ಯ ಬುಧವಾರದಿಂದ(ಜುಲೈ 01) ಆರಂಭಗೊಂಡಿದ್ದು, ಗ್ರಾಹಕರು ಸಹಕರಿಸುವಂತೆ ಚಾವಿಸನಿನಿ (ಸೆಸ್ಕ್) ಕೋರಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಸೆಸ್ಕ್, 2023ರ ಜುಲೈ ತಿಂಗಳಲ್ಲಿ ಜಾರಿಗೆ ಬಂದಿರುವ ಗೃಹಜ್ಯೋತಿ ಯೋಜನೆಯ ಮಾಹಿತಿ ಸಂಗ್ರಹ ಕಾರ್ಯ ನಡೆಯುತ್ತಿದ್ದು, ಸೆಸ್ಕ್ ನ ಮೀಟರ್ ರೀಡರ್‌ಗಳು ಹಾಗೂ ಸಿಬ್ಬಂದಿ, ಗ್ರಾಹಕರ ಮನೆಗಳಿಗೆ ಭೇಟಿ ನೀಡಿ, ಫಲಾನುಭವಿಗಳ ದಾಖಲೆ ಹಾಗೂ ಮಾಹಿತಿ ಸಂಗ್ರಹಿಸಿ, ಮೊಬೈಲ್ ಆಪ್ ಹಾಗೂ ಘೋಷಣಾ ಪತ್ರದ ಮೂಲಕ ಅರ್ಜಿ ಭರ್ತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿದ್ದಾರೆ.

**ಸೆಸ್ಕ್ ಸಿಬ್ಬಂದಿ ಮನೆ–ಮನೆ ಭೇಟಿ ಸಂದರ್ಭದಲ್ಲಿ ನೀಡಬೇಕಾದ ದಾಖಲಾತಿಗಳ ವಿವರ:**

1. ಆಧಾರ್ ಕಾರ್ಡ್
2. ಫಲಾನುಭವಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ
3. ಮತದಾರರ ಗುರುತಿನ ಚೀಟಿ (ವೋಟರ್ ಐಡಿ)
4. ಪ್ಯಾನ್ ಕಾರ್ಡ್
5. ಬಾಡಿಗೆ ಒಪ್ಪಂದದ ಪತ್ರಗಳು (ಅನ್ವಯಿಸುವಲ್ಲಿ ಮಾತ್ರ)
6. ರೇಷನ್ ಕಾರ್ಡ್
7. ಜಾತಿ ಪ್ರಮಾಣ ಪತ್ರ (ಅನ್ವಯಿಸುವಲ್ಲಿ ಮಾತ್ರ)

ಈ ಪ್ರಕ್ರಿಯೆಗೆ ಮೀಟರ್ ರೀಡರ್‌ಗಳ ಮೂಲಕ ಸ್ಥಳದಲ್ಲೇ ಪರಿಶೀಲನೆ ಮಾಡುವುದು ಏಕೈಕ ಮಾರ್ಗವಾಗಿದ್ದು, ಗ್ರಾಹಕರು ಮತ್ತು ಫಲಾನುಭವಿಗಳು ಸೆಸ್ಕ್‌ನ ಅಧಿಕೃತ ಮೀಟರ್ ರೀಡರ್‌ಗಳ ಗುರುತಿನ ಚೀಟಿಯನ್ನು ಪರಿಶೀಲಿಸಿ, ಸಂಪೂರ್ಣ ಸಹಕಾರ ನೀಡಿ, ಪರಿಶೀಲನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೆಸ್ಕ್ ಮನವಿ ಮಾಡಿದೆ.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮಾಹಿತಿ ಸಂಗ್ರಹಣ ಕಾರ್ಯ ಆರಂಭಗೊಂಡ ಹಿನ್ನೆಲೆಯಲ್ಲಿ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಎಂ.ಎಸ್. ಅರ್ಚನಾ ಅವರು ಖುದ್ದಾಗಿ ಗ್ರಾಹಕರ ಮನೆಗಳಿಗೆ ಭೇಟಿ ನೀಡಿ ಫಲಾನುಭವಿಗಳ ದಾಖಲೆ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕ ಎಲ್. ಲೋಕೇಶ್, ಮುಖ್ಯ ಆರ್ಥಿಕ ಅಧಿಕಾರಿ ಜಿ. ರೇಣುಕಾ, ಪ್ರಧಾನ ವ್ಯವಸ್ಥಾಪಕ ಆರ್. ರಾಮಸ್ವಾಮಿ, ಅಧೀಕ್ಷಕ ಇಂಜಿನಿಯರ್ ಸುನಿಲ್ ಕುಮಾರ್, ಅಧಿಕಾರಿಗಳಾದ ಸುಭಾಷ್, ರಮೇಶ್, ಇಂದ್ರಾಣಿ ಇತರರಿದ್ದರು.



# ರೈತ ಶಾಲೆ ವಾರ್ಷಿಕೋತ್ಸವ ಹಾಗೂ ಕೃಷಿ ವಿಚಾರ ಸಂಕಿರಣ

**ಮಂಡ್ಯ:** ಕೆಂಪೇಗೌಡ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ ಮತ್ತು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ವತಿಯಿಂದ ರೈತರ ಶಾಲೆ ವಾರ್ಷಿಕೋತ್ಸವದ ಅಂಗವಾಗಿ ರೈತೋತ್ಸವ ಕಾರ್ಯಕ್ರಮವನ್ನು ಜು.3ರಂದು ಬೆಳಗ್ಗೆ 10.30ಕ್ಕೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಎಂ.ಎನ್.ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತರಿಗೆ ರಾಸಾಯನಿಕ ಮುಕ್ತ ವ್ಯವಸಾಯ ಮಾಡುವ ಹಾಗೂ ಉತ್ತೇಜಿಸುವ ನಿಟ್ಟಿನಲ್ಲಿ ರೈತೋತ್ಸವ ಆಯೋಜಿಸಲಾಗಿದೆ. ನುರಿತರಿಂದ ಕೃಷಿ ವಿಚಾರ ಸಂಕಿರಣ ನಡೆಯಲಿದೆ ಎಂದರು.

ಕರ?ಯಕ್ರಮದಲ್ಲಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ. ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡುವರು. ಮಾಜಿ ಉಪಮುಖ್ಯಮಂತ್ರಿ




ಅಶ್ವತ್ಥ್‌ನಾರಾಯಣ್ ಉದ್ಘಾಟಿಸುವರು. ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರೈತೋತ್ಸವಕ್ಕೆ ಮುನ್ನುಡಿ ಬರೆಯಲಿದ್ದಾರೆ. ರೈತರ ಶಾಲೆ ಮತ್ತು ರೈತ ಉತ್ಪಾದಕ ಕಂಪನಿಯ ಸಂಸ್ಥಾಪಕ ಪ್ರೊ.ಸತ್ಯಮೂರ್ತಿ ಪ್ರಾಸ್ತಾವಿಕ ನುಡಿಗಳಾಡುವರು. ಜಂಟಿ ಕೃಷಿ ನಿರ್ದೇಶಕ ವಿ.ಎಸ್.ಅಶೋಕ ಅವರಿಗೆ ರೈತರಿಂದ ನಾಗರೀಕ ಸಮ್ಮಾನ ಮಾಡಲಾಗುವುದು ಎಂದು ಹೇಳಿದರು.

ಮನ್‌ಮುಲ್ ನಿರ್ದೇಶಕರಾದ ಬಿ.ಆರ್. ರಾಮಚಂದ್ರು, ಎಂ.ಎಸ್.ರಘುನಂದನ್, ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕೆ.ಆರ್.ಯೋಗಾನಂದ, ಎಂ.ಎಂ.ಫೌಂಡೇಶನ್ ಅಧ್ಯಕ್ಷ ಮಹಾಲಿಂಗೇಗೌಡ ಮುದ್ದನಘಟ್ಟ, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಅಧ್ಯಕ್ಷ ಎಂ.ವಿನಯ್‌ಕುಮಾರ್, ನ್ಯೂಟ್ರಿಕಾರ್ಪ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಅಜಯ್ ಭಾಗವಹಿಸುವರು ಎಂದರು.

ನಂತರ ಕೃಷಿ ವಿಚಾರ ಸಂಕಿರಣ ನಡೆಯಲಿದ್ದು ಮಂಡ್ಯ ನೆಲದಲ್ಲಿ ರೈತರ ಶಾಲೆಯ ಹೆಜ್ಜೆಗುರುತು ಕುರಿತು ಉಪನ್ಯಾಸಿ ಮತ್ತು ಲೇಖಕಿ ಡಾ.ಅನಿತ ಮಂಗಲ, ಸಾವಯವ ಕೃಷಿಗೆ ಮಣ್ಣಿನ ಗುಣಧರ್ಮ ಮತ್ತು ಸುಧಾರಣೆ ಕುರಿತು ಸಾವಯವ ಕೃಷಿ ಸಲಹೆಗಾರ ಜಿ.ಪಿ.ಮೂರ್ತಿ, ಬೆಳೆಗಳ ಮೌಲ್ಯವರ್ಧನೆ ಮತ್ತು ಯಶಸ್ವಿ ಮಾರುಕಟ್ಟೆ ತಂತ್ರದ ಕುರಿತು ಆರ್ಗ್ಯಾನಿಕ್ ಮಂಡ್ಯ ಸಂಸ್ಥಾಪಕ ಮಧುಚಂದನ್ ವಿಷಯ ಮಂಡನೆ ಮಾಡುವರು. ನಾನಾ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿರುವರು ಎಂದು ವಿವರಿಸಿದರು. ಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎನ್.ಎಸ್.ನವೀನ್‌ಕುಮಾರ್, ಉಪಾಧ್ಯಕ್ಷ ಎಚ್.ಎಂ.ಶಂಕರ್, ಕಾರ್ಯದರ್ಶಿ ಸತ್ಯಮೂರ್ತಿ, ಸಹಕಾರ್ಯದರ್ಶಿ ಆರ್.ಜಗದೀಶ್, ಸಂಘಟನಾ ಕಾರ್ಯದರ್ಶಿ ಎನ್.ವಿ.ಧರ್ಮರಾಜ್, ಕರ?ಯಕಾರಿ ಸದಸ್ಯ ಕೆ.ಎನ್.ನಂದೀಶ್, ಪ್ರದೀಪ್ ಹಾಗೂ ರಾಗಿಮುದ್ದ ಹಳ್ಳಿ ನಾಗೇಶ್ ಸುದ್ದಿಗೋಷ್ಠಿಯಲ್ಲಿ.

# ಕನ್ನಡ ಮಠದ 217ನೇ ಸ್ಥಾಪನೆ ವರ್ಷಾಚರಣೆ ಕಾರ್ಯಕ್ರಮ

**ಪಿರಿಯಾಪಟ್ಟಣ:** ಮಠದ ಆಸ್ತಿಯ ಉಳಿವಿಗೆ ಸಾವಮೀಜಿಯವರ ಅವಿರತ ಹೋರಾಟ ಸ್ಮರಣಿಯವಾದದ್ದು ಎಂದು ಮಾದಳ್ಳಿಯ ಉಕ್ಕಿನ ಕಂತ್ತೆ ಮಠದ ಸಾಂಭಸದಾಶಿವ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಬೆಟ್ಟದಪುರದ ಸ್ವತಂತ್ರ ಸಾಲಿಲಾಖ್ಯ ವಿರಕ್ತ ಮಠ ಮತ್ತು ಕನ್ನಡ ಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀ ಚಿಕ್ಕವೀರ ದೇಶಿ ಕೇಂದ್ರ ಸ್ವಾಮೀಜಿಗಳವರ 97ನೇ ಗಣರಾಧನೆ ಹಾಗೂ ಶ್ರೀ ಚನ್ನವೀರ ದೇಶಿ ಕೇಂದ್ರ ಸ್ವಾಮೀಜಿಗಳವರ 45ನೇ ಗಣರಾಧನೆ,



ಕನ್ನಡ ಮಠದ 217ನೇ ಸ್ಥಾಪನೆ ವರ್ಷಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇಹ ದಂಡಿಸುವುದರ ಜೊತೆಗೆ ಕಾಯಕ ನಿಷ್ಠೆಯ ಮೂಲಕ ಚನ್ನ ಬಸವ ದೇಶಿ ಕೇಂದ್ರ ಸ್ವಾಮೀಜಿ ತಮ್ಮನು ತೊಡಗಿಸಿಕೊಂಡಿದ್ದಾರೆ. ಮಠದ ಆಸ್ತಿಯನ್ನು ಉಳಿಸಲು ಅವರು ಮಾಡಿದ ಹೋರಾಟ ಎಂದಿಗೂ ಮರಿಯಲು ಸಾಧ್ಯವಿಲ್ಲ. ಇತರೆ ಯಾರಿದ್ದಾರೂ ಕೂಡ ಇವರಷ್ಟು ಕಾನೂನು ಹೋರಾಟ ಮಾಡಲು ಸಾಧ್ಯವಾಗುತ್ತಿರಲಿಲ್ಲ.ಮಠದ ಆಸ್ತಿಯನ್ನು ಉಳಿಸುವ ಮೂಲಕ ದೊಡ್ಡ ಸಾಧನೆ ಮಾಡಿದ್ದಾರೆ. ಗುರುಗಳು ಮಾಡಿದ ಅಸ್ತಿಯು ಅವರ ಸ್ವಂತ್ತಕ್ಕೆ ಬಲೂಸುವುದಿಲ್ಲ.ಅದನ್ನು ಭಕ್ತರಿಗೆ, ಪ್ರಜೆಗಳಿಗೆ ಬಿಟ್ಟು ಹೋಗುತ್ತಾರೆ ಇದನ್ನು ಅರ್ಥಯಿಹಿಡಿಕೊಳ್ಳಬೇಕು.

# ಮರಳಿನ ಮೇಲೆ ಮೂಡಿದ ಮಿಂಚು ಆಂಚಿ ಸೋಜನ್



ಡಾ.ಸುಧಾಕರ.ಜಿ.ಲಕ್ಕವಳ್ಳಿ

ತ್ರಿಶೂರ್‌ನ ನಾಟ್ಟಿಕ ಎಂಬ ಕಡಲತೀರದ ಹಳ್ಳಿ.ತಂದೆ ಸೋಜನ್ ಇ.ಟಿ.ಆಟೋ ಓಡಿಸಿ ಬದುಕು ಕಟ್ಟಿದರೆ, ತಾಯಿ ಜಾನ್ಸಿ ತ್ರಿವೇಣಿ ಸೂಪರ್ ಮಾರ್ಕೆಟ್‌ನಲ್ಲಿ ದುಡಿಯುತ್ತಾರೆ. ಅವರ ಮಗಳು ಆಂಚಿ ಬರಿಗಾಲಲ್ಲಿ ಓಡಿ ಬೆಳೆದವರು. ಶೂ ಇಲ್ಲ, ಟ್ರ್ಯಾಕ್ ಇಲ್ಲ, ಆದರೂ ಕಣ್ಣಲ್ಲಿ ಆಕಾಶ ಮುಟ್ಟುವ ಕನಸು. ಮನೆಯ ಗೋಡೆಯ ಮೇಲೆ ಒಂದು ಪದಕ ನೇತು ಹಾಕಬೇಕು ಎಂಬ ತಂದೆಯ ಆಸೆಯೇ ಮಗಳ ಬದುಕಿನ ದಿಕ್ಸೂಚಿಯಾಯಿತು. ಬಡತನದ ನಡುವೆಯೂ ಅವರು ಛಲದ ಹೆಜ್ಜೆ ಇಟ್ಟರು.

27 ಜೂನ್ 2026. ಭುವನೇಶ್ವರದ ಕಳಿಂಗ ಕ್ರೀಡಾಂಗಣ ಮೌನವಾಯಿತು. ರನ್‌ವೇ ತುದಿಯಲ್ಲಿ ಆಂಚಿ. ಒಂದೇ ಉಸಿರು, ಗಾಳಿಯನ್ನು ಸೀಳುವ ಓಟ, ಮಿಂಚಿನ ನೆಗೆತ – 6.88 ಮೀಟರ್! ಅಂಜು ಬಾಬಿ ಜಾರ್ಜ್ ಅವರ 22 ವರ್ಷಗಳ 6.83 ಮೀಟರ್ ದಾಖಲೆ ಧೂಳಾಯಿತು. ಸ್ಟೇಡಿಯಂ ಹರ್ಷೋದ್ಗಾರದಲ್ಲಿ ಮುಳುಗಿತು. ಮರಳಿನ ಮೇಲೆ ಹೊಸ ಇತಿಹಾಸದ ಗೆರೆ ಮೂಡಿತು. ಆ ದಿನ ಭಾರತಕ್ಕೆ ಹೊಸ ಲಾಂಗ್ ಜಂಪ್ ರಾಣಿ ಸಿಕ್ಕರು.

2023ರ ಹ್ಯಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ 6.63 ಮೀಟರ್‌ಗೆ ಬೆಳ್ಳಿ, 2025ರ ಏಷ್ಯನ್




ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ, 2026ರ ಏಷ್ಯನ್ ಇನ್‌ಡೋರ್‌ನಲ್ಲಿ ಕಂಚು. 2024ರ ಬೆಂಗಳೂರು ನ್ಯಾಷನಲ್ ಓಪನ್‌ನಲ್ಲಿ 6.71 ಮೀಟರ್‌ಗೆ ಚಿನ್ನದ ಜೊತೆಗೆ ಅತ್ಯುತ್ತಮ ಮಹಿಳಾ ಅಥ್ಲೀಟ್ ಪಟ್ಟ. 2020ರ ಖೇಲೋ ಇಂಡಿಯಾದಲ್ಲಿ ಲಾಂಗ್ ಜಂಪ್ ಮತ್ತು 100 ಮೀಟರ್ ಎರಡರಲ್ಲೂ ಚಿನ್ನ ಗೆದ್ದು ವೇಗದ ರಾಣಿ ಎನಿಸಿಕೊಂಡರು.

ಸ್ಫೂರ್ತಿ ಸುಧೆ - 57

ಭಾರತೀಯ ನೌಕಾಪಡೆಯಲ್ಲಿ ಚೀಫ್ ಪೆಟಿ ಆಫೀಸರ್ ಆಗಿ ದೇಶ ಕಾಯುವ ಆಂಚಿ, ಟ್ರ್ಯಾಕ್‌ನಲ್ಲಿ ತ್ರಿವರ್ಣ ಹಾರಿಸುವ ಹೆಮ್ಮೆಯ ಮಗಳು. 7 ಮೀಟರ್ ಅಸಾಧ್ಯ ಅಂತಾರೆ, ನಾನು ಹೇಳುತ್ತೇನೆ ಕಾದು ನೋಡಿ ಎನ್ನುತ್ತಾರೆ ಧೈರ್ಯದಿಂದ. ಬರಿಗಾಲಿನಿಂದ ಬೆಳ್ಳಿ ಪೋಡಿಯಂವರೆಗಿನ ಪಯಣ ಕನಸಿಗೆ ರೆಕ್ಕೆ ಕಟ್ಟಿದ ಕಾವ್ಯ. ಆಂಚಿಯ ಪ್ರತಿ ನೆಗೆತವೂ ಕೋಟಿ ಯುವ ಎದೆಗಳಲ್ಲಿ ಭರವಸೆಯ ಸಿಡಿಲು.

# ಯೋಗ ಮತ್ತು ತಂತ್ರಜ್ಞಾನ: ಸ್ಮಾರ್ಟ್ ವಾಚ್ ಮತ್ತು AI ಯೋಗದ ಜಂಟಿ ಪ್ರಯಾಣ!



ರೂಪ ಮಂಜುನಾಥ ಹೊಳೆನರಸೀಪುರ

**ಅಧ್ಯಾಯ 5**

ಕಳೆದ ಅಧ್ಯಾಯದಲ್ಲಿ ನಾವು ಪ್ರಾಣಾಯಾಮವು ಜಾಗತಿಕವಾಗಿ 'ಬ್ರೆತ್‌ವರ್ಕ್' ಆಗಿ ಹೇಗೆ ಮರುಪ್ಯಾಕೇಜ್ ಆಗುತ್ತಿದೆ ಮತ್ತು ಅದರ ವೈಜ್ಞಾನಿಕ ಹಿನ್ನೆಲೆಯನ್ನು ನೋಡಿದ್ದೆವು. ಈಗ ಯೋಗದ ಜಗತ್ತನ್ನು ಸಂಪೂರ್ಣವಾಗಿ ಬದಲಾಯಿಸುತ್ತಿರುವ ಮತ್ತೊಂದು ಆಧುನಿಕ ಆವಿಷ್ಕಾರದ ಕಡೆಗೆ ನಮ್ಮ ದೃಷ್ಟಿ ಹರಿಸೋಣ. ಯೋಗ ಎಂದರೆ ಮೊದಲೆಲ್ಲಾ ಡಿಜಿಟಲ್ ಜಗತ್ತಿನಿಂದ ದೂರವಿದ್ದು, ಪ್ರಕೃತಿಯ ಮಡಿಲಿನಲ್ಲಿ ಮಾಡುವ ಶಾಂತ ಪ್ರಕ್ರಿಯೆ ಎಂದಷ್ಟೇ ಭಾವಿಸಲಾಗುತ್ತಿತ್ತು. ಆದರೆ ಇಂದು ತಂತ್ರಜ್ಞಾನವು ಈ ರಂಗಕ್ಕೆ ಭರ್ಜರಿಯಾಗಿ ಎಗ್ಗಿಲ್ಲದೆ ಲಗ್ಗೆ ಇಟ್ಟಿದೆ!

ಒಂದು ಕಾಲದಲ್ಲಿ ಕೇವಲ ನಾವು ನಡೆದ ಹೆಜ್ಜೆಗಳನ್ನು (steps) ಎಣಿಸುತ್ತಿದ್ದ ಸ್ಮಾರ್ಟ್ ವಾಚ್‌ಗಳು ಮತ್ತು ಧರಿಸಬಹುದಾದ ಸಾಧನಗಳು (wearable devices) ಇಂದು ನಮ್ಮ ಯೋಗಾಭ್ಯಾಸದ ಕ್ರಮವನ್ನೇ ನಿರ್ಧರಿಸುತ್ತಿವೆ. ವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆ (AI) ಯೋಗದೊಂದಿಗೆ ಹೇಗೆ ಜುಗಲ್‌ಬಂದಿ ನಡೆಸುತ್ತಿವೆ? ಬನ್ನಿ, ಇಂಚಿಂಚೂ ತಿಳಿಯೋಣ.

ಕೇವಲ ಸ್ಟೆಪ್ಸ್ ಕೌಂಟರ್ ಅಲ್ಲ; ಇಂದು ನಿಮ್ಮ ದೇಹದ ಜಾತಕವನ್ನೇ ತಿಳಿಸುವ ಇಂದಿನ ಸ್ಮಾರ್ಟ್ ವಾಚ್‌ಗಳು ಕೇವಲ ಗಡಿಯಾರ ಅಥವಾ ಸ್ಟೆಪ್ಸ್ ಕೌಂಟರ್ ಆಗಿ ಉಳಿದಿಲ್ಲ, ಅವು ನಮ್ಮ ಮಣಿಕಟ್ಟಿನ ಮೇಲಿರುವ ಒಬ್ಬ ಪರಿಪೂರ್ಣ "ಡಿಜಿಟಲ್ ವೈದ್ಯ" (Digital Doctor) ಅಥವಾ "ಕೋಚ್" ನಂತೆ ಕೆಲಸ ಮಾಡುತ್ತಿವೆ.

ನೀವು ಉಲ್ಲೇಖಿಸಿದ HRV, ನಿದ್ರೆಯ ವಿನ್ಯಾಸ ಮತ್ತು ಚೇತರಿಕೆಯ ಮಾದರಿಗಳ ಜೊತೆಗೆ, ಇಂದಿನ ಅತ್ಯಾಧುನಿಕ ಸ್ಮಾರ್ಟ್ ವಾಚ್‌ಗಳು ನಿಮ್ಮ ದೇಹದ ಜಾತಕವನ್ನು ತಿಳಿಯಲು ಇನ್ನು ಹಲವು ಪ್ರಮುಖ ಚಟುವಟಿಕೆಗಳನ್ನು ಮತ್ತು ಟ್ರ್ಯಾಕಿಂಗ್‌ಗಳನ್ನು ಮಾಡುತ್ತವೆ:

1. ಆಮ್ಲಜನಕದ ಮಟ್ಟ ಮತ್ತು ಶ್ವಾಸಕೋಶದ ಆರೋಗ್ಯ (SpO2 & Respiratory Rate)

ರಕ್ತದಲ್ಲಿನ ಆಮ್ಲಜನಕ (SpO2): ನಿಮ್ಮ ರಕ್ತದಲ್ಲಿ ಆಮ್ಲಜನಕದ ಪ್ರಮಾಣ ಎಷ್ಟಿದೆ ಎಂಬುದನ್ನು ಇದು ನಿರಂತರವಾಗಿ ಅಳೆಯುತ್ತದೆ (ವಿಶೇಷವಾಗಿ ಕೊರೊನಾ ನಂತರ ಇದು ಬಹುಮುಖ್ಯ ಫೀಚರ್ ಆಗಿದೆ). 95% ಕ್ಕಿಂತ ಕಡಿಮೆಯಾದಾಗ ಇದು ಎಚ್ಚರಿಕೆ ನೀಡುತ್ತದೆ.

ಉಸಿರಾಟದ ದರ (Respiratory Rate): ನೀವು ನಿಮಿಷಕ್ಕೆ ಎಷ್ಟು ಬಾರಿ ಉಸಿರಾಡುತ್ತಿದ್ದೀರಿ ಎಂಬುದನ್ನು ಟ್ರ್ಯಾಕ್ ಮಾಡುತ್ತದೆ. ನಿದ್ರೆಯ ಸಮಯದಲ್ಲಿ ಉಸಿರಾಟದ ಏರುಪೇರಾದರೆ (Sleep Apnea) ಇದನ್ನು ಪತ್ತೆಹಚ್ಚಲು ನೆರವಾಗುತ್ತದೆ.




2. ಲೈವ್ ಇಸಿಜಿ ಮತ್ತು ಹೃದಯದ ಆರೋಗ್ಯ (ECG & AFib Detection)

ಇಸಿಜಿ (Electrocardiogram): ಕೇವಲ ಹೃದಯ ಬಡಿತದ ಸಂಖ್ಯೆಯನ್ನಷ್ಟೇ ಅಲ್ಲದೆ, ನಿಮ್ಮ ಹೃದಯದ ವಿದ್ಯುತ್ ತರಂಗಗಳನ್ನೇ (ECG) ರೆಕಾರ್ಡ್ ಮಾಡುವ ಸಾಮರ್ಥ್ಯ ಇಂದಿನ ವಾಚ್‌ಗಳಿಗಿದೆ.

ಅನಿಯಮಿತ ಹೃದಯ ಬಡಿತ (AFib): ಹೃದಯವು ಅಸಹಜವಾಗಿ ಅಥವಾ ಅತಿಯಾದ ವೇಗವಾಗಿ ಬಡಿಯುತ್ತಿದ್ದರೆ (Atrial Fibrillation) ತಕ್ಷಣವೇ ವಾಚ್ ಬಳಕೆದಾರರಿಗೆ ಮುನ್ನೆಚ್ಚರಿಕೆ (Alert) ನೀಡುತ್ತದೆ. ಈ ಫೀಚರ್ ಜಗತ್ತಿನಾದ್ಯಂತ ಲಕ್ಷಾಂತರ ಜನರ ಜೀವ ಉಳಿಸಿದೆ!

3. ದೇಹದ ಉಷ್ಣಾಂಶ ಮತ್ತು ಹಾರ್ಮೋನ್ ಟ್ರ್ಯಾಕಿಂಗ್ (Skin Temperature & Menstrual Cycles)

ಚರ್ಮದ ತಾಪಮಾನ: ನೀವು ನಿದ್ದೆ ಮಾಡುವಾಗ ನಿಮ್ಮ ದೇಹದ ಉಷ್ಣಾಂಶದಲ್ಲಾಗುವ ಸೂಕ್ಷ್ಮ ಬದಲಾವಣೆಗಳನ್ನು ಇದು ದಾಖಲಿಸುತ್ತದೆ. ಇದು ಜ್ವರ ಬರುವ ಮುನ್ಸೂಚನೆ ನೀಡಲು ನೆರವಾಗುತ್ತದೆ.

ಮಹಿಳೆಯರ ಆರೋಗ್ಯ (Ovulation & Period Tracking): ದೇಹದ ತಾಪಮಾನ ಮತ್ತು ಹಾರ್ಮೋನ್ ಬದಲಾವಣೆಗಳ ಆಧಾರದ ಮೇಲೆ ಮಹಿಳೆಯರ ಮುಟ್ಟಿನ ದಿನಗಳು ಮತ್ತು ಗರ್ಭಧರಿಸಲು ಸೂಕ್ತವಾದ ದಿನಗಳನ್ನು (Ovulation window) ಇದು ಅತ್ಯಂತ ನಿಖರವಾಗಿ ಲೆಕ್ಕಾಚಾರ ಮಾಡುತ್ತದೆ.

4. ದೇಹದ ಸಂಯೋಜನೆ ಮತ್ತು ರಕ್ತದೊತ್ತಡ (Body Composition & BP)

ಬಯೋ-ಎಲೆಕ್ಟ್ರಿಕಲ್ ಇಂಪೆಡೆನ್ಸ್ (BIA): ಕೆಲವು ಪ್ರೀಮಿಯಂ ವಾಚ್‌ಗಳು ನಿಮ್ಮ ದೇಹದಲ್ಲಿ ಎಷ್ಟು ಕೊಬ್ಬು (Body Fat %), ಎಷ್ಟು ಸ್ನಾಯು (Muscle mass) ಮತ್ತು ಎಷ್ಟು ನೀರಿನಂಶ ಇದೆ ಎಂಬುದನ್ನು ಕೇವಲ ಸ್ಕ್ಯಾನ್ ಮಾಡುವ ಮೂಲಕ ತಿಳಿಸುತ್ತವೆ.

ರಕ್ತದೊತ್ತಡ (Blood Pressure): ಇತ್ತೀಚಿನ ತಂತ್ರಜ್ಞಾನದ ಮೂಲಕ ಬಿಪಿ ಕಫ್ (BP Cuff) ಇಲ್ಲದೆಯೇ ಕೇವಲ ಮಣಿಕಟ್ಟಿನ ಮೂಲಕ ರಕ್ತದೊತ್ತಡವನ್ನು ಅಂದಾಜಿಸುವ ಫೀಚರ್ ಕೂಡ ಲಭ್ಯವಿದೆ.

5. ಅಪಘಾತ ಪತ್ತೆ ಮತ್ತು ತುರ್ತು ನೆರವು (Fall Detection & Crash Detection)

ಬೀಳುವಿಕೆಯನ್ನು ಪತ್ತೆಹಚ್ಚುವುದು: ವಾಚ್ ಧರಿಸಿದ ವ್ಯಕ್ತಿ ಹಠಾತ್ತನೆ ಕೆಳಗೆ ಬಿದ್ದರೆ ಅಥವಾ ಅಪಘಾತಕ್ಕೀಡಾದರೆ, ಅದನ್ನು ವಾಚ್‌ನಲ್ಲಿರುವ 'ಅಕ್ಸೆಲೆರೊಮೀಟರ್' ಮತ್ತು 'ಗೈರೊಸ್ಕೋಪ್' ಸೆನ್ಸಾರ್‌ಗಳು ಪತ್ತೆಹಚ್ಚುತ್ತವೆ. ಒಂದು ವೇಳೆ ವ್ಯಕ್ತಿ ಕೆಲವು ಸೆಕೆಂಡುಗಳ ಕಾಲ ಪ್ರತಿಕ್ರಿಯಿಸದಿದ್ದರೆ, ವಾಚ್ ತಾನಾಗಿಯೇ ಅವರ ಕುಟುಂಬದವರಿಗೆ ಮತ್ತು ತುರ್ತು ಸೇವೆಗೆ (Ambulance) ಜಿಪಿಎಸ್ ಲೊಕೇಶನ್ ಸಮೇತ ಸಂದೇಶ ಕಳುಹಿಸುತ್ತದೆ.

6. ಜೈವಿಕ ಶಕ್ತಿಯ ಮಟ್ಟ (Body Battery / Energy Score)

ಇದು ನಿಮ್ಮ ನಿದ್ರೆ, ದಿನದ ಕೆಲಸ, ಮತ್ತು ಒತ್ತಡದ (HRV) ಡೇಟಾವನ್ನು ಒಟ್ಟುಗೂಡಿಸಿ, ನಿಮ್ಮ ದೇಹದಲ್ಲಿ ಸದ್ಯಕ್ಕೆ ಎಷ್ಟು ಶಕ್ತಿ ಬಾಕಿ ಇದೆ ಎಂಬುದನ್ನು 0 ರಿಂದ 100 ರ ಸ್ಕೇಲ್‌ನಲ್ಲಿ ತೋರಿಸುತ್ತದೆ. ಮೊಬೈಲ್ ಚಾರ್ಜಿಂಗ್ ತರಹ! ಇಂದು ನೀವು ಜಿಮ್‌ಗೆ ಹೋಗಿ ಕಠಿಣ ವರ್ಕೌಟ್ ಮಾಡಬೇಕೋ ಅಥವಾ ವಿಶ್ರಾಂತಿ ಪಡೆಯಬೇಕೋ ಎಂಬುದನ್ನು ಇದು ನಿರ್ಧರಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಇಂದಿನ ಸ್ಮಾರ್ಟ್ ವಾಚ್‌ಗಳು ಕೇವಲ ಗ್ಯಾಜೆಟ್‌ಗಳಲ್ಲ; ಅವು ನಿಮ್ಮ ದಿನದ 24 ಗಂಟೆಯೂ ನಿರಂತರವಾಗಿ ಕೆಲಸ ಮಾಡುವ, ಪ್ರತಿಯೊಂದು ದೈಹಿಕ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸುವ ಒಂದು "ಪರ್ಸನಲ್ ಹೆಲ್ತ್ ಲ್ಯಾಬ್" (Personal Health Lab) ಆಗಿ ಮಾರ್ಪಟ್ಟಿವೆ.

ವಿಶೇಷವೆಂದರೆ, ಈ ಎಲ್ಲಾ ಡೇಟಾವನ್ನು ಆಧುನಿಕ ಯೋಗ ಸ್ಟುಡಿಯೋಗಳು ವ್ಯಕ್ತಿಯ ವೈಯಕ್ತಿಕ ಯೋಗ ಪ್ರೋಟೋಕಾಲ್‌ಗಳಿಗೆ (Personalized yoga protocols) ಮರಳಿ ಒದಗಿಸುತ್ತಿವೆ.

2. AI-ಚಾಲಿತ ಯೋಗ (AI-Driven Sequencing): ನಿಮ್ಮ ದೇಹಕ್ಕೆ ತಕ್ಕಂತೆ ಬದಲಾಗುವ ಆಸನಗಳು!

ಇಂದು ಕೆಲವು ಸುಧಾರಿತ ಯೋಗ ಸ್ಟುಡಿಯೋಗಳು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI) ತಂತ್ರಜ್ಞಾನದೊಂದಿಗೆ ಪ್ರಯೋಗಗಳನ್ನು ನಡೆಸುತ್ತಿವೆ. ಇಲ್ಲಿ ಯೋಗದ ಮಾದರಿ ಎಲ್ಲರಿಗೂ ಒಂದೇ ತರ ಇರುವುದಿಲ್ಲ (Fixed template ಇರುವುದಿಲ್ಲ).

ನೈಜ ಸಮಯದ ಬದಲಾವಣೆ (Real-Time Adjustments): ನೀವು ಯೋಗ ಮ್ಯಾಟ್ ಮೇಲೆ ನಿಂತಾಗ, ನಿಮ್ಮ ಸ್ಮಾರ್ಟ್ ವಾಚ್‌ನಿಂದ ಬರುವ ಬಯೋಮೆಟ್ರಿಕ್ ಸಂಕೇತಗಳನ್ನು (Biometric signals) AI ವ್ಯವಸ್ಥೆಯು ಅಳವಡಿಸಿಕೊಳ್ಳುತ್ತದೆ. ನಿಮ್ಮ ಒತ್ತಡದ ಮಟ್ಟ ಹೆಚ್ಚಾಗಿದ್ದರೆ, ಅದು ತಕ್ಷಣವೇ ಕಠಿಣ ಆಸನಗಳನ್ನು ಕೈಬಿಟ್ಟು ನಿಮ್ಮನ್ನು ಶಾಂತಗೊಳಿಸುವ ರಿಸ್ಟೋರೇಟಿವ್ ಅಥವಾ ಪ್ರಾಣಾಯಾಮದ ಆಸನಗಳನ್ನು ಸೂಚಿಸುತ್ತದೆ!

3. ಡಿಜಿಟಲ್ ಸ್ಕ್ರೀನ್ ವರ್ಸಸ್ ಪ್ರಾಚೀನ ಗುರು ಪರಂಪರೆ!

ಒಬ್ಬ ಗುರುಗಳು ತನ್ನ ಶಿಷ್ಯನ ಉಸಿರಾಟದ ವೇಗ ಮತ್ತು ದೇಹದ ಸ್ಥಿತಿಯನ್ನು ಕಣ್ಣಾರೆ ನೋಡಿ, ಅದಕ್ಕೆ ತಕ್ಕಂತೆ ಆಸನಗಳನ್ನು ಸರಿಹೊಂದಿಸುತ್ತಿದ್ದ ಕಾಲ ಒಂದಿತ್ತು. ಇಂದು ಸ್ಮಾರ್ಟ್ ವಾಚ್ ಮತ್ತು AI ಅದೇ ಕೆಲಸವನ್ನು ಮಾಡುತ್ತಿವೆ. ಗುರುಗಳ ಸ್ಥಾನವನ್ನು ತಂತ್ರಜ್ಞಾನ ತುಂಬಲು ಸಾಧ್ಯವೇ ಎಂಬ ಪ್ರಶ್ನೆ ಮೂಡುವುದು ಸಹಜ.

ಆದರೆ ಇದರ ಹಿಂದಿರುವ ಮೂಲ ಪ್ರವೃತ್ತಿಯನ್ನು (Underlying instinct) ನಾವು ಸೂಕ್ಷ್ಮವಾಗಿ ಗಮನಿಸಬೇಕು. ಯೋಗವು ಎಲ್ಲರಿಗೂ ಒಂದೇ ರೀತಿಯಾಗಿರದೆ, ಪ್ರತಿಯೊಬ್ಬ ವ್ಯಕ್ತಿಯ ದೈಹಿಕ ಅಗತ್ಯಕ್ಕೆ ತಕ್ಕಂತೆ ಬದಲಾಗಬೇಕು ಎಂಬುದು ನಮ್ಮ ಪ್ರಾಚೀನ ಗುರುಗಳು ನಂಬಿದ್ದ ತತ್ವವಾಗಿತ್ತು. ಇಂದು ತಂತ್ರಜ್ಞಾನವೂ ಕೂಡ ಅಕ್ಷರಶಃ ಅದೇ ತತ್ವವನ್ನು ಆಧುನಿಕ ಸಾಧನಗಳ ಮೂಲಕ ಮಾಡುತ್ತಿದೆ! ಹಾಗಾಗಿ, ತಂತ್ರಜ್ಞಾನವು ಯೋಗಕ್ಕೆ ಶತ್ರುವಲ್ಲ, ಬದಲಿಗೆ ಅದೊಂದು ಹೊಸ ಕಾಲದ ಸಾರಥಿ ಎನ್ನಬಹುದು.

ನಿಮ್ಮ ದೈನಂದಿನ ಯೋಗಾಭ್ಯಾಸದಲ್ಲಿ ತಂತ್ರಜ್ಞಾನದ ಲಾಭ ಪಡೆಯಲು ಈ ಸರಳ ಟಿಪ್ಸ್ ಅನುಸರಿಸಿ:

HRV ಟ್ರ್ಯಾಕ್ ಮಾಡಿ: ನಿಮ್ಮ ಸ್ಮಾರ್ಟ್ ವಾಚ್‌ನಲ್ಲಿ ಬೆಳಿಗ್ಗೆ ಎದ್ದ ತಕ್ಷಣ ಊಖಗಿ ಸ್ಕೋರ್ ಗಮನಿಸಿ. ಅದು ಕಡಿಮೆಯಿದ್ದರೆ, ಅಂದು ಕಠಿಣ ಆಸನಗಳ ಬದಲಿಗೆ ನಿಧಾನಗತಿಯ ಯಿನ್ ಯೋಗ ಅಥವಾ ಧ್ಯಾನಕ್ಕೆ ಆದ್ಯತೆ ನೀಡಿ.

**ಯೋಗ ಆಪ್‌ಗಳ ಬಳಕೆ:** ಇಂದು ಲಭ್ಯವಿರುವ ಸ್ಮಾರ್ಟ್ ಯೋಗ ಮ್ಯಾಟ್‌ಗಳು ಅಥವಾ ಂಖ ಕ್ಯಾಮೆರಾ ಆ?ಯಪ್‌ಗಳು ನೀವು ಆಸನಗಳನ್ನು ಮಾಡುವಾಗ ನಿಮ್ಮ ಭಂಗಿ (Posture) ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಡಿಜಿಟಲ್ ರೂಪದಲ್ಲಿ ತಿದ್ದುತ್ತವೆ.

ಪತಂಜಲಿ ಮಹರ್ಷಿಗಳು ಯೋಗಸೂತ್ರಗಳಲ್ಲಿ ಮನಸ್ಸಿನ ನಿಯಂತ್ರಣದ ಬಗ್ಗೆ ವಿವರಿಸಿದ್ದನ್ನು, ಇಂದು ನಾವು ಹಾರ್ಟ್-ರೇಟ್ ಚಾರ್ಟ್‌ಗಳು ಮತ್ತು ಒತ್ತಡದ ಹಾರ್ಮೋನ್ ಗ್ರಾಫ್‌ಗಳ ಮೂಲಕ ಕಣ್ಣಾರೆ ನೋಡುತ್ತಿದ್ದೇವೆ. ತಂತ್ರಜ್ಞಾನವು ಯೋಗವನ್ನು ಹೆಚ್ಚು ವೈಜ್ಞಾನಿಕವಾಗಿ ಮತ್ತು ನಮ್ಮ ದೈನಂದಿನ ಬದುಕಿಗೆ ಹತ್ತಿರವಾಗುವಂತೆ ಮಾಡುತ್ತಿದೆ. ಡಿಜಿಟಲ್ ಪರದೆಯ ನಡುವೆಯೂ ಆಂತರಿಕ ನೆಮ್ಮದಿಯನ್ನು ಕಂಡುಕೊಳ್ಳುವುದೇ ಇಂದಿನ ಯೋಗದ ಹೆಗ್ಗಳಿಕೆ!

ನಿಮ್ಮ ಯೋಗದ ದಿನಚರಿಯಲ್ಲಿ ನೀವು ಸ್ಮಾರ್ಟ್ ವಾಚ್ ಅಥವಾ ಯಾವುದೇ ಫಿಟ್‌ನೆಸ್ ಆ?ಯಪ್‌ಗಳನ್ನು ಬಳಸುತ್ತೀರಾ? ನಿಮ್ಮ ಡಿಜಿಟಲ್ ಯೋಗದ ಅನುಭವ ಹೇಗಿದೆ?

ನಾವು ಮುಂದಿನ ಭಾಗದಲ್ಲಿ ಯೋಗದ ವೈಜ್ಞಾನಿಕ ಮುಖವನ್ನು ಇನ್ನೂ ಆಳವಾಗಿ ಅನ್ವೇಷಿಸಲಿದ್ದೇವೆ: "ಪ್ರಯೋಗಾಲಯದಲ್ಲಿ ಯೋಗ: ವಿಜ್ಞಾನಿಗಳು ಯೋಗವನ್ನು ಒಪ್ಪುತ್ತಿರುವುದೇಕೆ?" ನರವಿಜ್ಞಾನ (Neuroscience) ಮತ್ತು ಎಪಿಜೆನೆಟಿಕ್ಸ್ ಸಂಶೋಧಕರು ಯೋಗವು ನಮ್ಮ ಡಿಎನ್‌ಎ ಮತ್ತು ಉರಿಯೂತದ ಮಾರ್ಗಗಳ (inflammatory pathways) ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂದು ಸಾಬೀತುಪಡಿಸುತ್ತಿದ್ದಾರೆ? ತಿಳಿಯಲು ತಪ್ಪದೇ ಮುಂದಿನ ಲೇಖನ ಓದಿ!

**ವಂದನೆಗಳು.**



# ಸ್ತ್ರೀ ಸಂಸ್ಕೃತಿಯ ರಂಗವಲ್ಲಿ....

ರಂಗೋಲಿ ಅಥವಾ ರಂಗವಲ್ಲಿ ಗೃಹಾಲಂಕಾರಕ್ಕೆ ಸಂಬಂಧಿಸಿದ ಜಾನಪದ ಕಲೆಯಾಗಿದೆ. 64 ಕಲೆಗಳಲ್ಲಿ ಚಿತ್ರಕಲೆಯೂ ಒಂದು ಅದರಲ್ಲಿ ರಂಗವಲ್ಲಿಯೂ ಒಂದಾಗಿದೆ.ಸ್ತ್ರೀಯರ ಸಂಸ್ಕೃತಿಯ ಒಂದು ಅಂಶವಾಗಿದೆ.

ಸ್ತ್ರೀಯರು ತಮ್ಮ ಕಲಾನೈಪುಣ್ಯತೆ,ಕಲ್ಪನಾಶಕ್ತಿಯ ಅಭಿವ್ಯಕ್ತಿಯಾಗಿ ಬೆರಳುಗಳ ಸಹಾಯದಿಂದ ಮೂಡಿಸುವ ಕಲೆಯಾಗಿ ಹೆಚ್ಚು ಪ್ರಚಾರದಲ್ಲಿದೆ. ದಿನನಿತ್ಯ ಮನೆಯಬಾಗಿಲಿಗೆ ತುಳಸಿಯ,ದೇವರ ಮುಂದೆ ಅಲ್ಲದೇ ಹಬ್ಬಹರಿದಿನಗಳಲ್ಲಿ ವಿಶೇಷ ರಂಗೋಲಿ ಬಿಡಿಸುವ ವಾಡಿಕೆಇದೆ.

ಮೊದಲು ಮಣ್ಣಿನ ಒಲೆಯಿರುವ ಕಡೆಗೆಲ್ಲಾ ಒಲೆ ಸಾರಿಸಿ ರಂಗವಲ್ಲಿ ಇಡುವದಲ್ಲದೇ ಮನೆಯ ಬಾಗಿಲು ಮುಂದೆ ಶಗಣಿಯಿಂದ ಸಾರಿಸಿ ರಂಗವಲ್ಲಿ ಇಡುತ್ತಿದ್ದರು.ಈಗಲೂ ಹಳ್ಳಿಯಲ್ಲಿ ಆ ವಾಡಿಕೆ ಇದೆ.ಇದನ್ನು ಧೂಳಿಚಿತ್ರವೆಂದು ಕರೆಯುತ್ತಾರೆ.ವಿವಿಧ ಬಣ್ಣಗಳ ಪುಡಿ ಉಪಯೋಗಿಸಿ ರಚಿಸುವ ಚಿತ್ರವೇ ಧೂಳಿಚಿತ್ರ.ಈ ರಂಗವಲ್ಲಿ ಕಲೆ ಸಾತ್ವಿಕ ಗುಣಕ್ಕೆ ಸಂಕೇತವಾದ ಶುಭ್ರ ಬಿಳಿ ಹುಣ್ಣಿಮಣ್ಣಿನಿಂದ ಕೂಡಿರುತ್ತದೆ.

ಸಾರಿಸಿ,ಗೂಡಿಸಿ ರಂಗವಲ್ಲಿ ಬಿಡಿಸುವದು ಪರಿಸರ ವನ್ನು ಶುದ್ಧವಾಗಿ ಸ್ವಚ್ಛವಾಗಿಡುವ ಉದ್ದೇಶವಲ್ಲದೇ ಸಂಪ್ರದಾಯ ,ಆಚರಣೆಗಳ ಮೂಲಕ ಅನುಸರಣೆ ರಂಗವಲ್ಲಿಯ ಉದ್ದೇಶವಾಗಿದೆ.

ರಂಗೋಲಿಯ ಅರ್ಥ- ರಂಗೋಲಿ,ರಂಗವಲ್ಲಿ ಬಣ್ಣಗಳಿಂದ ಅಲಂಕರಿಸಿದ ಲತೆಗಳು ಎಂದರ್ಥ. ರಂಗ ಎಂದರೆ ಕೃಷ್ಣ ವಲ್ಲಿ ಎಂದರೆ ಆನಂದಿಸು ,ಅನುಗ್ರಹಿಸು ಎಂದರ್ಥ.ಭಗವಂತನ ಅನುಗ್ರಹಕ್ಕಾಗಿ ತಮ್ಮ ಕೋರಿಕೆ ಇಡೇರಿಸಿಕೊಳ್ಳಲು ರೂಪತಳೆದ ಕಲೆಯೇ ರಂಗವಲ್ಲಿ. ಭಗವಂತನ ನಡುವೆ ಸಂಹನದ ಮಾಧ್ಯಮ ಎಂದು ಹೇಳುತ್ತಾರೆ.ದೇವತೆಗಳಿಗನುಸಾರವಾಗಿ ರಂಗವಲ್ಲಿ ಬಿಡಿಸುವ ಪದ್ಧತಿ ಇದೆ.ಲಕ್ಷ್ಮಿಗೆ ಪದ್ಮ,ಸೂರ್ಯನಿಗೆ ಸ್ವಸ್ತಿಕ,ವೃತ್ತಾಕಾರ ,ಚಕ್ರ,ರಥ,ನಾಗಪಂಚಮಿಗೆ ನಾಗರಹಾವು ಬರೆದು ಪೂಜಿಸುವದು ಇವು ಸ್ಥಿರತೆಯನ್ನು ತೋರಿಸುತ್ತವೆ.

ಇತಿಹಾಸ- ರಂಗವಲ್ಲಿಯ ಇತಿಹಾಸ ಮಾನವ ಇತಿಹಾಸದಷ್ಟೇ ಪ್ರಾಚೀನವಾದುದು.ಕ್ರಿ.ಶ.2-3 ನೇಯ ಶತಮಾನದಲ್ಲಿ ಸಿಂಧೂ ನಾಗರಿಕತೆಯಲ್ಲಿ ತ್ರಿಕೋನ,ವಲಯಾಕಾರ,ಚತರ್ ಸಾಕಾರ, ಮತ್ಸ್ಯ, ಸ್ವಸ್ತಿಕ, ಪದ್ಮ ಈ ಚಿತ್ರಗಳು ಕಂಡುಬರುತ್ತವೆ. ಆರ್ಯ ಸ್ತ್ರೀಯರು ಹೋಮಕುಂಡಗಳನ್ನು ಅತಿಥಿ ಸತ್ಕಾರದ ಸಮಯದಲ್ಲಿ ಮನೆ ಹಾಗೂ ಯಜ್ಞವೇದಿಕೆ ಸಿಂಗರಿಸುತ್ತಿದ್ದರು.ಅವರ ಆಗಿನ ಅಲಂಕರಣದ ದೃಷ್ಟಿಯೇ ರಂಗೋಲಿ,ರಂಗವಲ್ಲಿ ಪ್ರತಿಬಿಂಬಿತವಾಗಿದೆಯಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ರಂಗೋಲಿಯನ್ನು ವಿವಿಧರಾಜ್ಯದಲ್ಲಿ ಕರೆಯುವ ಹೆಸರು- ಕರ್ನಾಟಕದಲ್ಲಿ ರಂಗೋಲಿ ಅಂದರೆ ಗುಜರಾತದಲ್ಲಿ ಸತಿಯಾ,ಉತ್ತರಪ್ರದೇಶದಲ್ಲಿ ಸಾಯಿ, ಆಂದ್ರದಲ್ಲಿ ಮುಗ್ಗು,ತಮಿಳುನಾಡು,ಕೇರಳದಲ್ಲಿ ಕೋಲಂ, ಬಂಗಾಲದಲ್ಲಿ ಅಲ್ಪನಾ,ಮಹಾರಾಷ್ಟ್ರದಲ್ಲಿ ರಂಗೋಲಿ,ಮಧ್ಯಪ್ರದೇಶದಲ್ಲಿ ಏಷನ್,ರಾಜಸ್ಥಾನದಲ್ಲಿ ಮಂಡನಾ,ಓರಿಸಾದಲ್ಲಿ ಝುಟಿ,ಎಂದು ಕರೆಯುತ್ತಾರೆ ಕೇರಳದ ಓಣಂ ಹಬ್ಬದ ವಿಶೇಷ ಪುಷ್ಪಾಲಂಕಾರದ ರಂಗೋಲಿ ಜಗತ್ಪ್ರಸಿದ್ಧವಾಗಿದೆ.

ರಚನೆ- ರಂಗೋಲಿಯನ್ನು ತೋರ್ ಬೆರಳು ಹೆಬ್ಬೆರಳುಗಳ ನಡುವೆ ರಂಗೋಲಿಪುಡಿ ಹಿಡಿದು ಬಿಡುವದು ಒಂದುರೀತಿಯಾದರೆ ಮುಷ್ಟಿಯಲ್ಲಿ ರಂಗೋಲಿಪುಡಿಹಿಡಿದು ಅದು ಪೂರ್ತಿ ಮುಗಿಯುವವರೆಗೂ ಕೈ ಬಿಡದೇ ನೈಪುಣ್ಯತೆಯಿಂದ ಆಕಾರಗಳನ್ನು ಬಿಡಿಸುವದಾಗಿದೆ.ಎಳೆ ರಂಗೋಲಿ,ಚುಕ್ಕೆ ರಂಗೋಲಿಯಂದು ಎರಡು ಬಗೆಗಳಿವೆ. ಎರಡು ಬಗೆಯ ರಂಗೋಲಿಗಳಿಗೆ ಹಬ್ಬಗಳಂದು ಬಿಳಿ ರಂಗೋಲಿಯ ಜೊತೆ ಕೆಮ್ಮಣ್ಣು,ಇಲ್ಲವೇ ಹೂವಿನಿಂದ ಬಣ್ಣಗಳಿಂದ ಅಲಂಕರಿಸುತ್ತಾರೆ.

ಬಳಕೆ-ಹಬ್ಬ, ಮದುವೆ, ವ್ರತ,ಉಪನಯನ, ರಥೋತ್ಸವ , ಶುಭದ ಸಂಕೇತವಾಗಿ ಬಿಡಿಸುತ್ತಾರೆ.ವ್ಯಕ್ತಿ ಮೃತನಾದಾಗ ಅವನ ಕಾರ್ಯ ಮುಗಿಯುವವರೆಗೆ ರಂಗೋಲಿ ಬಿಡಿಸುವದಿಲ್ಲ. ಮನೆಯ ಹೊರಗಡೆ ಮಧ್ಯಭಾಗದಲ್ಲಿ ಸೂರ್ಯೋದಯದ ಮೊದಲು ರಂಗವಲ್ಲಿ ಹಾಕಬೇಕು.

ಮಹತ್ವ- ದುಷ್ಟ ಶಕ್ತಿಗಳ ವಿರುದ್ಧ ರಕ್ಷಣೆ ಆರಂಭಗೊಂಡ ರಂಗವಲ್ಲಿ ಶುಭಸೂಚಕವಾಗಿ ಪರಿಣಮಿಸಿದೆ.ರಂಗೋಲಿಯ ಚುಕ್ಕೆಗಳು ಆಚರಣೆಗಾಗಿ ನೀಲಾಕಾಶದ ನಕ್ಷತ್ರಗಳನ್ನು ಅಧ್ಯಾತ್ಮವಾದಿಗಳ ಧ್ಯಾನಕ್ಕೆ ಆಧಾರವಾದ ಬಿಂದುವನ್ನು ತಂತ್ರಶಾಸ್ತ್ರದಲ್ಲಿರುವ ಬಿಂದು ರೂಪದ ಪರಾಶಕ್ತಿಯ ರೂಪವನ್ನು ಸೂಚಿಸುತ್ತದೆ ಪ್ರಾಣಕ್ಕೆ, ಸೃಷ್ಟಿಗೆ, ಶಕ್ತಿಗೆ,ಕಾರಣವಾದ ಬಿಳಿ ಚುಕ್ಕೆ ಪುರುಷನಿಗೆ, ಕೆಂಪು ಚುಕ್ಕೆ ಸ್ತ್ರೀಗೆ ಪ್ರತೀಕವಾಗಿದೆ. ಇದರಲ್ಲಿರುವ ಚತುರ್ಭುಜ ಸ್ಥಿರತೆಗೆ ಸೂಚಕ ತ್ರಿಕೋನದ ಮೂರು ಭುಜಗಳು ಸತ್ವ,ತಮಸ್ಸು,ರಜಸ್ಸು ತ್ರಿಗುಣಗಳ ತ್ರಿಮೂರ್ತಿಗಳನ್ನು ಸೂಚಿಸುತ್ತದೆ.ಪದ್ಮ ಬಿಡಿಸಿದ ಸುಂದರ ಪುಷ್ಪ ಸೌಂದರ್ಯಕ್ಕೆ ,ಪವಿತ್ರತೆಗೆ ಸ್ವಚ್ಛತೆಗೆ ,ಸೂರ್ಯನಿಗೆ ಲಕ್ಷ್ಮಿಯ ಸಫಲತೆಯ ಸಂಕೇತವಾಗಿದೆ. ಹೀಗೆ ಆಚಾರ,ವಿಚಾರ,ನಂಬಿಕೆ ,ಹೋಲಿಕೆಗಳನ್ನು ಸಾಮಾಜಿಕ ರೀತಿಯ ವ್ಯವಸ್ಥೆಯ ರೀತಿಯನ್ನು ರಂಗವಲ್ಲಿ,ರಂಗೋಲಿಯನ್ನು ದಿನನಿತ್ಯ ಬಿಡಿಸುವ ಸ್ತ್ರೀಯರು ಸಂಸ್ಕೃತಿಯ ರಕ್ಷಕರಾಗಿ ಕಾಣುತ್ತಾರೆ.




ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

# ಅಹಂಕಾರ, ಹಣ, ಅಧಿಕಾರ, ಧೋರಣೆ ಕೊನೆಯ ವಿಳಾಸ ರುದ್ರಭೂಮಿ



ಶಿವಬಸಪ್ಪ ಗು ಜಂಗಾಲಿ



ಸಂಜೆಯ ಕೆಂಪು ಸೂರ್ಯ ನಿಧಾನವಾಗಿ ದಿಗಂತದ ಆಚೆಗೆ ಜಾರುತ್ತಿದ್ದ. ಹಕ್ಕಿಗಳ ಗುಂಪು ಗೂಡಿನ ದಾರಿಯನ್ನು ಹಿಡಿದಿತ್ತು. ಊರಿನ ಬೀದಿಗಳಲ್ಲಿ ಇನ್ನು ಜನಜಂಗುಳಿ ಕಡಿಮೆಯಾಗಿರಲಿಲ್ಲ. ಯಾರೋ ಹೊಸ ಕಾರು ಖರೀದಿಸಿದ ಸಂತಸದಲ್ಲಿ ತೇಲುತ್ತಿದ್ದರು. ಯಾರೋ ಬಡ್ತಿ ಸಿಕ್ಕ ಹೆಮ್ಮೆಯಲ್ಲಿ ಎದೆ ಉಬ್ಬಿಸಿಕೊಂಡು ನಡೆಯುತ್ತಿದ್ದರು. ಇನ್ನೊಬ್ಬರು ಹಣದ ಲೆಕ್ಕದಲ್ಲಿ ಮುಳುಗಿದ್ದರು. ಅದೇ ಊರಿನ ತುದಿಯಲ್ಲಿ, ಎಲ್ಲ ಗದ್ದಲಗಳಿಂದ ದೂರ, ಮೌನದ ಹೊದಿಕೆ ಹೊದ್ದುಕೊಂಡು ಒಂದು ರುದ್ರಭೂಮಿ ನಿಶ್ಚಲವಾಗಿ ನಿಂತಿತ್ತು. ಅಲ್ಲಿ ಯಾರೂ ನಗುತ್ತಿರಲಿಲ್ಲ, ಯಾರೂ ಅಳುತ್ತಿರಲಿಲ್ಲ. ಮಾತಾಡುತ್ತಿದ್ದದ್ದು ಕೇವಲ ಮೌನ. ಆ ಮೌನದ ಧ್ವನಿ ಕೇಳಲು ಕಲಿತವರಿಗೆ ಬದುಕಿನ ಅತಿ ದೊಡ್ಡ ಸತ್ಯ ಅಲ್ಲೇ ಕಾಣಿಸುತ್ತದೆ.

ಮನುಷ್ಯನ ಜೀವನ ವಿಚಿತ್ರ ಪ್ರಯಾಣ. ಹುಟ್ಟುವಾಗ ಖಾಲಿ ಕೈ. ಹೋಗುವಾಗಲೂ ಖಾಲಿ ಕೈ. ಆದರೆ ಮಧ್ಯದ ಈ ಚಿಕ್ಕ ಪಯಣದಲ್ಲಿ ಎಷ್ಟೋ ಭಾರಗಳನ್ನು ಹೊತ್ತುಕೊಳ್ಳುತ್ತಾನೆ! ಅಹಂಕಾರದ ಕಿರೀಟ, ಹಣದ ಚೀಲ, ಅಧಿಕಾರದ ಕುರ್ಚಿ, ಧೋರಣೆಯ ಗೋಡೆ... ಇವೆಲ್ಲವನ್ನೂ ತನ್ನದೇ ಎಂದು ಬಿಗಿಯಾಗಿ ಅಪ್ಪಿಕೊಳ್ಳುತ್ತಾನೆ. ಕಾಲ ಮಾತ್ರ ಮೌನವಾಗಿ ನಗುತ್ತದೆ. ಏಕೆಂದರೆ ಕೊನೆಗೆ ಇವೆಲ್ಲವು ದಾರಿಯ ಮಧ್ಯೆ ಬಿಟ್ಟು ಹೋಗುವ ಸಾಮಾನುಗಳೇ ಎಂದು ಅದಕ್ಕೆ ಗೊತ್ತು.

ಅಹಂಕಾರ ಮೊದಲು ಮನುಷ್ಯನ ಕಣ್ಣನ್ನು ಮುಚ್ಚುತ್ತದೆ. ನಂತರ ಅವನ ಮನಸ್ಸನ್ನು ಮುಚ್ಚುತ್ತದೆ. ಕೊನೆಗೆ ಅವನ ಸುತ್ತಲಿನ ಜನರನ್ನು ದೂರ ಮಾಡುತ್ತದೆ. ಅಹಂಕಾರದಿಂದ ತುಂಬಿದ ವ್ಯಕ್ತಿ ಕನ್ನಡಿಯಲ್ಲಿ ತನ್ನ ಮುಖವನ್ನೇ ನೋಡುತ್ತಾನೆ; ಆದರೆ ಎದುರಿನವನ ಮನಸ್ಸನ್ನು ನೋಡಲು ಸಾಧ್ಯವಾಗುವುದಿಲ್ಲ. ಒಂದು ಚಿಕ್ಕ ಸಾಧನೆ ಸಿಕ್ಕರು ಆಕಾಶವೇ ಕೈಗೆ ಸಿಕ್ಕಂತೆ ವರ್ತಿಸುತ್ತಾನೆ. ಆದರೆ ಆಕಾಶವನ್ನು ಯಾರೂ ಜೇಬಿನಲ್ಲಿ ಇಟ್ಟುಕೊಳ್ಳಲಾರರು. ಹಾಗೆಯೇ ಅಹಂಕಾರವೂ ಯಾರ ಜೀವನವನ್ನೂ ಶಾಶ್ವತವಾಗಿ ಎತ್ತಿ ಹಿಡಿಯುವುದಿಲ್ಲ.

ಮರವನ್ನು ನೋಡಿ. ಹಣ್ಣುಗಳಿಂದ ತುಂಬಿದ ಕೊಂಬೆ ಎಂದಿಗು ತಗ್ಗಿರುತ್ತದೆ. ಖಾಲಿ ಕೊಂಬೆಯೇ ಗಾಳಿಗೆ ಹೆಚ್ಚು ಅಲುಗಾಡುತ್ತದೆ. ಪ್ರಕೃತಿ ಪ್ರತಿದಿನ ಈ ಪಾಠ ಹೇಳುತ್ತದೆ. ಆದರೆ ಮನುಷ್ಯ ಮಾತ್ರ ಕೇಳುವುದಿಲ್ಲ. ಅವನು ಎತ್ತರಕ್ಕೆ ಹೋದಂತೆ ತಲೆ ಎತ್ತುತ್ತಾನೆ; ಮರ ಎತ್ತರಕ್ಕೆ ಬೆಳೆದಂತೆ ನೆರಳು ನೀಡುತ್ತದೆ. ಅದಕ್ಕೇ ಮರವನ್ನು ಜನ ನೆನಪಿಸಿಕೊಳ್ಳುತ್ತಾರೆ; ಅಹಂಕಾರಿಯನ್ನು ಅಲ್ಲ.

ಹಣದ ಬಗ್ಗೆ ಮಾತನಾಡುವಾಗ ನಾವು ಎರಡು ಮುಖಗಳನ್ನು ನೋಡಬೇಕು. ಒಂದು ಮುಖದಲ್ಲಿ ಅದು ಹಸಿದ ಹೊಟ್ಟೆಗೆ ಅನ್ನವಾಗುತ್ತದೆ. ಅನಾಥ ಮಗುವಿಗೆ ಶಿಕ್ಷಣವಾಗುತ್ತದೆ. ರೋಗಿಗೆ ಔಷಧಿಯಾಗುತ್ತದೆ. ಮತ್ತೊಂದು ಮುಖದಲ್ಲಿ ಅದೇ ಹಣ ಸಂಬಂಧಗಳ ನಡುವೆ ಗೋಡೆಯಾಗುತ್ತದೆ. ಸಹೋದರರನ್ನು ಬೇರ್ಪಡಿಸುತ್ತದೆ. ಸ್ನೇಹವನ್ನು ಮಾರಾಟ ಮಾಡಿಸುತ್ತದೆ. ಮನೆಯನ್ನು ಅರಮನೆಯನ್ನಾಗಿ ಮಾಡಬಹುದು; ಆದರೆ ಮನಸ್ಸನ್ನು ಮನೆಯನ್ನಾಗಿ ಮಾಡಲು ಸಾಧ್ಯವಿಲ್ಲ.

ಒಂದು ನೋಟನ್ನು ಕೈಯಲ್ಲಿ ಹಿಡಿದಾಗ ಅದರ ಬೆಲೆ ಗೊತ್ತಾಗುತ್ತದೆ. ಆದರೆ ಒಂದು ಸಂಬಂಧ ಕೈಯಿಂದ ಜಾರಿದಾಗ ಅದರ ಮೌಲ್ಯ ಅರಿವಾಗುತ್ತದೆ. ದುಃಖದ ಸಂಗತಿ ಏನೆಂದರೆ, ಹೆಚ್ಚಿನವರು ಹಣದ ಲೆಕ್ಕವನ್ನು ಪ್ರತಿದಿನ ನೋಡುತ್ತಾರೆ; ಸಂಬಂಧಗಳ ಲೆಕ್ಕವನ್ನು ಮಾತ್ರ ಕೊನೆಯ ಕ್ಷಣದಲ್ಲಿ ನೆನಪಿಸಿಕೊಳ್ಳುತ್ತಾರೆ.

ಅಧಿಕಾರ ಎನ್ನುವುದು ಹರಿಯುವ ನದಿಯ ನೀರಿನಂತೆ. ಇಂದು ಈ ದಡದಲ್ಲಿರುತ್ತದೆ, ನಾಳೆ ಇನ್ನೊಂದು ದಡಕ್ಕೆ ಹರಿದು ಹೋಗುತ್ತದೆ. ಅಧಿಕಾರ ಬಂದಾಗ ಜನರು ಸುತ್ತ ಸೇರುತ್ತಾರೆ. ಅಧಿಕಾರ ಹೋದಾಗ ನಿಜವಾದವರು ಮಾತ್ರ ಉಳಿಯುತ್ತಾರೆ. ಆದ್ದರಿಂದ ಕುರ್ಚಿಯನ್ನು ಪ್ರೀತಿಸುವುದಕ್ಕಿಂತ ಕುಳಿತಿರುವ ಮನುಷ್ಯನ ಗುಣವನ್ನು ಬೆಳೆಸಿಕೊಳ್ಳಬೇಕು. ಕುರ್ಚಿ ಉಳಿಯುವುದಿಲ್ಲ; ಗುಣ ಮಾತ್ರ ಜನರ ನೆನಪಿನಲ್ಲಿ ಬದುಕುತ್ತದೆ.

ಒಮ್ಮೆ ಇತಿಹಾಸದ ಪುಟಗಳನ್ನು ತಿರುಗಿಸಿ ನೋಡಿ. ಎಷ್ಟೋ ಸಾಮ್ರಾಟರು, ರಾಜರು, ದಂಡನಾಯಕರು, ಶ್ರೀಮಂತರು ಕಾಲದ ಹೊಳೆಯಲ್ಲಿ ಕರಗಿ ಹೋಗಿದ್ದಾರೆ. ಒಮ್ಮೆ ಅವರ ಹೆಸರನ್ನು ಕೇಳಿದರೆ ಜನರು ತಲೆ ಬಾಗುತ್ತಿದ್ದರು. ಇಂದು ಅವರ ಸಮಾಧಿಗಳ ಮೇಲೆ ಹುಲ್ಲು ಬೆಳೆದಿದೆ. ಕಾಲ ಯಾರಿಗೂ ವಿಶೇಷ ರಿಯಾಯಿತಿ ಕೊಡುವುದಿಲ್ಲ. ಅದು ರಾಜನಿಗೂ ಒಂದೇ ಹೆಜ್ಜೆ ಹಾಕುತ್ತದೆ; ರಂಕನಿಗೂ ಅದೇ ಹೆಜ್ಜೆ ಹಾಕುತ್ತದೆ.

ಧೋರಣೆ ಎಂಬುದು ಮನುಷ್ಯನ ನಿಜವಾದ ಆಭರಣ. ದುಬಾರಿ ಬಟ್ಟೆ, ಚಿನ್ನದ ಸರ, ದೊಡ್ಡ ಮನೆ, ಐಷಾರಾಮಿ ಕಾರು ಇವೆಲ್ಲ ಹೊರಗಿನ ಅಲಂಕಾರಗಳು. ಆದರೆ ಮಾತಿನ ಸೌಜನ್ಯ, ಹೃದಯದ ಕರುಣೆ, ಕಣ್ಣಿನ ಪ್ರೀತಿ, ನಡವಳಿಕೆಯ ವಿನಯ ಇವು ಒಳಗಿನ ಸೌಂದರ್ಯ. ಹೊರಗಿನ ಸೌಂದರ್ಯ ಕಾಲದೊಂದಿಗೆ ಮಸುಕಾಗುತ್ತದೆ. ಒಳಗಿನ ಸೌಂದರ್ಯ ಮಾತ್ರ ನೆನಪಾಗಿ ಉಳಿಯುತ್ತದೆ.

ನಾವು ಯಾವಾಗಲಾದರು ರುದ್ರಭೂಮಿಯಲ್ಲಿ ಕೆಲವು ಕ್ಷಣ ಮೌನವಾಗಿ ನಿಂತಿದ್ದೇವೆಯೇ? ಅಲ್ಲಿ ಹೊತ್ತಿ ಉರಿಯುವ ಚಿತೆಯ ಬೆಂಕಿ ಕೇವಲ ದೇಹವನ್ನು ಸುಡುವುದಿಲ್ಲ; ನಮ್ಮ ಅಹಂಕಾರವನ್ನು ಸುಡುತ್ತದೆ. ಅಲ್ಲಿರುವ ಬೂದಿ ಒಂದೇ ಮಾತು ಹೇಳುತ್ತದೆ "ಇಂದು ನಾನು, ನಾಳೆ ನೀನು." ಆ ಮಾತಿನಲ್ಲಿ ಬೆದರಿಕೆ ಇಲ್ಲ. ಎಚ್ಚರಿಕೆ ಮಾತ್ರ ಇದೆ.

ರುದ್ರಭೂಮಿಯ ಬಾಗಿಲು ಎಲ್ಲರಿಗೂ ಒಂದೇ ಅಗಲ. ಅಲ್ಲಿ ಯಾವುದೇ ವಿಐಪಿ ಪ್ರವೇಶವಿಲ್ಲ. ಶ್ರೀಮಂತರಿಗೆ ಬೇರೆ ದಾರಿ ಇಲ್ಲ. ಅಧಿಕಾರಿಗಳಿಗೆ ಮೀಸಲು ಆಸನವಿಲ್ಲ. ಅಲ್ಲಿಗೆ ಹೋಗುವ ಪ್ರತಿಯೊಬ್ಬರೂ ಒಂದೇ ಮೌನವನ್ನು ಹೊದ್ದುಕೊಳ್ಳುತ್ತಾರೆ. ಅದಕ್ಕಿಂತ ದೊಡ್ಡ ಸಮಾನತೆ ಈ ಜಗತ್ತಿನಲ್ಲಿ ಇನ್ನೊಂದಿಲ್ಲ.

ನಾವು ಬದುಕಿನಲ್ಲಿ ಎಷ್ಟೋ ಹೆಸರುಗಳನ್ನು ಸಂಗ್ರಹಿಸುತ್ತೇವೆ. ಯಾರೋ "ಸರ್" ಎನ್ನುತ್ತಾರೆ. ಯಾರೋ "ಮಾಲೀಕರು" ಎನ್ನುತ್ತಾರೆ. ಯಾರೋ "ಅಧಿಕಾರಿ" ಎನ್ನುತ್ತಾರೆ. ಆದರೆ ಕೊನೆಯ ಕ್ಷಣದಲ್ಲಿ ಆ ಎಲ್ಲ ಹೆಸರುಗಳು ಬಾಗಿಲಿನ ಹೊರಗೇ ಉಳಿಯುತ್ತವೆ. ಒಳಗೆ ಹೋಗುವುದು ಕೇವಲ ಒಂದು ಜೀವದ ನೆನಪು ಮಾತ್ರ.

ಒಬ್ಬ ವೃದ್ಧನು ತನ್ನ ಮೊಮ್ಮಗನಿಗೆ ಹೇಳಿದ್ದ ಕಥೆ ನೆನಪಾಗುತ್ತದೆ. "ಮಗನೇ, ಜೀವನದಲ್ಲಿ ಎರಡು ಚೀಲಗಳನ್ನು ಹೊತ್ತು ನಡೆಯಬೇಡ. ಒಂದು ಅಹಂಕಾರದ ಚೀಲ, ಇನ್ನೊಂದು ದ್ವೇಷದ ಚೀಲ. ಅವು ಭಾರವಾಗುತ್ತವೆ. ಪ್ರೀತಿಯ ಚೀಲ ಮಾತ್ರ ಎಷ್ಟು ತುಂಬಿದರೂ ಹಗುರವಾಗಿರುತ್ತದೆ." ಆ ಮಾತಿನ ಅರ್ಥ ವಯಸ್ಸಾದ ಮೇಲೆ ಅಲ್ಲ, ಬದುಕು ಕಲಿಸಿದಾಗ ಅರ್ಥವಾಗುತ್ತದೆ.

ನಾವು ಮಕ್ಕಳಿಗೆ ಆಸ್ತಿ ಬಿಟ್ಟು ಹೋಗಬೇಕೆಂದು ಬಯಸುತ್ತೇವೆ. ಅದು ತಪ್ಪಲ್ಲ. ಆದರೆ ಅದರ ಜೊತೆಗೆ ಒಳ್ಳೆಯ ಹೆಸರು, ಒಳ್ಳೆಯ ಸಂಸ್ಕಾರ, ಮಾನವೀಯತೆ ಮತ್ತು ವಿನಯವನ್ನೂ ಬಿಟ್ಟು ಹೋಗಬೇಕು. ಇಲ್ಲದಿದ್ದರೆ ಆಸ್ತಿ ಉಳಿಯಬಹುದು; ಕುಟುಂಬ ಉಳಿಯುವುದಿಲ್ಲ.

ಒಮ್ಮೆ ಯೋಚಿಸಿ. ನಿಮ್ಮ ಅಂತ್ಯಕ್ರಿಯೆಗೆ ಬಂದ ಜನರು ನಿಮ್ಮ ಬ್ಯಾಂಕ್ ಖಾತೆಯ ಬಗ್ಗೆ ಮಾತನಾಡುವುದಿಲ್ಲ. ನೀವು ಯಾರಿಗೆ ನೆರವಾದಿರಿ, ಯಾರ ಕಣ್ಣೀರು ಒರೆಸಿದಿರಿ, ಯಾರ ಬದುಕಿಗೆ ಬೆಳಕಾದಿರಿ ಎಂಬುದನ್ನೇ ನೆನಪಿಸಿಕೊಳ್ಳುತ್ತಾರೆ. ಮನುಷ್ಯನ ನಿಜವಾದ ಸಂಪತ್ತು ಅವನ ಖಾತೆಯಲ್ಲಿ ಇರುವ ಹಣವಲ್ಲ; ಅವನ ಅನುಪಸ್ಥಿತಿಯಲ್ಲಿ ಸುರಿಯುವ ಕಣ್ಣೀರು.

ಹಣ ಸಂಪಾದಿಸಿ. ಅದು ಅಗತ್ಯ. ಅಧಿಕಾರ ಪಡೆಯಿರಿ. ಅದು ಅವಕಾಶ. ಯಶಸ್ಸನ್ನು ಅಪ್ಪಿಕೊಳ್ಳಿ. ಅದು ಪರಿಶ್ರಮದ ಫಲ. ಆದರೆ ಇವೆಲ್ಲಕ್ಕಿಂತ ಮೊದಲು ಮನುಷ್ಯರಾಗಿರಿ. ಏಕೆಂದರೆ ಹಣಕ್ಕೆ ಬೆಲೆ ಇದೆ, ಅಧಿಕಾರಕ್ಕೆ ಅವಧಿ ಇದೆ, ಅಹಂಕಾರಕ್ಕೆ ಅಂತ್ಯ ಇದೆ; ಆದರೆ ಮಾನವೀಯತೆಗೆ ಕಾಲವೂ ಸೋಲುತ್ತದೆ. ಜೀವನ ಒಂದು ದೀಪದಂತೆ. ಅದು ಎಷ್ಟು ಹೊತ್ತು ಉರಿಯುತ್ತದೆ ಎನ್ನುವುದು ನಮ್ಮ ಕೈಯಲ್ಲಿಲ್ಲ. ಆದರೆ ಉರಿಯುವಷ್ಟು ಹೊತ್ತು ಎಷ್ಟು ಬೆಳಕು ಕೊಡಬೇಕು ಎನ್ನುವುದು ಮಾತ್ರ ನಮ್ಮ ಆಯ್ಕೆ. ಕತ್ತಲನ್ನು ಬೈಯುವುದಕ್ಕಿಂತ ಒಂದು ದೀಪ ಹಚ್ಚಿದರೆ ಸಾಕು. ಅಹಂಕಾರವನ್ನು ಬೆಳೆಸುವುದಕ್ಕಿಂತ ಒಂದು ನಗು ಹಂಚಿದರೆ ಸಾಕು. ಹಣವನ್ನು ರಾಶಿ ಮಾಡುವುದಕ್ಕಿಂತ ಒಂದು ಹೃದಯ ಗೆದ್ದರೆ ಸಾಕು. ಕೊನೆಗೆ, ರುದ್ರಭೂಮಿ ಬದುಕಿನ ಅಂತಿಮ ತಾಣ ಮಾತ್ರವಲ್ಲ; ಬದುಕಿನ ಮೊದಲ ಪಾಠವೂ ಹೌದು. ಅಲ್ಲಿಗೆ ಹೋಗುವ ಮೊದಲು ಆ ಪಾಠವನ್ನು ಕಲಿತವರು ನಿಜವಾಗಿಯೂ ಬದುಕಿದವರು. ಕಲಿಯದೆ ಹೋದವರು ಕೇವಲ ವರ್ಷಗಳನ್ನು ಕಳೆದವರು.

ಆದ್ದರಿಂದ ಬದುಕಿನ ದಾರಿಯಲ್ಲಿ ನಡೆಯುವಾಗ ಹೆಜ್ಜೆಗಿಂತ ಹೃದಯ ದೊಡ್ಡದಾಗಿರಲಿ. ಮಾತಿಗಿಂತ ಮಮತೆ ದೊಡ್ಡದಾಗಿರಲಿ. ಹುದ್ದೆಗಿಂತ ವ್ಯಕ್ತಿತ್ವ ದೊಡ್ಡದಾಗಿರಲಿ. ಹಣಕ್ಕಿಂತ ಹೃದಯ ಶ್ರೀಮಂತವಾಗಿರಲಿ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,